TEXT PROBLEM
WITHIN THE
BOOK ONLY

UNIVERSAL
LIBRARY

OU_200142

UNIVERSAL
LIBRARY

# ಕಳಸಾಪುರದ ಹುಡುಗರು

[ ಸ್ವತಂತ್ರ ಸಾಮಾಜಿಕ ಕಾದಂಬರಿ ]



K 83
K 412 K

ಮತಿಘಟ್ಟ ಕೃಷ್ಣಮೂರ್ತಿ

# ಕಳಸಾಪುರದ ಹುಡುಗರು

[ ಸ್ವತಂತ್ರ ಸಾಮಾಜಿಕ ಕಾದಂಬರಿ ]

ಬರೆದವರು

ಮತಿಘಟ್ಟ ಕೃಷ್ಣಮೂರ್ತಿ

ಪ್ರಕಾಶಕರು

ಎಸ್. ಎಸ್. ಎನ್. ಬುಕ್ ಡಿಪೋ

ಸಿಟಿ ಮಾರ್ಕೆಟ್, ಬೆಂಗಳೂರು ಸಿಟಿ

ಒಡೆತನ
ಬರೆದವರದು

ಬೆಲೆ
ರೂ. ೧

Checked 1969

# ಮೊದಲ ಮಾತು

ಈಗ ಎಪ್ಪತ್ತೈದು ವರ್ಷಗಳ ಹಿಂದೆ ಕಳಸಾಪುರ ಸ್ವಯಂಪೂರ್ಣವಾಗಿತ್ತು. ಆ ಊರಿನ ಹುಡುಗರಲ್ಲಿ ಒಗ್ಗಟ್ಟು, ಧೈರ್ಯ, ಸಾಹಸ, ದೈವ ಭಕ್ತಿ, ಊರಿಗಾಗಿ ವ್ಯಕ್ತಿಯ ತ್ಯಾಗ ಮೊದಲಾದ ಸುಗುಣಗಳಿದ್ದುವು. ನಿಜ. ಆದರೆ ಹಿರಿಯರು ತಮ್ಮ ಮಕ್ಕಳ ಆ ಗುಣಗಳನ್ನು ಬೆಳೆಸಲು ತಕ್ಕ ಕಾರ್ಯಕ್ರಮ ಕೈಗೊಳ್ಳಲಿಲ್ಲ. ಪರಿಣಾಮವಾಗಿ ಕಳಸಾಪುರ ಅವನತಿ ಹೊಂದಿತು.

ಇದು ಕೇವಲ ಕಳಸಾಪುರದ ಕಥೆಯಲ್ಲ, ನಮ್ಮ ಎಲ್ಲ ಹಳ್ಳಿಗಳ ಕಥೆ. ಹಿಂದಿನ ತಲೆಮಾರಿನ ಹುಡುಗರ ಸಾಹಸ ಜೀವನ, ಇಂದಿನ ಹುಡುಗರ ವಿಚಾರವಿವೇಚನಾಪರಿಜ್ಞಾನ, ಮುಂದಿನ ಜನಾಂಗವನ್ನು ಕಟ್ಟುವುದಕ್ಕೆ ಸಾಧನ ಆದಾಗಬೇಕು. ಆಗ ನಮ್ಮ ನಾಡು ತಲೆ ಎತ್ತಿ ನಿಂತೀತು. ಇದಕ್ಕಾಗಿ ನಾಡಿಗೆ ನಾಡೇ ದುಡಿಯಬೇಕು. ಅದರ ಸುಳಿವು ಹೊಳವು ಈ ಕಥೆಯಲ್ಲಿ ಮಿಂಚಿದೆ.

ಸರ್ಕಾರ ಸಾರ್ವಜನಿಕರ ಸಹಕಾರದಿಂದ ಹಳ್ಳಿಗಳಲ್ಲಿ ಈಗಾಗಲೇ ಕತ್ತಲೆ ಹರಿದು ಮುಂಬೆಳಗು ತೋರುತ್ತಿದೆ. ಆ ಮಹಾ ಸುಪ್ರಭಾತವನ್ನು ಕಂಡು ಆನಂದಿಸಿದ ಫಲವಾಗಿ ರೂಪುವೆತ್ತುದು ಈ ಪುಟ್ಟ ಪುಸ್ತಕ. ಇದನ್ನು ಬೆಳಕಿಗೆ ತಂದ ಎಸ್. ಎಸ್. ಎನ್. ಬುಕ್ ಡಿಪ್ಪೋ ಮಾಲೀಕರಾದ ಶ್ರೀ. ಎಂ. ರಾಮರಾವ್ ಅವರಿಗೂ, ನನಗೆ ಸಲಹೆ ಸೂಚನೆಗಳನ್ನಿತ್ತು ಸಹಾಯಮಾಡಿದ ಶ್ರೀಗಳಾದ ಎ. ಕೆ. ಪುಟ್ಟರಾಮು, ಬಿ.ಎ., ಆರ್. ಎಸ್. ರಾಮರಾವ್, ಎಂ.ಎ., ಪಿ. ಆರ್. ರಾಘವೇಂದ್ರಾಚಾರ್, ಬಿ.ಎ., ಬಿ. ಶ್ರೀ. ಪಾಂಡುರಂಗರಾವ್ ಇವರಿಗೂ ನನ್ನ ಅಭಿವಂದನೆಗಳು ಸಲ್ಲಬೇಕಾಗಿದೆ.

ಪಾರ್ಥಿವ ಸಂಕ್ರಾಂತಿ
ಬೆಂಗಳೂರು

**ಮತಿಘಟ್ಟ ಕೃಷ್ಣಮೂರ್ತಿ**

Checked 19..

# ಸಮರ್ಪಣೆ

ಹಾಸನದ ಜಿಲ್ಲಾಧಿಕಾರಿಗಳಾಗಿದ್ದಾಗ 'ಹಳೆಯ ಬೀಡನ್ನು'

'ಹೊಸ ಬೀಡಾಗಿ' ಮಾಡಲು ಶ್ರಮಿಸಿದ

ವಿದ್ಯಾಖಾತೆಯ ಕಾರ್ಯದರ್ಶಿಗಳಾದ

**ಶ್ರೀಮಾನ್ ಎನ್. ಎಸ್. ಹಿರಣ್ಣಯ್ಯ, ಎಂ. ಎ.**

ಅವರಿಗೆ

# — ಪರಿವಿಡಿ —


| | | | | ಪುಟ |
|---|---|---|---|---|
| ೧. | ದಾರಿಹೋಕರು | — | — | ೧ |
| ೨. | ಬಂದನಾ ಹುಲಿರಾಯನು | — | — | ೪ |
| ೩. | ಕಳಸಾಪುರದಲ್ಲಿ ರಾಮಚಂದ್ರ | — | — | ೮ |
| ೪. | ಹುಡುಗರ ಹೊಡೆದಾಟ | — | — | ೧೪ |
| ೫. | ವರಮಹಾಲಕ್ಷ್ಮಿಯ ಹಬ್ಬ | — | — | ೨೩ |
| ೬. | ಇದಿರಾಳಿಗಳು | — | — | ೨೯ |
| ೭. | ಸೆರೆ ಸಿಕ್ಕಿದ ಸೀತಾರಾಮು | — | — | ೩೩ |
| ೮. | ರಾಮಚಂದ್ರನ ಸಾಹಸ | — | — | ೩೯ |
| ೯. | ಕಳಸಾಪುರದಲ್ಲಿ ಕೋಲಾಹಲ | — | — | ೪೫ |
| ೧೦. | ಉಪಾಯ | — | — | ೪೯ |
| ೧೧. | ಅಡಾವುಡಿ | — | — | ೫೫ |
| ೧೨. | ದೆವ್ವದ ಮನೆ | — | — | ೫೭ |
| ೧೩. | ಜೇನು ಅಳಿಸಿದುದು | — | — | ೬೪ |
| ೧೪. | ಗುರುಗಳು | — | — | ೬೯ |
| ೧೫. | ಶಿಕ್ಷಣ – ಶಿಕ್ಷೆ | — | — | ೭೩ |
| ೧೬. | ಬಿಡುಗಡೆ | — | — | ೭೯ |
| ೧೭. | ಸ್ವರ್ಗಸ್ಥ ಸೀತಾರಾಮು | — | — | ೮೫ |
| ೧೮. | ರಾಮಚಂದ್ರನ ಮದುವೆ | — | — | ೯೦ |
| ೧೯. | ಕಳಸಾಪುರದ ಕಥೆ | — | — | ೯೨ |
| ೨೦. | ಬದಲಾವಣೆ | — | — | ೯೪ |
| ೨೧. | ಐವತ್ತು ವರ್ಷಗಳಲ್ಲಿ | — | — | ೯೯ |
| ೨೨. | ಇಂದಿನ ಕಳಸಾಪುರ | — | — | ೧೦೨ |
| ೨೩. | ಮುಂಬೆಳಗು | — | — | ೧೦೯ |

# ಕಳಸಾಪುರದ ಹುಡುಗರು

## — ದಾರಿಹೋಕರು —

ಈಗ ಎಪ್ಪತ್ತೈದು ವರ್ಷಗಳ ಹಿಂದೆ, ಒಂದು ಸಂಜೆ, ಸುಮಾರು ಐದೂವರೆ ಘಂಟೆಯ ಸಮಯದಲ್ಲಿ, ಕಳಸಾಪುರದ ಪಶ್ಚಿಮಕ್ಕೆ ನಾಲ್ಕು ಮೈಲಿ ದೂರದಲ್ಲಿರುವ ಕಣಿವೆಯಲ್ಲಿ, ಮುದುಕರೊಬ್ಬರು ಕುದುರೆಯ ಮೇಲೆ ಕುಳಿತು ಕಳಸಾಪುರದ ಕಡೆ ಬರುತ್ತಿದ್ದರು. ಅವರ ವಯಸ್ಸು ಸುಮಾರು ಐವತ್ತೈದು ಅಥವಾ ಅರವತ್ತು ವರ್ಷಗಳಿರಬಹುದು. ಮುಖವು ದೊಡ್ಡದಾಗಿ ತೇಜಸ್ಸಿನಿಂದ ತುಂಬಿತ್ತು. ಗಡ್ಡ ಮೀಸೆಗಳು ನೆರೆತುಹೋಗಿದ್ದವು. ಗಡ್ಡವು ಎದೆಯವರೆಗೂ ಬೆಳೆದಿದ್ದು ನೋಡುವವರಿಗೆ ಒಂದು ಪೂಜ್ಯ ಭಾವನೆಯನ್ನುಂಟು ಮಾಡುತ್ತಿದ್ದುದಲ್ಲದೆ, ಮುಖಕ್ಕೂ ಒಂದು ಅಪೂರ್ವವಾದ ಕಾಂತಿಯನ್ನು ಕೊಟ್ಟಿದ್ದಿತು. ಮೂಗು ನೀಳವಾಗಿ ತುದಿಯಲ್ಲಿ ಸ್ವಲ್ಪ ಬಾಗಿದ್ದಿತು. ಎದೆಯು ವಿಶಾಲವಾಗಿಯೂ ತೋಳುಗಳು ಬಲಿಷ್ಠವಾಗಿಯೂ ಕಾಣುತ್ತಿದ್ದವು.

ಮಂಡಿಯ ತನಕ ಬರುವ ಒಂದು ಪಂಚೆ. ಹೆಗಲಮೇಲೆ ಹೊದೆದಿದ್ದ ಒಂದು ಉತ್ತರೀಯ; ತಲೆಗೆ ಸುತ್ತಿದ ಒಂದು ಶಲ್ಯ. ಇವಿಷ್ಟೇ ಅವರು ಹಾಕಿಕೊಂಡಿದ್ದ ಬಟ್ಟೆಗಳು. ಈ ಬಟ್ಟೆಗಳೆಲ್ಲವೂ ಕೈಮಗ್ಗದವು. ಲಾಡಿಯ ಲಗಾಮನ್ನು ಹಿಡಿದಿದ್ದ ಅವರ ಕೈಗಳಲ್ಲಿ ಪವಿತ್ರದ ಉಂಗುರಗಳು ಹೊಳೆಯುತ್ತಿದ್ದವು. ಅವರು ಸಣ್ಣ ದನಿಯಲ್ಲಿ ಕೆಲವು ಸಂಸ್ಕೃತ ಶ್ಲೋಕಗಳನ್ನು ಹೇಳುತ್ತ, ಒಳ್ಳೆಯ ಜಾತಿಯದಲ್ಲದಿದ್ದರೂ ಬಲಿಷ್ಠವಾಗಿದ್ದ ತಟ್ಟನ್ನು ನಿಧಾನವಾಗಿ ಆ ಕಣಿವೆಯಲ್ಲಿ ಇಳಿಸಿಕೊಂಡು ಬರುತ್ತಿದ್ದರು.

ಇದಿರಿಗೆ ನೋಡಿದಕೂಡಲೇ ಕುದುರೆಯ ಮೇಲೆ ಬರುತ್ತಿದ್ದವರು ಒಬ್ಬರೇ ಎಂದು ತೋರಿದರೂ, ನಿಜವಾಗಿ ಆ ಕುದುರೆಯಮೇಲೆ ಮತ್ತೊಬ್ಬ ಸವಾರನಿದ್ದನು. ದಾರಿಯ ಒಂದು ಪಕ್ಕಕ್ಕೆ ನಿಂತು ನೋಡಿದಾಗ ಅವನು ಕಾಣುತ್ತಿದ್ದನು. ಮುಂದುಕರ ಹಿಂದೆ, ಕುದುರೆಯ ಮೇಲೆ ಕುಳಿತಿದ್ದ ಆ ಎರಡನೆಯ ವ್ಯಕ್ತಿ ಸುಮಾರು ಹದಿಮೂರು ಹದಿನಾಲ್ಕು ವರ್ಷ ವಯಸ್ಸಿನ ಒಬ್ಬ ಹುಡುಗ. ಅವನ ಬೆಳವಣಿಗೆಯನ್ನು ನೋಡಿದರೆ ಇನ್ನೂ ಎರಡು ವರ್ಷ ಹೆಚ್ಚೆಂದರೂ ಒಪ್ಪುವುದು. ಆದರೆ ಮುಖದ ಭಾವವನ್ನು ನೋಡಿದರೆ ಇನ್ನೂ ಒಂದು ವರ್ಷ ಕಡಿಮೆಯೆಂದು ಹೇಳಬಹುದು. ಮುದ್ದಾದ ಮುಖ; ದೊಡ್ಡದಾದ, ಸ್ನೇಹಪೂರ್ಣವಾದ ಹೊಳೆಯುವ ಕಣ್ಣುಗಳು; ತುಂಬುಗೆನ್ನೆ; ನೀಳವಾದ ಮಾಟವಾದ ಮೂಗು; ಬಲ್ಲಿನಂತೆ ಬಾಗಿದ್ದ ತುಟಿ; ಪುಟ್ಟದಾದ ಬಾಯಿ; ಸ್ವಲ್ಪ ಚೂಪಾದ ಗಲ್ಲ; ಗಲ್ಲದಮೇಲೆ ಸದಾ ನಲಿದಾಡುವ ಎಳೆನಗು; ನಕ್ಕರೆ ಸಾಲಾಗಿ, ಶುಭ್ರವಾಗಿ ಹೊಳೆಯುವ ಹಲ್ಲುಗಳು; ಇವೆಲ್ಲವೂ ಆ ಹುಡುಗನ ಮುಖದ ತೇಜಸ್ಸನ್ನು ಹೆಚ್ಚಿಸಿ ನೋಡುವವರಿಗೆ ಸುಂದರಿಯಾದ ಹುಡುಗಿಯೊಬ್ಬಳಿಗೆ ಗಂಡುಡುಗೆಯನ್ನು ಹಾಕಿದಂತೆ ತೋರುತ್ತಿತ್ತು. ಆದರೆ ಕಣ್ಣುಗಳಲ್ಲಿದ್ದ ಸ್ಥಿರತೆ, ರಟ್ಟೆಯಲ್ಲಿ ಉಬ್ಬಿಬೆಳೆಯುತ್ತಿದ್ದ ಮಾಂಸಖಂಡ, ಎದೆಯಮೇಲೆ ಹೊತ್ತ ಉತ್ತರೀಯದ ಸಂದಿನಿಂದ ಜೋಲಾಡುವ ಜನಿವಾರ,—ಇವು ಆ ವ್ಯಕ್ತಿಯನ್ನುಹೆಣ್ಣೆಂದು ಯೋಚಿಸಲು ಅಡ್ಡಿಪಡಿಸುತ್ತಿದ್ದವು. ಅದಕ್ಕೂ ಹೆಚ್ಚಾಗಿ, ಹೆಣ್ಣಿಗೆ ಇರಬೇಕಾದ ಜಡೆಯಾಗಲೀ ತುರುಬಾಗಲೀ ಇಲ್ಲ! ಅದರ ಬದಲು ಕುದುರೆಯು ಆ ಕಲ್ಲುದಾರಿಯಲ್ಲಿ ಕುಲುಕಿನಿಂದ ಇಳಿಯುತ್ತಿದ್ದಂತೆಲ್ಲಾ ನೆತ್ತಿಯಲ್ಲಿ ಒಂದು ಸಿಳ್ಳಿ ಜುಟ್ಟು ಹಾರಾಡುತ್ತಿತ್ತು.

ಆಗ ಶ್ರಾವಣಮಾಸ. ವರ್ಷಋತು ಮೊದಲಾಗಿತ್ತು. ಎಲ್ಲೆಲ್ಲೂ ಗಿಡಮರಗಳೂ, ಪೊದೆ ಬಳ್ಳಿಗಳೂ, ಸೊಂಪಾಗಿ ಬೆಳೆದಿದ್ದವು. ಗುಡ್ಡವೆಲ್ಲ ಹಸುರಿನಿಂದ ಮುಚ್ಚಿದಂತೆ ಕಾಣುತ್ತಿತ್ತು. ಕಾಡುಮಲ್ಲಿಗೆ, ಕಾಡುಗುಲಾಬಿ, ಜಾಜಿ, ಸುರಹೊನ್ನೆ, ಕೇದಿಗೆ ಮೊದಲಾದ ಕಾಡುಹೂಗಳು ಅರಳಿ ವಾಸನೆಯನ್ನು ಎಲ್ಲ ಕಡೆಗೂ ಬೀರುತ್ತಿದ್ದವು. ಹಕ್ಕಿಗಳೆಲ್ಲಾ ಸಂತೋಷದಿಂದ ಚಿಲಿಪಿಲಿಗುಟ್ಟಿ ಕೂಗುತ್ತಾ ಹಾರಾಡುತ್ತಿದ್ದವು. ಆ ಸಂಜೆ ಬಿಸಿಲಿನಲ್ಲಿ

ಆ ಕಾಡಿನಲ್ಲಿ ಎತ್ತನೋಡಿದರೂ ಸುಂದರವಾದ ನೋಟವೇ ಕಾಣುತ್ತಿತ್ತು ।

ಆ ದಾರಿಹೋಕರು ಬರುತ್ತಿದ್ದ ಕಣಿವೆಗೆ "ರಂಗನ ಕಣಿವೆ" ಅಥವಾ "ಕಳಸಾಪುರದ ಕಣಿವೆ" ಎಂದು ಹೆಸರು. ಕಳಸಾಪುರಕ್ಕೆ ಹತ್ತಿರವಾಗಿದ್ದುದರಿಂದ ಕಳಸಾಪುರದ ಕಣಿವೆಯೆಂದೂ, ರಂಗನಗಿರಿಯ ಪಕ್ಕದಲ್ಲಿದ್ದುದರಿಂದ ರಂಗನ ಕಣಿವೆಯೆಂದೂ ಅದಕ್ಕೆ ಎರಡು ಹೆಸರು. ಕಳಸಾಪುರಕ್ಕೆ ಬರುತ್ತ ಕಣಿವೆಯ ಎಡಕ್ಕೆ ರಂಗನಗಿರಿ ಸಿಕ್ಕುತ್ತದೆ ಆ ಗಿರಿಯಮೇಲೆ ರಂಗಸ್ವಾಮಿಯ ದೇವಸ್ಥಾನವಿದೆ. ಕಣಿವೆಯ ಬಲಭಾಗದಲ್ಲಿ ಗುಡ್ಡಗಳಿಲ್ಲದಿದ್ದರೂ ಕಾಡು ಬೆಳೆದು ಸಣ್ಣ ಸಣ್ಣ ಮರಗಳಿಂದಲೂ ಕುರುಚಲು ಗಿಡಗಳಿಂದಲೂ, ದಟ್ಟವಾದ ಮುಳ್ಳುಪೊದೆಗಳಿಂದಲೂ ದುರ್ಗಮವಾಗಿ ಬಳಿಯಬೀಡಿನ ಕಡೆಗೆ ಹಬ್ಬಿಹೋಗಿರುವುದು.

ಹಚ್ಚನೆಯ ಹೊದಿಕೆಯನ್ನು ಹೊದ್ದು ಇದಿರಿಗೆ ಹಬ್ಬಿದ ಬೆಟ್ಟ, ಅದರ ಮೇಲೆ ಮೆಲ್ಲಗೆ ತೇಲುತ್ತಿದ್ದ ಹಲವು ತರದ ಮೋಡಗಳು, ಅವುಗಳಲ್ಲಿ ಹೊಳೆಯುತ್ತಿದ್ದ ಸಂಜೆಯ ಕೆಂಬಣ್ಣ, ಹಕ್ಕಿಗಳ ಅನೇಕ ದನಿಯ ಕೂಗು, ಹೂವುಗಳ ಸುವಾಸನೆ —ಇವೆಲ್ಲ ಆ ಹುಡುಗನಿಗೆ ಅತ್ಯಂತ ಸಂತೋಷವನ್ನುಂಟು ಮಾಡುತ್ತಿದ್ದವು. ಪ್ರಕೃತಿಯ ಆ ಸೌಂದರ್ಯದಿಂದ ಉತ್ತೇಜಿತನಾಗಿ ಅವನು ಮೆಲ್ಲಗೆ ಹಾಡಲು ಮೊದಲು ಮಾಡಿದನು. ಆದರೆ, ತಾನು ಏನು ಹೇಳುತ್ತಿರುವನೆಂಬುದರ ಅರಿವೇ ಅವನಿಗಿರಲಿಲ್ಲ. ಅವನ ಬಾಯಿಯಿಂದ ಭಾರತದ ಪ್ರಾರ್ಥನಾ ಪದ್ಯವು ಮೆಲ್ಲಗೆ ಹೊರಬಿದ್ದಿತು.

ಶ್ರೀ ವನಿತೆಯರಸನೆ ವಿಮಲರಾ
ಜೀವ ಪೀಠನಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನ ನಿಕರ ದಾತಾರ
ರಾವಣಾಸುರ ಮಥನ ಶ್ರವಣಸು
ಧಾವಿನೂತನ ಕಥನಕಾರಣ
ಕಾವುದಾನತ ಜನವ ಗದುಗಿನ ವೀರನಾರಾಯಣ ॥

ಮೆಲ್ಲಗೆ ಮೊದಲುಮಾಡಿದರೂ ಕ್ರಮೇಣ ದನಿಯನ್ನು ದೊಡ್ಡದು ಮಾಡಿದನು. ಪದ್ಯವು ಪೂರ್ಣವಾಗುವ ಹೊತ್ತಿಗೆ ಹುಡುಗನು ಎಚ್ಚೆತ್ತು, ಮುದುಕರ ಕಡೆಗೆ ನೋಡಿ, ಅವರು ಪದ್ಯದ ಮೇಲೆ ಗಮನವಿತ್ತುದನ್ನು ತಿಳಿದು ಮೆಲ್ಲಗೆ ನಕ್ಕು ತಲೆತಗ್ಗಿಸಿದನು. ಮುದುಕರೂ ಮೆಲ್ಲಗೆ ನಕ್ಕು,

'ರಾಮಚಂದ್ರ, ಮುಂದೆ ಹೇಳು. ನೀನು ಚೆನ್ನಾಗಿ ಹೇಳುವೆ' ಎಂದು ಪ್ರೋತ್ಸಾಹಿಸಿದರು. ಮುದುಕರ ಮಾತಿನಿಂದ ಉತ್ತೇಜಿತನಾದ ರಾಮಚಂದ್ರನು ಸ್ವಲ್ಪಗಟ್ಟಿಯಾಗಿ ಇನ್ನೂ ಕೆಲವು ಪದ್ಯಗಳನ್ನು ಹೇಳಿ, ಆಮೇಲೆ 'ಅಜ್ಜಯ್ಯ, ಕಳಸಾಪುರ ಇನ್ನೂ ಎಷ್ಟು ದೂರ?' ಎಂದು ಕೇಳಿದನು. 'ಇನ್ನೇನು ಹತ್ತಿರ ಬಂದಿದ್ದೇವೆ. ಈ ಗುಡ್ಡದ ಆಚೆ ಬುಡದಲ್ಲಿದೆ' ಎಂದು ಮುದುಕರು ಉತ್ತರ ಕೊಟ್ಟರು.

## ಬಂದನಾ ಹುಲಿರಾಯನು

ಅವರು ಆ ಮಾತು ಈ ಮಾತು ಆಡುತ್ತ ಕಣಿವೆಯನ್ನಿಳಿದು ಬರುತ್ತಿದ್ದರು. ರಾಮಚಂದ್ರನಿಗೆ ಹಸಿವಾಗಿತ್ತು. ಅಲ್ಲದೆ, ಹಸುಬೆಯಲ್ಲಿದ್ದ ತಿಂಡಿಯ ಗಂಟು ದಾರಿಯುದ್ದಕ್ಕೂ ಅವನಿಗೆ ಜ್ಞಾಪಕ ಬರುತ್ತಿತ್ತು. ಆ ಗಂಟನ್ನು ಸಾಧ್ಯವಾದಷ್ಟು ಸಣ್ಣದು ಮಾಡುವವರೆಗೂ ಅವನಿಗೆ ಸಮಾಧಾನವಿಲ್ಲ. ಆದುದರಿಂದ ಕಣಿವೆಯಲ್ಲಿ ಹರಿಯುತ್ತಿದ್ದ ಒಂದು ಹಳ್ಳದ ಹತ್ತಿರ ಬರುತ್ತಲೇ ರಾಮಚಂದ್ರ ಅಜ್ಜಯ್ಯನಿಗೆ ತನ್ನ ಅಭಿಲಾಷೆಯನ್ನು ತಿಳಿಸಿದನು. ಮುದುಕರಿಗೆ ಆ ನಡುಗುಡ್ಡದಲ್ಲಿ ಆ ಸಂಜೆಯ ಸಮಯದಲ್ಲಿ ಪಯಣವನ್ನು ನಿಧಾನಮಾಡುವುದಕ್ಕೆ ಇಷ್ಟವಿರಲಿಲ್ಲ. ಹಳ್ಳವಿದ್ದ ಆ ಜಾಗವು ದೆವ್ವಗಳ ಸಂಚಾರಕ್ಕೂ ಕಳ್ಳತನಕ್ಕೂ ಹೆಸರಾಗಿತ್ತು. ಆದರ ಆ ಕಾರಣಗಳಿಗಾಗಿ ಅವರಿಗೆ ದಿಗಿಲಿರಲಿಲ್ಲ. ಅವರಿಗಿದ್ದ ದಿಗಿಲೇ ಬೇರೆ. ಹುಲಿ, ಕಿರುಬ, ತೋಳ ಮೊದಲಾದ ಕಾಡುಮೃಗಗಳು ಆಕಡೆ ಬಹಳ ಅಲ್ಲದೆ, ಅಂಥ ಮಬ್ಬುಸಂಜೆಯಲ್ಲೇ ಅವುಗಳ ಸಂಚಾರ. ಜೊತೆಗೆ, ಕುದುರೆಯ ವಾಸನೆ ದೂರದ ಹುಲಿಯನ್ನೂ ಹತ್ತಿರ ಕರೆಯುತ್ತದೆ. ಈ ಕಾರಣಗಳಿಂದ ಆದಷ್ಟು ಬೇಗ ಊರು ಸೇರಬೇಕೆಂದಿದ್ದರು. ಆದರೆ, ರಾಮಚಂದ್ರ ಹಸಿವೆನ್ನಲು ಅವರು ತಮ್ಮ ಮನಸ್ಸು ಬದಲಾಯಿಸಿದರು. ಚಿಕ್ಕಮಗಳೂರಿನಿಂದ ಇಬ್ಬರನ್ನು ಕೂರಿಸಿಕೊಂಡು ಬಂದ ಕುದುರೆಗೂ ಸ್ವಲ್ಪ ಬಿಡುವು ಬೇಕೆಂದುಕೊಂಡರು. ಅದರಿಂದ ಹಳ್ಳವನ್ನು ದಾಟಿ, ಇಬ್ಬರೂ ಕುದುರೆಯಿಂದ ಇಳಿದು, ಹಸುಬೆಯ ಹೇರನ್ನು ಕೆಳಗಿಳಿಸಿ, ಚೆನ್ನಾಗಿ ಹುಲ್ಲು ಬೆಳೆದಿದ್ದ ಕಡೆ ಕುದುರೆಯನ್ನು ಕಟ್ಟಿಹಾಕಿದರು. ಇಬ್ಬರೂ ಹಳ್ಳದಲ್ಲಿ ಕೈಕಾಲು

ತೊಳೆದುಕೊಂಡರು ; ಮತ್ತು ಹಸುಬೆಯನ್ನು ಬಿಚ್ಚಿ ಅಡಕೆ ಹಾಳೆಯ ಪೊಟ್ಟಣಗಳಿಂದ ಮೊಸರವಲಕ್ಕಿ, ಕಲ್ಲುತಂಬಿಟ್ಟಿನ ಉಂಡೆ, ಗುಳ್ಳಪಟಿ ಮೊದಲಾದ ತಿಂಡಿಗಳನ್ನು ರಾಮಚಂದ್ರನಿಗೆ ಕೊಟ್ಟರು. ಅವನು ತಿಂಡಿಯನ್ನು ತಿಂದು ಹಸಿವನ್ನು ಇಂಗಿಸಿಕೊಂಡಮೇಲೆ ಹಸುಬೆಯ ಚೀಲವನ್ನು ಕುದುರೆಯ ಮೇಲೆ ಹಾಕಿಕೊಂಡು, ಇಬ್ಬರೂ ಕುಳಿತು ಮುಂದಕ್ಕೆ ಹೊರಟರು.

ಅಷ್ಟುಹೊತ್ತಿಗೆ ಬಿಸಿಲು ಮರೆಯಾಗುತ್ತಿತ್ತು. ಸ್ವಲ್ಪದೂರ ಹೋಗುವುದರೊಳಗೆ ಮಬ್ಬುಗತ್ತಲೆ ಕವಿಯಿತು. ಕುದುರೆಯನ್ನು ಚುರುಕುಮಾಡಿದರು. ಹೀಗೆ ಹಳ್ಳವನ್ನು ಬಿಟ್ಟು ಅವರು ಅರ್ಧ ಮುಕ್ಕಾಲು ಮೈಲಿ ಬಂದಿರಬಹುದು. ಆಗ ಕುದುರೆಯು ಬೆದರಿ, ಕಿವಿಗಳನ್ನು ನೆಟ್ಟಗೆಮಾಡಿ ಎದುರಿಗೆ ದೃಷ್ಟಿಸಿ ನೋಡುತ್ತಾ ಕುಣಿಯಲು ಮೊದಲುಮಾಡಿತು. ಮೇಲೆ ಕುಳಿತಿರುವುದು ಸಾಧ್ಯವಾಗದೆ ಇಬ್ಬರೂ ಕೆಳಗಿಳಿದರು. ಮುದುಕರು ಕುದುರೆ ಬೆದರಿದ ಕಾರಣವನ್ನು ಊಹಿಸಿದರು. ರಾಮಚಂದ್ರನನ್ನು ಒಂದು ಕೈಯಲ್ಲೂ, ಕುದುರೆಯ ಲಗಾಮನ್ನು ಮತ್ತೊಂದು ಕೈಯಲ್ಲೂ ಹಿಡಿದುಕೊಂಡು ಮುಂದೆ ಹೊರಟರು. ಕುದುರೆ ಅಳುಕುತ್ತ ಅಳುಕುತ್ತ ಅವರ ಹಿಂದೆ ನಾಲ್ಕು ಹೆಜ್ಜೆ ಇಟ್ಟು, ಕಡೆಗೆ, ಎಷ್ಟು ಎಳೆದರೂ ಮುಂದೆ ಬರದೆ ಹಿಂದಕ್ಕೆ ತುಯ್ಯಲು ಮೊದಲುಮಾಡಿತು.

ಮುದುಕರು ದಾರಿಯ ಎರಡು ಕಡೆಗಳನ್ನೂ ಸೂಕ್ಷ್ಮವಾಗಿ ದಿಟ್ಟಿಸಿ ನೋಡಿದರು. ನೋಡಿ, ಬೆಚ್ಚಿ, ಕುದುರೆಯೊಂದಿಗೆ ರಾಮಚಂದ್ರನನ್ನೂ ಎಳೆದುಕೊಂಡು ಒಂದು ಮಾರು ಹಿಂದೆ ಸರಿದರು. ಅವರು ನಿಂತಿದ್ದ ಜಾಗಕ್ಕೆ ನಾಲ್ಕೈದು ಮಾರು ದೂರದಲ್ಲಿ, ದಾರಿ ಸ್ವಲ್ಪ ಡೊಂಕಾಗಿದ್ದ ಕಡೆಯಲ್ಲಿ, ಕುರುಚಲು ಕುರುಚಲಾಗಿ ಬೆಳೆದಿದ್ದ ಗಿಡಗಳ ಮರೆಯಲ್ಲಿ ಒಂದು ದೊಡ್ಡ ಹುಲಿ ಬೆಕ್ಕಿನಂತೆ ಹೊಂಚುಹಾಕುತ್ತ ಕುಳಿತಿದ್ದುದನ್ನು ಅವರು ನೋಡಿದರು.

ಮುದುಕರು ಕುದುರೆಯೊಡನೆ ಹಿಂದೆ ಸರಿಯುತ್ತಿದ್ದುದನ್ನು ಕಂಡು ಹುಲಿಯೂ ತಾನು ಕುಳಿತಿದ್ದ ಸ್ಥಳವನ್ನು ನಿರ್ಭೀತಿಯಿಂದ ಬಿಟ್ಟು, ಎದ್ದು ನಿಂತು, ಎರಡು ಹೆಜ್ಜೆ ಮುಂದೆ ಬಂದು, ಕುದುರೆಯಮೇಲೆ ಬೀಳಲು ಸಿದ

ವಾಗಿ ನಡುದಾರಿಯಲ್ಲಿ ಕುಳಿತುಬಿಟ್ಟಿತು. ಆ ಸಮಯದಲ್ಲಿ ಒಂದು ಹೆಜ್ಜೆ ಹಿಂದಿಡುವುದಾಗಲಿ ಒಂದು ಹೆಜ್ಜೆ ಮುಂದಿಡುವುದಾಗಲೀ ಬಹಳ ಅಪಾಯ ಕರವಾಗಿತ್ತು. ಕುದುರೆಯು ಗಡಗಡನೆ ನಡುಗುತ್ತ ಮುದುಕರನ್ನು ಒರಗಿಕೊಂಡು ಬಿಟ್ಟಿತು. ರಾಮಚಂದ್ರನನ್ನು ಎಡಗೈಲಿ ಹಿಡಿದುಕೊಂಡು ಮುದುಕರು ತಮ್ಮ ಹಿಂದೆ ನಿಲ್ಲಿಸಿಕೊಂಡಿದ್ದರು. ಅವನಿಗೆ ಬಹಳ ದಿಗಿಲಾಯಿತು. ಆದರೂ ಹುಡುಗರಿಗೆ ಸಹಜವಾದ ಕುತೂಹಲದಿಂದ ಹುಲಿಯನ್ನು ಇಣಿಕಿ ನೋಡುತ್ತಿದ್ದನು. ಮತ್ತು ಅವನಿಗೆ ಗೋವಿನ ಕಥೆಯ ನೆನಪಾಗಿ 'ಬಂದನಾ ಹುಲಿರಾಯನು' ಎಂದುಕೊಂಡನು.

ಆ ಸಂಜೆ, ಆ ನಿರ್ಜನವಾದ ಕಾಡಿನಲ್ಲಿ, ಆ ದಾರಿಹೋಕರು ಹೀಗೆ ಆಪತ್ತಿನಲ್ಲಿ ಸಿಕ್ಕಿದ್ದ ಸಂದಿಗ್ಧಸಮಯದಲ್ಲಿ, ಆ ಕಣಿವೆಗೆ ಕಣಿವೆಯೇ ಪ್ರತಿಧ್ವನಿ ಕೊಡುವಂತೆ "ಹೋ, ಹೋ" ಎಂಬ ಕೂಗು ಭಯಂಕರವಾಗಿ ಕೇಳಿ ಬಂದು ಹುಲಿ, ಕುದುರೆ ಮನುಷ್ಯರೆನ್ನದೆ ಎಲ್ಲರೂ ಆಶ್ಚರ್ಯದಿಂದ ಬೆಚ್ಚಿ ಬಿದ್ದರು. ಹುಲಿಯು ಆ ಶಬ್ದ ಬಂದಕಡೆ ಸ್ಥಿರದೃಷ್ಟಿಯಿಂದ ನೋಡಿ ಸ್ವಲ್ಪ ಚಪಲತೆಯಿಂದ ಎದ್ದುನಿಂತಿತು. ನೂರಾರು ಮಂದಿ ಏಕಕಂಠದಿಂದ ಕೂಗಿದರೆ ಮಾತ್ರವೇ ಅಂತಹ ಶಬ್ದ ಬರಬಹುದು. ಆ ಕೂಗನ್ನು ಕೇಳಿ ಮುದುಕರಿಗೆ ಧೈರ್ಯ ಬಂತು. ಅವರೂ "ಹೋ-ಹೋ, ಹುಲಿ-ಹುಲಿ" ಎಂದು ಕೂಗಿಕೊಂಡರು

ಮುದುಕರ ಕೂಗಿಗೆ ಪ್ರತಿಯಾಗಿ "ಹೋ-ಹೋ, ಬಂದೆವು, ಬಂದೆವು" ಎಂದು ಕೂಗುತ್ತ ಹುಡುಗರ ಒಂದು ಗುಂಪು ನಲವತ್ತು ಐವತ್ತು ಮಾರು ದೂರದಲ್ಲಿ ಕಾಣಿಸಿಕೊಂಡಿತು. ಆ ಗುಂಪಿನಲ್ಲಿ ಸುಮಾರು ಮೂವತ್ತು ನಲವತ್ತು ಹುಡುಗರಿದ್ದರು. ಅವರು ಹುಲಿಯನ್ನು ಕಂಡು ಅಸಾಧ್ಯವಾದ ರೀತಿಯಲ್ಲಿ ಭಯಂಕರವಾಗಿ ಕಿರಿಚಿಕೊಳ್ಳಲು ಮೊದಲುಮಾಡಿದರು. ಆ ಗುಂಪನ್ನು ನೋಡಿಯೇ ಬೆಚ್ಚಿದ್ದ ಆ ಹುಲಿ ಆ ಹುಡುಗರ ಭಯಂಕರವಾದ ಗಲಭೆಯನ್ನು ಕೇಳಿ ಛಂಗನೆ ಪಕ್ಕಕ್ಕೆ ನೆಗೆದು ಕಾಡಿನಲ್ಲಿ ಕಣ್ಮರೆಯಾಯಿತು.

ಆ ಹುಡುಗರೆಲ್ಲ ಕಳಸಾಪುರದ ಹುಡುಗರು. ನೇರಿಲೆ ಹಣ್ಣಿಗಾಗಿ ರಂಗನ ಕಣಿವೆಗೆ ಬಂದಿದ್ದರು. ಅವರ ಬಾಯಿಯೆಲ್ಲ ನೇರಿಲೇ ಹಣ್ಣಿನ ಬಣ್ಣವಾಗಿದ್ದುದಲ್ಲದೆ, ಹಣ್ಣಿನಲ್ಲೇ ಕೋತಿಗಳಂತೆ ಎಸೆದಾಡಿ ಉಟ್ಟಿದ್ದ ಸಣ್ಣ

ಪಂಚೆಗಳೂ ಹೊದೆದಿದ್ದ ಶಲ್ಯಗಳೂ ನೇರಲಿಬಣ್ಣದಿಂದ ತುಂಬಿಹೋಗಿದ್ದವು. ತಿಂದು ತಿಂದು ಸಾಕಾಗಿ ಶಲ್ಯದ ತುದಿಯಲ್ಲಿ ನೇರಲೇಹಣ್ಣಿನ ಗಂಟುಗಳನ್ನು ಕಟ್ಟಿಕೊಂಡಿದ್ದರು.

ಆ ಹುಡುಗರಿಗೆಲ್ಲ ಸೀತಾರಾಮು ಎಂಬ ಹುಡುಗನು ಮುಖಂಡ. ಎಲ್ಲರೂ ಅವನು ಹೇಳಿದಂತೆ ಕೇಳಬೇಕು. ಅವನಿಗೂ ಸುಮಾರು ಹದಿನೈದು ವರ್ಷ ವಯಸ್ಸಿರಬಹುದು. ಬಲಶಾಲಿ ಮತ್ತು ತುಂಟ. ಮರ ಹತ್ತುವುದರಲ್ಲೂ ಈಜಾಡುವುದರಲ್ಲೂ ಅವನನ್ನು ಮೀರಿಸುವವರು ಕಳಸಾಪುರದಲ್ಲೇ ಇರಲಿಲ್ಲ. ಓಡುವುದು, ನೆಗೆಯುವುದು, ಹಾರುವುದು ಎಲ್ಲದರಲ್ಲೂ ಅವನೇ ಮೊದಲನೆಯವನು. ಅಲ್ಲದೆ, ಅವನು ಬಹಳ ಯುಕ್ತಿವಂತ. ಆದರಿಂದ ಅವನಿಗಿಂತ ದೊಡ್ಡವರಾದ ಹುಡುಗರೂ ಅವನು ಹೇಳಿದಂತೆ ಕೇಳುತ್ತಿದ್ದರು.

ಆ ಮುದುಕರು ಕಳಸಾಪುರಕ್ಕೆ ಆಗಾಗ ಬರುತ್ತಿದ್ದರು. ಆದರಿಂದ ಅವರ ಪರಿಚಯ ಆ ಹುಡುಗರಿಗೆಲ್ಲ ಇತ್ತು. ಅವರು ಅಜ್ಜಯ್ಯನ ಸುತ್ತ ಸುತ್ತಿಕೊಂಡರು. ಆದರೆ, ರಾಮಚಂದ್ರನನ್ನು ಅವರಾರೂ ನೋಡಿರಲಿಲ್ಲ. ಆದರೂ, ಅವನ ಪರಿಚಯಮಾಡಿಕೊಂಡು ಅವನೊಡನೆ ಮಾತಾಡಬೇಕೆಂದು ಎಲ್ಲರಿಗೂ ಆಸೆ. ಹಾಗೆಯೇ ರಾಮಚಂದ್ರನಿಗೂ ಆ ಹುಡುಗರೊಡನೆ ಮಾತಾಡಬೇಕೆಂದು ಆಸೆಯಾಯಿತು. ಆದರೆ ಸಂಕೋಚದಿಂದ ಅವನೂ ಆ ಹುಡುಗರಂತೆಯೇ ಸುಮ್ಮನಿದ್ದನು.

ಕಳಸಾಪುರದ ಹುಡುಗರೆಲ್ಲ ಅಜ್ಜಯ್ಯನೊಡನೆ ಮಾತಾಡುತ್ತ ಬರುತ್ತಿದ್ದರು. ಸ್ವಲ್ಪಹೊತ್ತು ಕಳೆದಮೇಲೆ ರಾಮಚಂದ್ರನನ್ನು ಮಾತಾಡಿಸದೇ ಇರಲು ಅವರಿಗೆ ಸಾಧ್ಯವಾಗಲಿಲ್ಲ. ಕಡೆಗೆ, ಸೀತಾರಾಮುವು ರಾಮಚಂದ್ರನಿಗೆ ನೇರಲೇಹಣ್ಣು ತೋರಿಸಿ 'ಬೇಕೆ ?' ಎಂದು ಕೇಳಿದನು. ರಾಮಚಂದ್ರನು ಆ ಹುಡುಗರ ಮಧ್ಯೆ ಸೇರಿಬಿಟ್ಟನು. ಮತ್ತು ಸ್ವಲ್ಪಹೊತ್ತಿನಲ್ಲೇ ತಾನೂ ಅವರಲ್ಲೊಬ್ಬನಾದನು.

ಅಜ್ಜಯ್ಯನೂ ಆ ಹುಡುಗರೊಡನೆ ಮಾತಾಡುತ್ತ ನಡೆದುಬರುತ್ತಿದ್ದರು. ಒಬ್ಬ ಹುಡುಗನು ಕುದುರೆಯ ಲಗಾಮನ್ನು ಹಿಡಿದುಕೊಂಡು

ಮೆಥೈ ಬರುತ್ತಿದ್ದನು. ಕುದುರೆಯ ಹತ್ತಿರದಲ್ಲೇ ಅಜ್ಜಯ್ಯ, ಸೀತಾ ರಾಮು, ರಾಮಚಂದ್ರ ಬರುತ್ತಿದ್ದರು. ಕುದುರೆಯ ಮುಂದೂ, ಹಿಂದೂ ಕಳಸಾಪುರದ ಹುಡುಗರು ಸಾಲಾಗಿ ಸೈನಿಕರಂತೆ ಬರುತ್ತಿದ್ದರು. ಮುದುಕರಿ ಗಂತೂ ಆ ಹುಡುಗರನ್ನು ನೋಡಿ ಬಹಳ ಸಂತೋಷವಾಯಿತು. "ಮಕ್ಕ ಳಿರಾ, ಎಲ್ಲರೂ ಒಗ್ಗಟ್ಟಾಗಿರಬೇಕು. ಒಗ್ಗಟ್ಟಾಗಿದ್ದರೆ ಎಂತಹ ಕಷ್ಟದ ಕೆಲಸವನ್ನಾದರೂ ನಾವು ಸುಲಭವಾಗಿ ಸಾಧಿಸಬಹುದು. ನೀವು ಇನ್ನೂ ಹುಡುಗರಾದರೂ ಒಗ್ಗಟ್ಟಾಗಿ ಕೂಗಿದುದರಿಂದಲೇ ಮಹಾ ಬಲಿಷ್ಠವಾದ ಹುಲಿಯೂ ಸಹ ಹೆದರಿ ಓಡಿಹೋಯಿತು. ಇದನ್ನು ನೀವು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಂಡು, ಎಲ್ಲ ಕೆಲಸಗಳಲ್ಲಿಯೂ ಒಗ್ಗಟ್ಟಾಗಿರುವುದನ್ನು ಅಭ್ಯಾಸಮಾಡಿ, ಅದರಿಂದ ನಿಮಗೆ ಒಳ್ಳೆಯದಾಗುವುದು" ಎಂದು ಹೇಳಿದರು.

## — ಕಳಸಾಪುರದಲ್ಲಿ ರಾಮಚಂದ್ರ —

ಆ ಮುದುಕರ ಹೆಸರು ಕೃಷ್ಣಶಾಸ್ತ್ರಿಗಳೆಂದು. ಅವರು ಚಿಕ್ಕವಯಸ್ಸಿ ನಲ್ಲೇ ತಮ್ಮ ಹೆಂಡತಿಯನ್ನು ಕಳೆದುಕೊಂಡರು. ಹೆಂಡತಿ ಕಾಲವಾದಾಗ ಅವರಿಗೆ ಒಬ್ಬಳು ಮಗಳಿದ್ದಳು. ಅವರು ಮತ್ತೆ ಮದುವೆಯಾಗದೆ ಮಗ ಳನ್ನು ಪ್ರೀತಿಯಿಂದ ಸಾಕಿ ಸರಿಯಾದ ವರನಿಗೆ ಮದುವೆಮಾಡಿಕೊಟ್ಟಿ ದ್ದರು. ಆ ಮಗಳ ಮಗನೇ ರಾಮಚಂದ್ರ. ರಾಮಚಂದ್ರ ತನ್ನ ಐದನೇ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದನು. ಮಗಳ ಸಾವಿನಿಂದ ಮುದುಕರು ಬಹಳ ದುಃಖಕ್ಕೀಡಾದರು. ಮನಸ್ಸನ್ನು ಸಮಾ ಧಾನ ಸ್ಥಿತಿಗೆ ತರಲು ಅವರು ದೂರದೇಶಗಳಿಗೆ ತೀರ್ಥಯಾತ್ರೆ ಹೋದರು. ಏಳೆಂಟು ವರ್ಷಗಳು ಯಾತ್ರೆ ಮಾಡಿದಮೇಲೆ ಮೊಮ್ಮಗನನ್ನು ನೋಡ ಬೇಕೆಂಬ ಹಂಬಲ ಬೆಳೆದು ಊರಿಗೆ ತಿರುಗಿಬಂದು ನೋಡುತ್ತಾರೆ, ತಂದೆ

ಯನ್ನೂ ಕಳೆದುಕೊಂಡು ರಾಮಚಂದ್ರ ಅನಾಥನಾಗಿದ್ದನು. ಮೊಮ್ಮಗನ ಪೋಷಣೆಯ ಭಾರ ಕೃಷ್ಣಶಾಸ್ತ್ರಿಗಳ ಮೇಲೆಯೇ ಬಿತ್ತು. ಅವರೇ ಅವನನ್ನು ಸಾಕಿದರು. ಹೀಗೆ ಒಂದೆರಡು ವರ್ಷ ಸಾಕಿದಮೇಲೆ ಕಾಶಿಗೆ ಯಾತ್ರೆ ಹೋಗಬೇಕೆಂಬ ಮನಸ್ಸಾಯಿತು. ರಾಮಚಂದ್ರನನ್ನು ಎಲ್ಲಿ ಬಿಡುವುದು? ಕೃಷ್ಣಶಾಸ್ತ್ರಿಗಳು ಬಹಳವಾಗಿ ಯೋಚಿಸಿ, ಕಡೆಗೆ, ಕಳಸಾಪುರದಲ್ಲಿದ್ದ ತಮ್ಮ ತಂಗಿಯ ಮನೆಯಲ್ಲಿಯೇ ರಾಮಚಂದ್ರನನ್ನು ಕೆಲವು ದಿನ ಬಿಡುವುದಾಗಿ ನಿರ್ಧರಿಸಿದರು. ಅನಂತರ ಅವನನ್ನು ಕಳಸಾಪುರಕ್ಕೆ ಕರೆದುಕೊಂಡು ಬಂದರು. ಹಾಗೆ ಬರುತ್ತಿದ್ದಾಗಲೇ ಹಿಂದೆ ತಿಳಿಸಿದಂತೆ ಹುಲಿ ಅವರನ್ನು ಕಣಿವೆಯಲ್ಲಿ ಅಡ್ಡಹಾಕಿದುದು.

ಹೊರಗಿನಿಂದ ಕಳಸಾಪುರಕ್ಕೆ ಬರುವ ಜನರೇ ಬಹಳ ಕಮ್ಮಿ. ಅದರಿಂದ ಕೃಷ್ಣಶಾಸ್ತ್ರಿಗಳು ಬಂದ ಸಮಾಚಾರ ಕೂಡಲೇ ಊರಲ್ಲೆಲ್ಲಾ ಹಬ್ಬಿತು. ಹುಲಿಯು ಅಡ್ಡಗಟ್ಟಿದ ಸಮಾಚಾರವನ್ನು ಅವರಿಂದಲೇ ಕೇಳಬೇಕೆಂದು ಎಲ್ಲರೂ ಕುತೂಹಲಿಗಳಾಗಿದ್ದರು. ಶಾಸ್ತ್ರಿಗಳಿಗೂ ಆ ವಿಚಾರವನ್ನು ತಿಳಿಸಬೇಕೆಂದು ಆಸೆ. ಅವರು ಸಂಧ್ಯಾವಂದನೆ ಮೊದಲಾದ ನಿತ್ಯವಿಧಿಗಳನ್ನು ಪೂರೈಸಿಕೊಂಡು ಊರಿನ ಮಧ್ಯದಲ್ಲಿದ್ದ ಶಾನುಭೋಗರ ಮನೆಗೆ ಬಂದರು. ಊರಿನ ಗಂಡಸರೆಲ್ಲಾ ಆಗಲೇ ಆ ತೊಟ್ಟಿಯಲ್ಲಿ ಸೇರಿದ್ದರು. ಶಾಸ್ತ್ರಿಗಳನ್ನು ವಿಶ್ವಾಸದಿಂದಲೂ ಗೌರವದಿಂದಲೂ ಕಂಡು ಅವರೊಡನೆ ಮಾತಾಡುತ್ತ ಕುಳಿತರು.

ಶಾಸ್ತ್ರಿಗಳ ತಂಗಿ ವೆಂಕಮ್ಮನವರಿಗೆ ರಾಮಚಂದ್ರನನ್ನು ಕಂಡು ತುಂಬಾ ಸಂತೋಷವಾಯಿತು. ಗಂಡುಮಕ್ಕಳು ಇಲ್ಲವಲ್ಲ ಎಂಬ ಕೊರಗು ಅಂದು ಅವರಿಗೆ ಮರೆಯಾಯಿತು. ರಾಮಚಂದ್ರನನ್ನು ನೋಡಿ, ಅವನ ತಾಯಿಯನ್ನು ನೆನೆದು ವೆಂಕಮ್ಮನವರು ಅತ್ತರು. ಅವನಿಗೆ ಚೆನ್ನಾಗಿ ಉಪಚಾರ ಮಾಡಿದರು. ಕಣಿವೆಯಲ್ಲಿ ಹುಲಿ ಅಡ್ಡಹಾಕಿದ ಸಂಗತಿಯನ್ನು ಕೇಳಿ, ಹುಡುಗನು ಎಷ್ಟು ಹೆದರಿದನೋ ಎಂದು ಶಂಕಿಸಿ, ಉಪ್ಪು ಮೆಣಸಿನಕಾಯನ್ನು ನಿವಾಳಿಸಿ ಒಲೆಗೆ ಹಾಕಿದರು; ಕರಿಯಮ್ಮನಿಗೆ ಮಾಸಲು ಕಟ್ಟಿದರು.

ರಾಮಚಂದ್ರನು ಸಂಧ್ಯಾವಂದನೆಯನ್ನು ಮುಗಿಸಿ ಊಟಮಾಡಿದನು. ಸೀತಾರಾಮು, ಕಾಳ, ಕಿಟ್ಟ, ಶಾಮಿ ಮುಂತಾದ ಕಳಸಾಪುರದ ಕೆಲವು ಹುಡುಗರೂ ಊಟವನ್ನು ಬೇಗ ಬೇಗ ಮುಗಿಸಿಕೊಂಡು ವೆಂಕಮ್ಮನವರ ಮನೆಗೆ ಬಂದು ರಾಮಚಂದ್ರನೊಡನೆ ಹರಟೆ ಹೊಡೆಯುತ್ತಲೂ ಅವನ ವಿಚಾರವನ್ನು ಕೇಳುತ್ತಲೂ ನಡುಮನೆಯಲ್ಲಿ ಕುಳಿತರು. ಅಡುಗೆಯ ಮನೆಯಲ್ಲಿದ್ದ ವೆಂಕಮ್ಮನವರು ನಡುಮನೆಗೆ ಬಂದು ಹುಡುಗರ ಗುಂಪನ್ನು ನೋಡಿ ಸ್ವಲ್ಪ ದಿಗಿಲು ಬಿದ್ದರು. ತಮ್ಮ ಊರಿನ ಹುಡುಗರು ಎಂತಹ ಚೇಷ್ಟೆಯ ಹುಡುಗರೆಂಬುದನ್ನು ಅವರು ಅರಿತಿದ್ದರು.

ಹೊರಗಿನಿಂದ ಬಂದವರಿಗೆ ಕಳಸಾಪುರದ ಹುಡುಗರು ಬಹಳ ಕಿರುಕುಳ ಕೊಡುತ್ತಿದ್ದರು. ಹಿಂದಿನಿಂದ ಬಂದು ಗುದ್ದುವುದು, ಚಿಗುಟುವುದು, ಕಾರಣವಿಲ್ಲದೆ ಕೆಣಕಿ ಜಗಳಕ್ಕೆ ಕರೆಯುವುದು, ಗುಂಪುಕೂಡಿ ಹೊಡೆಯುವುದು; ಆಟಕ್ಕೆ ಕರೆಯುವುದು, ಬಂದರೂ ಹೊಡೆಯುವುದು, ಬರದೇ ಇದ್ದರೂ ಹೊಡೆಯುವುದು; ಉಪಾಯದಿಂದ ತೋಟಕ್ಕೆ ಕರೆದುಕೊಂಡು ಹೋಗುವುದು. ಅಲ್ಲಿ ಬೇಕೆಂದು ನೆಪ ತೆಗೆದು ಜಗಳವಾಡಿ 'ತುರುಚಿ ಮುಟ್ಟಿಸುವುದು'—ಹೀಗೆ ಅನೇಕ ರೀತಿಯಲ್ಲಿ ಹೊರ ಊರಿನ ಹುಡುಗರನ್ನು ಗೋಳು ಹುಯ್ದುಕೊಳ್ಳುತ್ತಿದ್ದರು. ಇದರಿಂದ ಹೊರ ಊರಿನ ಸ್ವಲ್ಪ ಬೆಳೆದ ಹುಡುಗರು ಕಳಸಾಪುರಕ್ಕೆ ಬರಲು ಅಂಜುತ್ತಿದ್ದರು. ಹುಡುಗರ ಈ ತುಂಟಾಟವನ್ನು ನಿಲ್ಲಿಸಲು ಅವರಿಗೆ ಏಟುಗಳು ಬಿದ್ದವು. ಕೋದಂಡ ಹಾಕಿದರು. ಆದರೂ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಹುಡುಗರ ತುಂಟಾಟ ದಿನದಿನಕ್ಕೂ ಹೆಚ್ಚುತ್ತಿತ್ತು. ಇವನ್ನು ಯೋಚಿಸಿ, ಆ ಹುಡುಗರು ರಾಮಚಂದ್ರನನ್ನು ಮುತ್ತಿಕೊಂಡಿರುವುದನ್ನು ನೋಡಿ ವೆಂಕಮ್ಮನವರು ದಿಗಿಲುಬಿದ್ದರು. ಮತ್ತು ಸೀತಾರಾಮುವನ್ನು ಕರೆದು "ಅಪ್ಪಾ, ಸೀತಾರಾಮು, ನಮ್ಮ ರಾಮಚಂದ್ರ ಇಲ್ಲೇ ಇರುತ್ತಾನೆ. ಅವನಿಗೆ ಏನೂ ತೊಂದರೆ ಮಾಡಬೇಡಿ. ಅವನನ್ನೂ ನಿಮ್ಮ ಜೊತೆ ಸೇರಿಸಿಕೊಂಡು ಆಡಿರಪ್ಪ" ಎಂದು ಹೇಳಿದರು. ಹುಡುಗರೆಲ್ಲಾ ರಾಮಚಂದ್ರನಿಗೆ ಏನೂ ತೊಂದರೆಮಾಡುವುದಿಲ್ಲವೆಂದು ವೆಂಕಮ್ಮನವರಿಗೆ ಭರವಸೆ ಕೊಟ್ಟರು.

ತಮ್ಮ ತಮ್ಮ ಮನೆಗಳಿಗೆ ಬರಬೇಕೆಂದು ಆ ಹುಡುಗರು ರಾಮಚಂದ್ರನನ್ನು ಕರೆದರು. ಬೆಳಗಾಗುತ್ತಲೇ ಬರುವುದಾಗಿ ರಾಮಚಂದ್ರನು ಹೇಳಿದನು. ಆದರೆ ಸೀತಾರಾಮುವು ವೆಂಕಮ್ಮನವರಿಗೆ ಹೇಳಿ ರಾಮಚಂದ್ರನನ್ನು ತಮ್ಮ ಮನೆಗೆ ಕರೆದುಕೊಂಡು ಹೋದನು.

ದಾರಿಯಲ್ಲಿ "ಸೀತಾರಾಮು, ನಿಮ್ಮ ಮನೆಯಲ್ಲಿ ಯಾರು ಯಾರು ಇದ್ದಾರೆ" ಎಂದು ರಾಮಚಂದ್ರನು ಕೇಳಿದನು.

ಸೀತಾರಾಮುವು "ನಾನು ನನ್ನ ತಂಗಿ ಲಕ್ಷ್ಮಿ ಇಬ್ಬರೇ" ಎಂದು ಉತ್ತರಕೊಟ್ಟನು.

ರಾಮಚಂದ್ರ—ಅಮ್ಮ?

ಸೀತಾರಾಮು—ಅಮ್ಮ ಇಲ್ಲ; ಸತ್ತುಹೋದಳು.

ರಾಮಚಂದ್ರ—ಅಪ್ಪ?

ಸೀತಾರಾಮು—ಅಪ್ಪನೂ ಇಲ್ಲ. ಇಬ್ಬರೂ ಸತ್ತುಹೋಗಿ ಮೂರು ನಾಲ್ಕು ವರ್ಷವಾಯಿತು. ಒಬ್ಬಳು ಅಜ್ಜಿಯಿದ್ದಳು. ಅವಳೂ ಸತ್ತುಹೋಗಿ ಒಂದು ವರ್ಷವಾಯಿತು. ಈಗ ನಮ್ಮ ಸೋದರತ್ತೆಯ ಮನೆಯಲ್ಲಿದ್ದೇವೆ.

ರಾಮಚಂದ್ರನು ಸೀತಾರಾಮುವಿನ ಹೆಗಲಮೇಲೆ ಕೈಹಾಕಿ ಹೇಳಿದ— "ನನಗೂ ತಾಯಿತಂದೆ ಇಲ್ಲ, ನಿನಗೂ ತಾಯಿತಂದೆ ಇಲ್ಲ. ಆದರೆ ನಿನಗೆ ತಂಗಿ ಇದ್ದಾಳೆ. ನನಗೆ ಯಾರೂ ಇಲ್ಲ" ಎಂದನು.

ಸೀತಾರಾಮುವೂ ತನ್ನತೋಳನ್ನು ರಾಮಚಂದ್ರನ ಕತ್ತು ಸುತ್ತಹಾಕಿ "ಹೇಗಿದ್ದರೂ ನೀನು ಈ ಊರಲ್ಲೇ ಇರುತ್ತೀಯಲ್ಲ; ನಾವಿಬ್ಬರೂ ಅಣ್ಣ ತಮ್ಮಂದಿರಂತೆ ಇರೋಣ" ಎಂದನು.

ನಾನೂ ಹಾಗೇ ಹೇಳಬೇಕೆನ್ನುತ್ತಿದ್ದೆ. ಸಂಜೆ, ಕಣಿವೆಯಲ್ಲಿ ನಿನ್ನನ್ನು ನೋಡಿದಕೂಡಲೇ ನನಗೆ ಒಂದು ತರಹ ವಿಶ್ವಾಸ ಹುಟ್ಟಿತು" ಎಂದನು ರಾಮಚಂದ್ರ.

ಇಬ್ಬರ ಹೃದಯವೂ ವಿಶ್ವಾಸದಿಂದ ತುಂಬಿತ್ತು. ಇಬ್ಬರೂ ತಬ್ಬಲಿಗಳೆಂಬುದು ಅವರಲ್ಲಿದ್ದ ವಿಶ್ವಾಸವನ್ನು ಗಾಢವಾಗಿ ಮಾಡಿತು. ಇಬ್ಬರೂ

ಸ್ವಲ್ಪಹೊತ್ತು ಮೌನವಾಗಿದ್ದರು. ತಮ್ಮ ಮನಸ್ಸಿನಲ್ಲಿದ್ದುದನ್ನು ಮಾತಿನಲ್ಲಿ ತಿಳಿಸಲು ಅವರಿಗೆ ಶಕ್ತಿ ಇರಲಿಲ್ಲ.

ಮಾತಾಡುತ್ತ ಅವರು ರಂಗಪ್ಪನವರ ಮನೆಗೆ-ಅಂದರೆ, ಸೀತಾರಾಮು ವಿನ ಮಾವನ ಮನೆಗೆ-ಬಂದರು.

"ಅತ್ತೆ, ರಾಮುಚಂದ್ರ ಬಂದ." ಮನೆಯೊಳಕ್ಕೆ ಬಂದವನೇ ಸೀತಾ ರಾಮು ಕೂಗಿದನು.

"ಎಲ್ಲಿ, ರಾಮುಚಂದ್ರ?" ಎಂದು ಮೂವತ್ತುವರ್ಷದ ಮುತ್ತೈದೆ ಹೊಬ್ಬಳು ಅಡುಗೆಯ ಮನೆಯಿಂದ ಹಜಾರಕ್ಕೆ ಬಂದಳು. ಬಂದು ನೋಡಿ ರಾಮುಚಂದ್ರನನ್ನು ಬಹಳ ವಾತ್ಸಲ್ಯದಿಂದ ಮಾತಾಡಿಸಿದಳು.

"ನಾನೂ ನಿಮ್ಮಮ್ಮನೂ ಚಿಕ್ಕಂದಿನಲ್ಲಿ ಗೆಳತಿಯರು. ನಾವು ಯಾವಾ ಗಲೂ ಜೊತೆಯಲ್ಲೇ ಇರುತ್ತಿದ್ದೆವು. ಒಂದು ಕ್ಷಣವೂ ಒಬ್ಬರನ್ನೊಬ್ಬರು ಬಿಟ್ಟು ಅಗಲುತ್ತಿರಲಿಲ್ಲ. ನಿಮ್ಮಮ್ಮನ ಮದುವೆಗೆ ನಾನೂ ಹೋಗಿದ್ದೆ. ಆದೇ ಅವಳನ್ನು ನಾನು ಕೊನೆಯ ಸಲ ನೋಡಿದುದು. ನಿನ್ನನ್ನು ನೋಡಿ ಸಂತೋಷಪಡುವ ಭಾಗ್ಯ ಅವಳಿಗಿಲ್ಲದೇ ಹೋಯಿತು" ಎಂದು ಆಕೆ ಕಣ್ಣೀರು ಸುರಿಸಿದಳು. ರಾಮುಚಂದ್ರನಿಗೂ ತಾಯಿಯನ್ನು ನೆನೆದು ದುಃಖ ವಾಯಿತು. ಸೀತಾರಾಮುವಿನ ಅತ್ತೆಯು ರಾಮುಚಂದ್ರನಿಗೆ ಊಟವಾದ ಸಂಗತಿಯನ್ನು ತಿಳಿದು ಒಂದು ಲೋಟದ ತುಂಬ ಹಸುವಿನ ಹಾಲನ್ನು ಕುಡಿಯಲು ತಂದುಕೊಟ್ಟಳು.

ಅಷ್ಟರಲ್ಲಿ, ಪಕ್ಕದ ಮನೆಗೆ ಹೋಗಿದ್ದ ಲಕ್ಷ್ಮಿ ಬಂದಳು.

"ರಾಮುಚಂದ್ರ, ಇವಳೇ ನನ್ನ ತಂಗಿ ಲಕ್ಷ್ಮಿ" ಎಂದನು ಸೀತಾರಾಮು.

ಲಕ್ಷ್ಮಿ ಅಣ್ಣನ ಕೈಹಿಡಿದುಕೊಂಡು ರಾಮುಚಂದ್ರನನ್ನೇ ನೋಡುತ್ತ ನಿಂತುಕೊಂಡಳು.

ಲಕ್ಷ್ಮಿಗೆ ೭-೮ ವರ್ಷ ವಯಸ್ಸು. ವಯಸ್ಸಿಗೆ ತಕ್ಕ ಬೆಳವಣಿಗೆ; ನೋಡುವುದಕ್ಕೆ ಬಹಳ ಮುದ್ದಾಗಿದ್ದಳು.

"ನನಗೂ ಇಂತಹ ಒಬ್ಬಳು ತಂಗಿ ಇದ್ದಿದ್ದರೆ" ಎಂದು ರಾಮಚಂದ್ರ ಯೋಚಿಸಿದನು.

ಮಾರನೆಯದಿನ ಸೀತಾರಾಮುವು ರಾಮಚಂದ್ರನನ್ನುಎಲ್ಲರ ಮನೆಗೂ ಕರೆದುಕೊಂಡುಹೋಗಿ ಎಲ್ಲ ಹುಡುಗರ ಪರಿಚಯುವನ್ನೂ ಮಾಡಿಕೊಟ್ಟನು. ದೇವಸ್ಥಾನಗಳಿಗೆ ಕರೆದುಕೊಂಡು ಹೋಗಿ ತೋರಿಸಿದನು. ತೋಟಗಳಿಗೆ ಕರೆದುಕೊಂಡು ಹೋಗಿ ಸೀಬೆ, ಚಕ್ಕೋತ, ಮಾದಲ, ಕಿತ್ತಲೆ ಮೊದಲಾದ ಹಣ್ಣುಗಳನ್ನು ಕೊಟ್ಟನು. ತೋಟಗಳಲ್ಲಿ ಎಳನೀರಿನ ಸೂರೆಯೇ ಆಗಿಹೋಯಿತು.

ಸಂಜೆ, ಎಂದಿನಂತೆ ಊರು ಮುಂದಿನ ಗಣೇಶನ ಬಯಲಿನಲ್ಲಿ ಲಗ್ಗೆ ಡೆಂಡಿಗೆ ಹುಡುಗರೆಲ್ಲಾ ಸೇರಿದರು. ಆ ದಿನ ಅವರ ಉತ್ಸಾಹ ಇಮ್ಮಡಿಯಾಗಿತ್ತು. ರಾಮಚಂದ್ರ ಸೀತಾರಾಮು ಇಬ್ಬರೂ ಒಂದು ಕಡೆ ಸೇರಿದ್ದರು. ಸ್ವಲ್ಪಹೊತ್ತಿನಲ್ಲೇ, ಅವರಿಬ್ಬರೂ ಒಂದೇ ಕಡೆ ಇದ್ದರೆ ಅವರೊಡನೆ ಆಟವಾಡುವುದೇ ಅಸಾಧ್ಯವಾಗಿ ಕಂಡಿತು. ರಾಮಚಂದ್ರನು ಸೀತಾರಾಮುವಿಗಿಂತ ಒಂದು ಕೈ ಮೇಲು ಎನ್ನುವಂತೆ ಆಟ ಆಡಿದನು. ಆದುದರಿಂದ ಅವನು ಸೀತಾರಾಮುವಿನ ಇದಿರಾಳಿಯಾಗಿ ನಿಲ್ಲಬೇಕಾಯಿತು.

ಕಳಸಾಪುರಕ್ಕೆ ಬಂದ ಒಂದೆರಡು ದಿನಗಳಲ್ಲೇ ರಾಮಚಂದ್ರನು ತಾನು ಹೊಸಬನೆನ್ನುವುದನ್ನು ಮರೆಯುವಷ್ಟುಮಟ್ಟಿಗೆ ಆ ಹುಡುಗರ ಚೇಷ್ಟೆಯಲ್ಲಿ ಸೇರಿಬಿಟ್ಟನು. ಎರಡು ಮೂರು ದಿನಗಳಲ್ಲೇ ಎಲ್ಲ ತೋಟಗಳೂ ಅವುಗಳ ಕಳ್ಳಗಂಡಿಗಳೂ ಅವನಿಗೆ ಪರಿಚಯುವಾದವು. ಓಡುವುದು, ನೆಗೆಯುವುದು, ಈಜುವುದು ಇವುಗಳಲ್ಲೂ; ಚೆಂಡಾಟ, ಚಿಣ್ಣಿಯಾಟ ಮುಂತಾದ ಆಟಗಳಲ್ಲೂ ಅವನು ಸೀತಾರಾಮುವಿಗಿಂತ ಮೇಲೆಂಬ ಭಾವನೆ ಕಳಸಾಪುರದ ಅನೇಕ ಹುಡುಗರಿಗೆ ಬಂದಿತು. ಅಲ್ಲದೆ, ಸೀತಾರಾಮು ಸಹ ರಾಮಚಂದ್ರನ ಶಕ್ತಿಯನ್ನೂ, ಆಟಗಳಲ್ಲಿ ಅವನ ಚಾತುರ್ಯವನ್ನೂ ಕಂಡು, ಅವನು ತನ್ನನ್ನು ಮೀರಿಸುವನೆಂದೂ, ಅದರಿಂದ ಹುಡುಗರು ತನ್ನ ಮಾತನ್ನು ಕೇಳದಂತಾಗಬಹುದೆಂದೂ ಹೆದರಿ ಕರುಬಿದನು. ಮೊದಲು ದಿನದ ವಿಶ್ವಾಸ ಎರಡು ಮೂರು ದಿನಗಳಲ್ಲೇ ಇಬ್ಬರಲ್ಲೂ ಮರೆಯಾಗುತ್ತ ಬಂದಿತು. ಸೀತಾ

ರಾಮುವಿಗೆ ಹೆದರಿ ಅವನು ಹೇಳಿದಂತೆ ಕೇಳುತ್ತಿದ್ದ ಕೆಲವು ಹುಡುಗರು ರಾಮಚಂದ್ರನ ಸ್ನೇಹಮಾಡಿ ಸೀತಾರಾಮುವಿಗೆ ಇದಿರುಬಿದ್ದರು.

## — ಹುಡುಗರ ಹೊಡೆದಾಟ —

ರಾಮಚಂದ್ರನು ಕಳಸಾಪುರಕ್ಕೆ ಬಂದ ನಾಲ್ಕನೆಯ ದಿನದ ಸಂಜೆ, ಎಂದಿನಂತೆ ಗಣೇಶನ ಬಯಲಿನಲ್ಲಿ ಹುಡುಗರೆಲ್ಲ ಆಟಕ್ಕೆ ಸೇರಿದ್ದರು. ಸೀತಾರಾಮು ಮತ್ತು ರಾಮಚಂದ್ರ ಇಬ್ಬರೂ ಮೋಟೆಗಳಾಗಿ ಒಂದು ಕಲ್ಲು ಬಂಡೆಯ ಮೇಲೆ ಕುಳಿತಿದ್ದರು. ಮಿಕ್ಕ ಹುಡುಗರು ಆಳುತನಕ್ಕೂ ಆಟವಾಡುವ ಚತುರತೆಗೂ ತಕ್ಕಂತೆ ಜೊತೆ ಜೊತೆಯಾಗಿ ನಿಂತಿದ್ದರು.

ಮೋಟೆಗಳ ಸೂಚನೆಯಂತೆ ಅವರು ಅಂಟುಹಾಕಿಕೊಂಡು ಬರಲು ಸ್ವಲ್ಪ ಸ್ವಲ್ಪ ದೂರ ಹೋದರು.

ಮೊದಲು ಕರೆಯುವವರು ಯಾರು? ರಾಮಚಂದ್ರನು ಒಂದು ಹೆಂಚಿನ ಚೂರನ್ನು ತೆಗೆದುಕೊಂಡು ಅದಕ್ಕೆ ಒಂದುಕಡೆ ಗೀರಿ ಗುರುತು ಮಾಡಿ "ನಿನಗೆ ಯಾವುದು ಬೇಕು?" ಎಂದು ಸೀತಾರಾಮುವನ್ನು ಕೇಳಿದನು.

"ಗುರುತು ಮಾಡಿರುವ ಕಡೆ ಹೆಳ್ಳ, ಗುರುತುಮಾಡದೇ ಇರುವಕಡೆ ತಿಟ್ಟ."

"ತಿಟ್ಟವೇ ಇರಲಿ" ಎಂದು ಸೀತಾರಾಮು ಹೇಳಿದನು. ರಾಮಚಂದ್ರನು ಆ ಹೆಂಚಿನ ಚೂರನ್ನು ಹೆಬ್ಬೆಟ್ಟಿನ ಮೇಲಿಟ್ಟುಕೊಂಡು ಮೇಲಕ್ಕೆ ಚಿಮ್ಮಿದನು. ಅದು ಸುಯ್ ಎಂದು ಶಬ್ದಮಾಡುತ್ತ ಎರಡಾಳುದ್ದ ಮೇಲೆ ಹೋಗಿ ಕೆಳಗೆ ಬಿದ್ದಿತು. ಹುಡುಗರಿಬ್ಬರೂ ಓಡಿಹೋಗಿ ನೋಡಿದರು. ಗುರುತುಮಾಡಿದಕಡೆ ಮೇಲಾಗಿ ಬಿದ್ದಿತ್ತು.

ಅಷ್ಟುಹೊತ್ತಿಗೆ ಹುಡುಗರ ಒಂದು ಜೊತೆ ಬಂದಿತು.

"ಗುಡು-ಗುಡಾಸ್ ಕೈ"

“ಪಾಸ್ ಕೈ”

“ಕಲ್ಲು ಬೇಕೋ ಹುಲ್ಲು ಬೇಕೋ ?”

“ಹುಲ್ಲು ಜೊಳ್ಳು, ಕಲ್ಲು ಗಟ್ಟಿ. ಗಟ್ಟಿಯಾದ ಕಲ್ಲೇ ಇರಲಿ” ಎಂದನು ಸೀತಾರಾಮು. ಕಲ್ಲು ಹಿಡಿದಿದ್ದ ಕಾಳ ಸೀತಾರಾಮುವಿನ ಕಡೆಗೂ, ಹುಲ್ಲು ಹಿಡಿದಿದ್ದ ಶಾಮ ರಾಮಚಂದ್ರನ ಕಡೆಗೂ ಬಂದು ನಿಂತರು. ಆಟದಲ್ಲಿ ಕಾಳ ಶಾಮನಿಗಿಂತ ಮೇಲು.

ಮತ್ತೊಂದು ಜೊತೆ ಬಂತು.

“ಹೊಲ ಬೇಕೋ, ಹಕ್ಕಿ ಬೇಕೋ ?”

“ಹಾರಿಹೋಗುವ ಹಕ್ಕಿಗಿಂತ ಅನ್ನ ಕೊಡೋ ಹೊಲವೇ ಉತ್ತಮ” ಎಂದು ಸೀತಾರಾಮು ಹೇಳಿಕೊಳ್ಳುತ್ತ,

“ಹಕ್ಕಿ ನಿನಗೇ ಇರಲಿ ; ನನಗೆ ಹೊಲ ಬರಲಿ” ಎಂದನು.

ಹಸುರುಸೊಪ್ಪು ತಂದಿದ್ದ ನಾಗಪ್ಪ ಸೀತಾರಾಮುವಿನ ಕಡೆಗೂ, ಗಿಳಿಯಪುಕ್ಕ ಹಿಡಿದಿದ್ದ ಶಂಕರ ರಾಮಚಂದ್ರನ ಕಡೆಗೂ ಬಂದರು. ಶಂಕರನಿಗಿಂತ ನಾಗಪ್ಪ ಆಟದಲ್ಲಿ ನಿಪುಣ.

ಉಳಿದ ಏಳೆಂಟು ಜೊತೆ ಹುಡುಗರಲ್ಲೂ ಬಹುಪಾಲು ಒಳ್ಳೆಯ ಆಟಗಾರರೇ ಸೀತಾರಾಮುವಿನ ಕಡೆಗೆ ಹೋದರು. ಇದರಿಂದ ಸೀತಾರಾಮುವಿಗೂ ಅವನ ಕಡೆಯ ಹುಡುಗರಿಗೂ ಬಹಳ ಸಂತೋಷವಾಯಿತು. ರಾಮಚಂದ್ರನ ಕಡೆ ಅವನಲ್ಲದೆ ಅಯ್ಯನೊಬ್ಬನೇ ಒಳ್ಳೆಯ ಆಟಗಾರ. ರಾಮಚಂದ್ರನಿಗೆ ಮನಸ್ಸಿನಲ್ಲೇ ಬಹಳ ವ್ಯಸನವಾಯಿತು. ಅವನ ಕಡೆಯ ಹುಡುಗರು “ಆಕಡೆ ಬಲವಾದವರೆಲ್ಲ ಸೇರಿಬಿಟ್ಟರು. ಮತ್ತೆ ಅಂಟುಹಾಕೋಣ” ಎಂದರು. ಅದಕ್ಕೆ ಸೀತಾರಾಮು ಒಪ್ಪಲಿಲ್ಲ.

“ಪರವಾಗಿಲ್ಲ ; ಬನ್ನೀರೋ ನೋಡೋಣ” ಎಂದು ರಾಮಚಂದ್ರ ತನ್ನ ಕಡೆಯವರಿಗೆ ಧೈರ್ಯಹೇಳಿದನು.

ಆಟವನ್ನು ಮೊದಲು ಮಾಡುವವರು ಯಾರೆಂದು ಮತ್ತೆ ಮಾತಿಗೆ ಮೊದಲಾಯಿತು.

"ಸೀತಾರಾಮು, ನೀವು ಬಲವಾಗಿದ್ದೀರಿ, ಆದರಿಂದ ನಾವು ಮೊದಲಾಟ ಆಡುತ್ತೇವೆ" ಎಂದನು ಅಯ್ಯ. ರಾಮಚಂದ್ರನ ಕಡೆಯ ಉಳಿದ ಹುಡುಗರೂ ಹಾಗೇ ಹೇಳಿದರು.

ಸೀತಾರಾಮುವಿಗೆ ಬಹಳ ಜಂಭ ಬಂತು. ಅವನು ಅದನ್ನು ತೋರಿಸದೆ "ತಾಳಿ, ನನ್ನ ಕಡೆಯವರನ್ನು ಕೇಳುತ್ತೇನೆ" ಎಂದನು.

"ರಾಮಚಂದ್ರನ ಕಡೆಯವರು 'ನಾವು ಬಲವಾಗಿಲ್ಲ ಆದರಿಂದ ನಾವೇ ಮೊದಲಾಟ ಆಡುತ್ತೇವೆ' ಎನ್ನುತ್ತಾರೆ. ಇದಕ್ಕೆ ಏನು ಹೇಳುವಿರಿ?" ಎಂದನು ಸೀತಾರಾಮು ತನ್ನ ಕಡೆಯವರಿಗೆ. ಕೆಲವು ಹುಡುಗರು "ಹಾಗೇ ಆಗಲಿ" ಎಂದರು. ಆದರೆ, ಸೀತಾರಾಮುವಿನ ಕಡೆ ಇದ್ದ ಕಾಳನಿಗೆ ರಾಮಚಂದ್ರನ ಕಡೆ ಇದ್ದ ಅಯ್ಯನನ್ನು ಕಂಡರೆ ಆಗುತ್ತಿರಲಿಲ್ಲ. ಹಿಂದಿನ ದಿನ ಜೇನು ಇಳಿಸಿದಾಗ ಅಯ್ಯ ಕಾಳನಿಗಿಂತ ಹೆಚ್ಚಾಗಿ ಜೇನನ್ನು ಹೊತ್ತುಕೊಂಡು ಹೋಗಿ ತಿಂದುಬಿಟ್ಟಿದ್ದನು. "ಇವತ್ತು ಅಯ್ಯನನ್ನು ಕುದುರೆ ಕೂರಿಸಿ ಅವನಿಗೆ ತಕ್ಕದು ಮಾಡಬೇಕು" ಎಂದು ಅವನು ಯೋಚಿಸಿದ್ದನು. ಆದುದರಿಂದ ಸೀತಾರಾಮು ಹೇಳಿದುದನ್ನು ಕೇಳಿ ಅವನು ಅದಕ್ಕೆ ಒಪ್ಪದೇ ಹೋದನು. ಸೀತಾರಾಮುವಿಗೂ ಅವನು ಹಾಗೆ ಹೇಳುವುದೇ ಬೇಕಾಗಿತ್ತು. ಆದರೂ, "ಈಗ ಇರುವ ಹಾಗೇ ಆಡಿದರೆ ಅವರು ತುಂಬಾ ಸೋತು ಬಿಡುತ್ತಾರೆ" ಎಂದನು.

"ಹಾಗಾದರೆ, ಅವರೆಲ್ಲ ನಮಗೆ ಒಂದು ಸಲಾಂ ಕೊಡಲಿ. ಅವರಿಗೇ ಮೊದಲಾಟ ಕೊಡೋಣ" ಎಂದನು ಕಾಳ.

"ಸಲಾಂ ಕೊಡೋಕೆ ನಿಮ್ಮ ಗುಲಾಮರಲ್ಲ" ಎಂದು ಅಯ್ಯ ಕಾಳನ ಮೇಲೆ ಎಗರಿ ಹೋದನು.

"ಮೊದಲಾಟ ನಮಗೆ ಕೊಡಿ ಅಂತ ಯಾಕೆ ಗೋಗರಿಯಬೇಕು?" ಎಂದು ಕಾಳ ಹಂಗಿಸಿದ.

"ಗೋಗರಿಯುವುದಕ್ಕೆ ನಾವೇನು ಹೆಂಗಸರಲ್ಲ" ಎಂದು ಅಯ್ಯ ಮುಂದಕ್ಕೆ ನುಗ್ಗಿದ.

"ಹೆಂಗಸರಿಗಿಂತ ಕಡೆ" ಎಂದು ಕಾಳನೂ ಮುಂದಕ್ಕೆ ನುಗ್ಗಿದ. ಇನ್ನೇನು ಇಬ್ಬರಿಗೂ ಕೈಕೈ ಹತ್ತಬೇಕು. ಅಷ್ಟರಲ್ಲಿ ರಾಮಚಂದ್ರ ಮಧ್ಯೆ ಬಂದು ಅಯ್ಯನನ್ನು ಹಿಂದಕ್ಕೆ ಎಳೆದುಕೊಂಡು, ಕಾಳನಿಗೆ "ನೀವೇ ಮೊದಲು ಆಡಿ" ಎಂದನು.

ರಾಮಚಂದ್ರ ಸಿಧಾನವಾಗಿ ಮಾತಾಡಿದರೂ ಅವನಿಗೆ ಬಹಳ ಸಿಟ್ಟು ಬಂದಿರುವುದೆಂಬುದು ಎಲ್ಲರಿಗೂ ತಿಳಿಯಿತು. ಕಾಳನ ಜಂಭದ ಮಾತಿನಿಂದ ಅವನಿಗೆ ಸಿಟ್ಟು ಬಂದಿತ್ತು. ಸಿಟ್ಟಿನಿಂದ ಅವನ ಮುಖ ಕೆಂಪಾಗಿತ್ತು.

"ಅಂಟು ಹಾಕೋಣ" ಎಂದನು ಸೀತಾರಾಮು.

"ಆಗಲಿ" ಎಂದನು ರಾಮಚಂದ್ರ.

ಒಂದು ಹಂಚಿನ ಚೂರನ್ನು ತೆಗೆದುಕೊಂಡು ಒಂದು ಕಡೆ ಕಲ್ಲಿನಿಂದ ಗೀರಿ "ನಿಮಗೆ ಯಾವುದು ಬೇಕು?" ಎಂದನು ಕಾಳ.

"ನೀವು ಬಿಟ್ಟಿದು" ಎಂದನು ಅಯ್ಯ.

ಸೀತಾರಾಮು ಹೇಳಿದ "ಗುರುತು ಮಾಡಿರುವ ಕಡೆ ನಮಗೆ."

ಕಾಳನು ಹಂಚಿನ ಚೂರನ್ನು ಮೇಲಕ್ಕೆ ಚಿಮ್ಮಿದನು. ಅದು ಸುಯ್ ಎಂದು ಶಬ್ದಮಾಡುತ್ತ ಗರ್‍ರನೆ ತಿರುಗುತ್ತ ಎರಡಾಳೆತ್ತರ ಹೋಗಿ ಕೆಳಕ್ಕೆ ಬಿದ್ದಿತು. ಹುಡುಗರು ಓಡಿಹೋಗಿ ನೋಡಿದರು. ಗುರುತುಮಾಡಿದ ಕಡೆ ಮೇಲ್ಮುಖವಾಗಿ ಬಿದ್ದಿತ್ತು. ಸೀತಾರಾಮುವಿನ ಕಡೆಯವರೇ ಆಟ ವನ್ನು ಮೊದಲು ಮಾಡಿದರು.

ಆ ದೊಡ್ಡ ಬಯಲಿನಲ್ಲಿ, ಕಿತ್ತಲೇ ಕಾಯಿಗಾತ್ರದ ಎರಡು ಕಲ್ಲುಗಳನ್ನು ಒತ್ತೊತ್ತಿ ಅಂತರದಲ್ಲಿಟ್ಟು (ಅವಕ್ಕೆ ಗುಪ್ಪುಗಳೆಂದು ಹೆಸರು) ಅವರ ಮೇಲೆ ಕಿರುಬೆರಳು ದಪ್ಪದ ಒಂದು ಬಿದಿರು ಕಡ್ಡಿಯನ್ನು (ಅದಕ್ಕೆ ಸಿಡಿಗಡ್ಡಿ ಎಂದು ಹೆಸರು) ಇಟ್ಟಿದ್ದರು. ಅದರ ಮುಂದೆ ಸೀತಾರಾಮುವು ಗಟ್ಟಿಯಾಗಿ ಹೊಲಿ ದಿದ್ದ ಒಂದು ಅರಿವೆಯ ಚಂಡನ್ನೂ ಒಂದು ಮೊಳದುದ್ದದ ಮರದ

ದಾಂಡನ್ನು ಹಿಡಿದು ಆಟವಾಡಲು ಸಿದ್ಧನಾಗಿ ನಿಂತಿದ್ದನು. ಅವನ ಕಡೆಯ ಹುಡುಗರೆಲ್ಲರೂ ಸವಾರಿಮಾಡಲು ಕುದುರೆಗಳನ್ನು ನಿರೀಕ್ಷಿಸುತ್ತ ಹಿಂದೆ ಕುಳಿತಿದ್ದರು.

ರಾಮಚಂದ್ರನು ತನ್ನ ಕಡೆಯವರನ್ನೆಲ್ಲ ಬುತ್ತಿಹಿಡಿಯಲು ತಕ್ಕ ತಕ್ಕ ಜಾಗಗಳಲ್ಲಿ ನಿಲ್ಲಿಸಿ ತಾನು ಸಿಡಿಗಡ್ಡಿಯ ಇದಿರು ತಕ್ಕಷ್ಟು ದೂರದಲ್ಲಿ ನಿಂತುಕೊಂಡನು.

ಆಟವು ಮೊದಲಾಯಿತು. ಸೀತಾರಾಮುವು ಚಂಡನ್ನು ದಾಂಡಿನಿಂದ ಜೋರಾಗಿ ಹೊಡೆದನು. ಬುತ್ತಿಹಿಡಿಯಲು ಯಾರಿಗೂ ಸಾಧ್ಯವಾಗಲಿಲ್ಲ. ಚಂಡು ನಿಂತ ಜಾಗದಿಂದ, ಅಥವಾ ಅದನ್ನು ತಡೆದ ಜಾಗದಿಂದ ಅದನ್ನುಎಸೆದು ಸಿಡಿಗಡ್ಡಿ ಬೀಳುವಂತೆ ಮಾಡಿದರೆ ಆಗ ಆಟ ಹೋಗುವುದು. ಆದರೆ ದೂರದಿಂದ ಹಾಗೆ ಗುರಿಯಿಟ್ಟು ಎಸೆಯುವುದು ಬಹಳ ಕಷ್ಟ. ಸೀತಾರಾಮು ಮೂರುಸಲ ಚಂಡು ಹೊಡೆದ. ಮೂರು ಸಲವೂ ಬುತ್ತಿ ಹಿಡಿಯುವುದಕ್ಕಾಗಲಿ, ಸಿಡಿಗಡ್ಡಿ ಹಾರಿಸುವುದಕ್ಕಾಗಲಿ ಆಗಲಿಲ್ಲ

"ಮಾರುಗೈ" ಎಂದು ಕೂಗಿದನು ಸೀತಾರಾಮು.

ಮುಳ್ಳು ತುಳಿದು ಕುಂಟುತ್ತಿದ್ದ ಶಾಮನನ್ನು ರಾಮಚಂದ್ರ "ಮಾರುಗೈ" ಆಗಿ ಕಳುಹಿಸಿದನು.

ಶಾಮನು ಬಂದು ಸೀತಾರಾಮುವಿನ ಮುಂದೆ ಅವನ ಕಡೆಗೆ ಬೆನ್ನು ಮಾಡಿಕೊಂಡು "ಮಾರುಗೈ"ಯಾಗಿ ನಿಂತನು. "ಮಾರುಗೈ" ಮೇಲೆ ನೇರವಾಗಿ ಮೂರುಬಾರಿ ಚಂಡು ಹೊಡೆಯಬೇಕು 'ಮಾರುಗೈ' ಹಿಂದಿನಿಂದ ಆಡಬೇಕಾಗಿದ್ದುದರಿಂದಲೂ ಚಂಡನ್ನು ಎತ್ತರದಲ್ಲಿ ಹೊಡೆಯಬೇಕಾಗಿದ್ದುದರಿಂದಲೂ ಆಡುವವರಿಗೆ ಎರಡು ತೊಂದರೆಗಳಿದ್ದವು. ಮೊದಲನೆಯದಾಗಿ "ಮಾರುಗೈ" ಮುಂದೆ ನಿಂತು ಇದಿರಿಗೆ ಇರುವವರನ್ನು ಮರೆಮಾಡುತ್ತಿದ್ದನು. ಇದರಿಂದ ಚಂಡು ಇದಿರು ಪಕ್ಷದವರಿಗೆ ಸಿಕ್ಕದಂತೆ ಹೊಡೆಯುವುದು ಸ್ವಲ್ಪ ಕಷ್ಟ. ಎರಡನೆಯದಾಗಿ "ಮಾರುಗೈ" ಮೇಲೆ ಚಂಡು ಹೋಗಬೇಕಾಗಿದ್ದರಿಂದ ಬುತ್ತಿಹಿಡಿಯಲು ಇದಿರು ಪಕ್ಷದವರಿಗೆ ಬಹಳ ಸುಲಭವಾಗುತ್ತಿತ್ತು.

ಶಾಮನು ಮೂರುಗೈಯ್ಯಾಗಿ ಬಂದುದರಿಂದ ರಾಮಚಂದ್ರನ ಕಡೆಯಲ್ಲಿ ಚೆಂಡು ಹಿಡಿಯಲು ಒಬ್ಬ ಕಡಿಮೆಯಾಯಿತು. ಉಳಿದವರಿಗೆ ಸ್ವಲ್ಪ ಹತ್ತಿರ ಬರುವಂತೆ ಹೇಳಿ ರಾಮಚಂದ್ರನು ಬುತ್ತಿ ಹಿಡಿಯಲು ಸಿದ್ಧನಾದನು.

ಮೂರುಗೈ ಮೇಲೆ ಒಂದಾಯಿತು. ಬುತ್ತಿಯೂ ಸಿಕ್ಕಲಿಲ್ಲ; ಸಿಡಿಗಡ್ಡಿಯೂ ಹಾರಲಿಲ್ಲ. ಎರಡಾಯಿತು, ಮೂರಾಯಿತು. ಸೀತಾರಾಮುವಿನ ಆಟ ಹೋಗಲಿಲ್ಲ. "ಕುದುರೆ ಸಿದ್ಧವಾಗಲಿ" ಎಂದು ಸೀತಾರಾಮುವಿನ ಕಡೆಯ ಹುಡುಗರು ಕೂಗಿಕೊಂಡರು. ಶಾಮನು ಸಿಡಿಗಡ್ಡಿಯ ಹಿಂದೆ ನಿಂತನು. ಸವಾರನು ನಾನು ತಾನೆಂದು ಸೀತಾರಾಮುವಿನ ಕಡೆಯವರು ಕುಣಿಯುತ್ತಿದ್ದರು. ಕುದುರೆಯ ಮೇಲೆ ಮೂರಾಟ ಆಡುವುದರೊಳಗೆ ಸೀತಾರಾಮುವಿನ ಆಟ ಹೋಗದಿದ್ದರೆ ಶಾಮನು ಕುದುರೆಯಾಗಿ ಒಬ್ಬ ಸವಾರನನ್ನು ಬೆನ್ನಿನ ಮೇಲೆ ಹೊರಬೇಕಾಗಿತ್ತು. ಶಾಮ ಮಂಕಾಗಿದ್ದನು.

ಈಗ, ಸೀತಾರಾಮು ಎಡಗೈಲಿ ಮೂರುಸಲ ಆಟ ಆಡಬೇಕು. ಅದರಲ್ಲೂ ಅವನು ಗೆದ್ದನು. ಒಂದಾಟ ಮುಗಿಯಿತು. ಶಾಮ ಕುದುರೆಯಾದನು. ಅವನ ಮೇಲೆ ಒಬ್ಬ ಹುಡುಗನು ಬಂದು ಸವಾರಿ ಮಾಡುತ್ತ ಕುಳಿತನು. ಸೀತಾರಾಮು ರಾಮಚಂದ್ರನಿಗೆ ಒಂದು ಕುದುರೆ ಹೊರಿಸಿದನು.

ಮೊದಲನೇ ಆಟದಲ್ಲಿ ಗೆದ್ದುದರಿಂದ ಸೀತಾರಾಮುವಿಗೆ ಉತ್ಸಾಹ ಹೆಚ್ಚಿತು. ಅವನ ಕಡೆಯ ಹುಡುಗರೆಲ್ಲ ಕುಣಿಯುತ್ತಿದ್ದರು. ಸೀತಾರಾಮುವು ಬಹಳ ಹುರುಪಿನಿಂದ ಆಟವಾಡಿದನು. ಎರಡನೇ ಮತ್ತು ಮೂರನೇ ಆಟಗಳಲ್ಲೂ ಅವನು ಗೆದ್ದನು. ರಾಮಚಂದ್ರನ ಮೇಲೆ ಮೂರು ಕುದುರೆ ಹೊರಿಸಿದನು.

ನಾಲ್ಕನೇ ಆಟದಲ್ಲಿ ಮೂರುಗೈ ಆಗಲು ರಾಮಚಂದ್ರನ ಕಡೆಯವರೆಲ್ಲ ಸ್ವಲ್ಪ ಹಿಂದುಮುಂದು ನೋಡಿದರು. ರಾಮಚಂದ್ರನು ತಾನೇ ಮೂರುಗೈ ಆಗಲು ಹೊರಟನು. ಆಗ ಮುತ್ತಾರಿ ಎಂಬ ಹುಡುಗ ಮೂರುಗೈಯಾಗಲು ಹೋಗುತ್ತಿದ್ದ ರಾಮಚಂದ್ರನನ್ನು ತಡೆದು "ನೀನು ನಮ್ಮ ಕಡೆಯ ಮೇಟಿ. ನೀನು ಕುದುರೆಯಾದರೆ ನಾವೆಲ್ಲರೂ ಕುದುರೆಯಾದ ಹಾಗೇ ಆಗುತ್ತದೆ. ಅದರಿಂದ ನೀನು ಹೋಗಬೇಡ;

ನಾನು ಹೋಗುತ್ತೇನೆ'' ಎಂದು ತಾನು ಮೂರುಗ್ಯೆಯಾಗಲು ಹೋದನು. ರಾಮಚಂದ್ರನಿಗೆ ಒಂದುಕಡೆ ದುಃಖ ಬಂತು; ಒಂದುಕಡೆ ಸಿಟ್ಟು ಬಂತು. ಹೇಗಾದರೂ ಮಾಡಿ ಆ ಆಟದಲ್ಲಿ ಸೀತಾರಾಮುವಿಗೆ ಕುದುರೆ ಕೊಡಬಾರ ದೆಂದು ನಿರ್ಧರಿಸಿದನು.

ಮೂರುಗ್ಯೆ ಮೇಲೆ ಒಂದಾಯಿತು; ಎರಡಾಯಿತು. ಮೂರನೇ ಏಟಿನಲ್ಲಿ ರಾಮಚಂದ್ರ ಬುತ್ತಿಹಿಡಿದನು. ಸೀತಾರಾಮುವಿನ ಆಟಹೋಯಿತು. ಕುದುರೆಗಳೆಲ್ಲ ಸವಾರನನ್ನು ಎತ್ತಿಹಾಕಿ ಓಡಿಬಂದವು.

ಕಾಳನು ಆಟಗಾರನಾಗಿ ಬಂದನು. ಅವನು ರಾಮಚಂದ್ರನ ಮೇಲೆ ಎರಡು ಕುದುರೆ ಹೊರಿಸಿ ಅಯ್ಯನಿಗೆ ಬುತ್ತಿಕೊಟ್ಟು ಆಟ ಕಳೆದುಕೊಂಡನು. ಉಳಿದ ಎಂಟು ಮಂದಿ ಆಟಗಾರರಲ್ಲಿ ಇಬ್ಬರು ಒಂದೊಂದು ಕುದುರೆ ಹೊರಿ ಸಿಯೂ, ಇಬ್ಬರು ಮೊದಲನೇ ಏಟಿನಲ್ಲೂ, ಇಬ್ಬರು ಮೂರುಗ್ಯೆ ಆಟ ದಲ್ಲೂ, ಉಳಿದ ಇಬ್ಬರು ಎಡಗ್ಯೆ ಆಟದಲ್ಲೂ ಆಟವನ್ನು ಕಳೆದುಕೊಂಡರು. ಒಟ್ಟಿನಲ್ಲಿ ರಾಮಚಂದ್ರನ ಮೇಲೆ ಸೀತಾರಾಮುವಿನ ಕಡೆಯವರು ಏಳು ಕುದುರೆ ಹೊರಿಸಿದ್ದರು.

ರಾಮಚಂದ್ರನ ಕಡೆಯವರು ಕುದುರೆ ಸವಾರಿಮಾಡಲು ಸಿದ್ಧರಾ ದರು. ಮೊದಲು ಅಯ್ಯ ಆಟ ಶುರುಮಾಡಿದನು. ತಾನು ಕಡೆಗೆ ಆಡು ವುದಾಗಿ ರಾಮಚಂದ್ರ ತಿಳಿಸಿದನು.

ಅಯ್ಯ ಎರಡು ಕುದುರೆಮಾಡಿ ಕಾಳನಿಗೆ ಬುತ್ತಿಕೊಟ್ಟು ಆಟವನ್ನು ಕಳೆದುಕೊಂಡನು. ಆಮೇಲೆ ಐದು ಜನ ಹುಡುಗರು ಒಂದೊಂದು ಕುದುರೆ ಮಾಡಿದರು. ರಾಮಚಂದ್ರನಲ್ಲದೆ ಉಳಿದ ಮೂವರು ಮೊದಲನೇ ಆಟ ದಲ್ಲೇ ಬುತ್ತಿಕೊಟ್ಟೋ ಸಿಡಿಗಡ್ಡಿ ಹಾರಿಯೋ ಆಟ ಕಳೆದುಕೊಂಡರು. ಅಂತೂ ರಾಮಚಂದ್ರನು ಆಟವಾಡಲು ಬರುವ ಹೊತ್ತಿಗೇ ಸೀತಾರಾಮು ವಿನ ಕಡೆಯವರು ಹೊರಿಸಿದ್ದ ಏಳು ಕುದುರೆಗಳೂ ತೀರಿಹೋಗಿದ್ದವು ತಮ್ಮ ಕಡೆ ಬಲವಾಗಿದ್ದುದರಿಂದ ರಾಮಚಂದ್ರನ ಕಡೆಯವರಿಗೆ ಒಂದು ಕುದುರೆಯನ್ನೂ ಕೊಡದೆ ಸೋಲಿಸಿಬಿಡುವೆವೆಂದು ತಿಳಿದಿದ್ದ ಸೀತಾರಾಮು ವಿಗೆ ಇದರಿಂದ ಬಹಳ ನಿರಾಸೆಯಾಯಿತು. ಅವಮಾನವೂ ಸಂಕಟವೂ

ಅಸೂಯೆಯಲ್ಲಿ ರೂಪುಗೊಂಡವು. ರಾಮಚಂದ್ರನ ಕುದುರೆಗಳೆಲ್ಲಾ ತಮ್ಮ ಮೇಲೆ ಹೊರುವುವೆಂದೂ ಅದರಿಂದ ಬಹಳ ಎಚ್ಚರಿಕೆಯಿಂದ ಆಡಿ ರಾಮಚಂದ್ರನ ಆಟವನ್ನು ಬೇಗ ಕಳೆಯಬೇಕೆಂದೂ ಅವನು ತನ್ನ ಕಡೆಯವರಿಗೆಲ್ಲ ಹೇಳಿದನು.

ರಾಮಚಂದ್ರ ಬಹಳ ತಾಳ್ಮೆಯಿಂದಲೂ ಜಾಣತನದಿಂದಲೂ ಆಟವಾಡುತ್ತಿದ್ದನು ಅವನು ಆಟದ ಮೇಲೆ ಆಟವನ್ನು ಗೆಲ್ಲುತ್ತಿದ್ದನು ಅವನ ಆಟವನ್ನು ಕಳೆಯಲು ಸೀತಾರಾಮುವಿನ ಕಡೆಯವರು ಸರ್ವಸಾಹಸ ಮಾಡುತ್ತಿದ್ದರೂ ಅವನು ಆಟವನ್ನು ಕಳೆದುಕೊಳ್ಳಲಿಲ್ಲ ಅವನು ಆರು ಆಟಗಳನ್ನು ಗೆದ್ದನು! ಸೀತಾರಾಮುವಿನ ಕಡೆಯವರಲ್ಲಿ ಆರುಜನ ಕುದುರೆಗಳಾದರು!! ರಾಮಚಂದ್ರನ ಕಡೆಯವರು ಸವಾರರಾಗಿ, ತಾವು ಕುದುರೆಗಳಾದಾಗ ತಮ್ಮನ್ನು ಹಂಗಿಸಿದ್ದ ಮಾತುಗಳಲ್ಲೇ ಅವರನ್ನು ಹಂಗಿಸುತ್ತಿದ್ದರು. ಮೊದಲಿನ ಆಟಗಳಲ್ಲೇ ಕುದುರೆಯಾಗಿದ್ದವರಿಗೆ ಸವಾರರನ್ನು ಹೊತ್ತು ಹೊತ್ತು ಸಾಕಾಗಿ ಹೋಗಿದ್ದಿತು ಸವಾರರು ಕುದುರೆಗಳನ್ನು ಅಂಕೆಯಲ್ಲಿಡಲು ಸರ್ವಸಾಹಸ ಮಾಡುತ್ತಿದ್ದರು!

ರಾಮಚಂದ್ರನು ಇನ್ನೂ ಆಟವಾಡುತ್ತಲೇ ಇದ್ದನು. ಕಾಳನನ್ನು ಕುದುರೆ ಮಾಡಬೇಕೆಂಬುದು ಅವನ ಹಟ ಸೀತಾರಾಮುವಿನ ಕಡೆ, ಅವನಲ್ಲದೆ ಕಾಳ, ನಾಗಪ್ಪ, ತಿಮ್ಮಪ್ಪ ಮಾತ್ರ ಉಳಿದಿದ್ದರು.

ಏಳನೇ ಆಟದಲ್ಲಿ "ಮಾರುಗೈ" ಆಗಲು ಸೀತಾರಾಮು ಕಾಳನನ್ನೇ ಕಳುಹಿಸಿದನು ಅದುವರೆಗೂ ಸವಾರನಾಗದೇ ಕುಳಿತಿದ್ದ ಅಯ್ಯ ಸವಾರಿ ಮಾಡಲು ಸಿದ್ಧನಾದನು.

'ಹುರುಳಿ ಹುಲ್ಲು ಸಿದ್ಧವಾಗಿದೆ. ಬರಲಿ ಅರಬ್ಬಿ ಠಾಕಣ' ಎಂದನು ಅಯ್ಯ. ಕಾಳ ಕೋಪವನ್ನು ನುಂಗಿಕೊಂಡು ಸುಮ್ಮನಿದ್ದನು.

ಆ ಆಟದಲ್ಲೂ ರಾಮಚಂದ್ರನು ಗೆದ್ದನು

"ಸಲಾಂ, ಸಲಾಂ" ಎಂದು ಹಂಗಿಸುತ್ತ ಅಯ್ಯ ಕಾಳನ ಮೇಲೆ ಹೇರಿಕೊಂಡನು. ಕಾಳನಿಗೆ ತುಂಬ ಸಿಟ್ಟು ಬಂದಿತ್ತು. ಆದರೆ ಮಾಡುವುದೇನು? ಆಟದ ನಿಯಮಕ್ಕೆ ಕಟ್ಟುಬಿದ್ದು ಸಿಟ್ಟನ್ನು ತಡೆದುಕೊಂಡು

"ಲೋ, ಅಯ್ಯ, ಇನ್ನೊಂದು ಆಟದಲ್ಲಿ ನಿನ್ನ ಮೇಲೆ ನಾನು ಸವಾರಿ ಮಾಡದೇ ಇದ್ದರೆ ನನ್ನ ಕಾಳ ಅಂತ ಕರೀ ಬೇಡ" ಎಂದನು.

ಅಯ್ಯನು ನಕ್ಕು "ಇನ್ನೊಂದು ಆಟದ ಮಾತು ಇರಲಿ. ಈಗ ಸರಿಯಾಗಿ ಹೊತ್ತುಕೋ, ಇಲ್ಲದೇ ಇದ್ದರೆ ನಾಲ್ಕು ಬಿಗಿದೇನು" ಎಂದನು.

ಕುದುರೆಯಾದವರು ಸರಿಯಾಗಿ ಬಾಗದೆ ಸವಾರರಿಗೆ ತೊಂದರೆ ಕೊಟ್ಟರೆ ಅವರಿಗೆ ಏಟು ಕೊಡಬಹುದೆಂಬುದು ಆಟದ ನಿಯಮ. ಅಯ್ಯನ ಮಾತನ್ನು ಕೇಳಿ ಸವಾರರೆಲ್ಲ ನಕ್ಕರು. ಕಾಳನಿಗೆ ಬಹಳ ಅವಮಾನವಾಯಿತು. ಬಹಳ ದುಃಖವೂ ಆಯಿತು.

ರಾಮಚಂದ್ರನು ಏಳು ಕುದುರೆಗಳನ್ನು ಸಾಲಾಗಿ ನಿಲ್ಲಿಸಿದ್ದನು. ಆದರಿಂದ ಇನ್ನು ಆಟಹೋದರೂ ಚಿಂತೆ ಇಲ್ಲ ಎಂದುಕೊಂಡನು. ಸೀತಾರಾಮುವಿಗೆ ಬಹಳ ಅವಮಾನ ಮಾಡಬೇಕೆಂದು ಮನಸ್ಸಿನಲ್ಲೇ ನಿರ್ಧರಿಸಿಕೊಂಡನು.

ಮೊದಲನೇ ಆಟಗಳಲ್ಲೇ ಕುದುರೆಯಾದವರೆಲ್ಲ ಸವಾರರನ್ನು ಹೊತ್ತು ಹೊತ್ತು ಬಳಲಿಹೋಗಿದ್ದರು. ಸ್ವಲ್ಪ ನೆಟ್ಟಗೆ ನಿಂತರೆ ಸವಾರರಿಂದ ಏಟು ಬೀಳುತ್ತಿತ್ತು. ಈ ಸ್ಥಿತಿಯಲ್ಲಿ ಎರಡು ಮೂರು ಹುಡುಗರು ಮೊದಮೊದಲು ಮೆಲ್ಲಗೂ ಅನಂತರ ಗಟ್ಟಿಯಾಗಿಯೂ ಅಳುವುದಕ್ಕೆ ಮೊದಲು ಮಾಡಿದರು. ಅವರಲ್ಲಿ ಕಾಳನ ದೊಡ್ಡಪ್ಪನ ಮಗ ಕಿಟ್ಟನೂ ಒಬ್ಬ. ಅವನಿಗೆ ಹದಿಮೂರು ವರ್ಷ. ಕಾಳನಿಗಿಂತ ಮೂರು ವರ್ಷ ಚಿಕ್ಕವನು.

"ಯಾಕೋ ಕಿಟ್ಟಿ" ಎಂದು ಕಾಳ ಕೇಳಿದ. ಕಿಟ್ಟಿ ಉತ್ತರಕೊಡುವ ಮೊದಲೇ ಸವಾರನಾಗಿದ್ದ ಮುತ್ತಾರಿ "ಕುದುರೆಗೆ ಹುರುಳಿ ಹೆಚ್ಚಾಯ್ತು" ಎಂದ. ಸವಾರರೆಲ್ಲ ನಕ್ಕರು.

ಕಿಟ್ಟಿ ಅಳುತ್ತ ಹೇಳಿದ : "ಮುತ್ತಾರಿ ಚಿಗುಟಿದ." ಮುತ್ತಾರಿ ಚಿಗುಟಿರಲಿಲ್ಲ. ಭಾರವನ್ನು ತಡೆಯಲಾರದೆ ಕಿಟ್ಟಿ ಹಾಗೆ ಸುಳ್ಳು ಹೇಳಿದ್ದ.

ಕಾಳನಿಗೆ ತುಂಬ ಅವಮಾನವಾಗಿತ್ತು. ಮತ್ತು ತುಂಬ ಸಿಟ್ಟೂ ಬಂದಿತ್ತು. ಜಗಳವಾಡಲು ಒಂದು ನೆವ ಸಿಕ್ಕಲು ಅವನಿಗೆ ಇನ್ನು ಸುಮ್ಮನಿರಲಾಗಲಿಲ್ಲ. ತನ್ನ ಮೇಲೆ ಸವಾರನಾಗಿದ್ದ ಅಯ್ಯನನ್ನು ಎತ್ತಿಹಾಕಿ

ಕಿಟ್ಟನ ಬೆನ್ನುಮೇಲೆ ಕುಳಿತಿದ್ದ ಮುತ್ತಾರಿಯನ್ನು ಕೆಳಕ್ಕೆ ಎಳೆದು ಚೆನ್ನಾಗಿ ನಾಲ್ಕು ಬಿಗಿದನು. ಮುತ್ತಾರಿ ಗಟ್ಟಿಯಾಗಿ ಅತ್ತನು. ಅದನ್ನು ನೋಡಿ ಅಯ್ಯನಿಗೆ ಸಿಟ್ಟು ಬಂತು. ಅವನು ಕಾಳನಿಗೆ ನಾಲ್ಕು ಬಿಗಿದನು. ಕಾಳ ನಿಗೂ ಅಯ್ಯನಿಗೂ ಹೊಡೆದಾಟ ಮೊದಲಾಯಿತು. ಈ ಗಲಾಟೆಯಲ್ಲಿ ಉಳಿದ ಕುದುರೆಗಳೂ ತಮ್ಮ ತಮ್ಮ ಸವಾರರನ್ನು ಎತ್ತಿಹಾಕಿ ಆ ವ್ಯಾಜ್ಯ ನಲ್ಲಿ ಸೇರಿಪವು. ಸವಾರರೂ ತಮ್ಮ ತಮ್ಮ ಕುದುರೆಗಳೊಡನೆ ಹೊಡೆ ದಾಟಕ್ಕೆ ತೊಡಗಿದರು. ರಾಮಚಂದ್ರನೂ ಸೀತಾರಾಮುವೂ ಬಂದು, ತಮ್ಮ ತಮ್ಮ ಕಡೆಯವರನ್ನು ವಿಚಾರಿಸಿ, ತಮ್ಮ ತಮ್ಮ ಪಕ್ಷವನ್ನು ವಹಿಸಿ ಕೊಂಡು ಜಗಳಕ್ಕೆ ನಿಂತರು. ಈ ವ್ಯಾಜ್ಯದಲ್ಲಿ ಕೆಲವರಿಗೆ ಚೆನ್ನಾಗಿಯೇ ಏಟುಗಳು ಬಿದ್ದವು. ಕೈಯಲ್ಲಿ ಹೊಡೆದಾಡುತ್ತಿದ್ದವರು ಸಿಕ್ಕಿದ ದೊಣ್ಣೆ ಗಳನ್ನೂ ಕಲ್ಲುಗಳನ್ನೂ ತೆಗೆದುಕೊಂಡರು. ವ್ಯಾಜ್ಯವು ದೊಡ್ಡದಾಗಿ ಬೆಳೆ ಯುವಷ್ಟರಲ್ಲೇ ತೋಟದಿಂದ ಬರುತ್ತಿದ್ದ ಕಾಳನ ದೊಡ್ಡಪ್ಪ ಜವರಾಯಪ್ಪ ನವರು ಬಂದು ಎಲ್ಲವನ್ನೂ ವಿಚಾರಿಸಿ, ಕೈಗೆ ಸಿಕ್ಕಿದ ಹುಡುಗರಿಗೆಲ್ಲಾ ಎರಡೆರಡು ಬಿಗಿದು, ಎಲ್ಲರನ್ನೂ ಓಡಿಸಿ, ತಮ್ಮ ಮಗನನ್ನು ಹಿಡಿದುಕೊಂಡು ಚೆನ್ನಾಗಿ ಚಚ್ಚುತ್ತ ಮನೆಗೆ ಎಳೆದುಕೊಂಡು ಹೋದರು.

ರಾತ್ರಿ ಹುಡುಗರಿಗೆಲ್ಲ ಮನೆಯಲ್ಲಿ ಚೆನ್ನಾಗಿ ಏಟುಬಿದ್ದವು. ಅಂತೂ ಅಂದಿನ ಹೊಡೆದಾಟದಿಂದ ಒಗ್ಗಟ್ಟಾಗಿದ್ದ ಕಳಸಾಪುರದ ಹುಡುಗರು ಎರಡು ಪಂಗಡವಾದರು.

## — ವರಮಹಾಲಕ್ಷ್ಮಿಯ ಹಬ್ಬ —

ಕಳಸಾಪುರದವರಿಗೆ ಹಬ್ಬಗಳಲ್ಲೆಲ್ಲ ವರಮಹಾಲಕ್ಷ್ಮಿಯ ಹಬ್ಬವೇ ದೊಡ್ಡ ಹಬ್ಬ. ಆ ಹಬ್ಬದ ದಿನ ವರಮಹಾಲಕ್ಷ್ಮಿ ಅಮ್ಮನವರು ಕಳಸಾ ಪುರದಲ್ಲಿ ಪ್ರತ್ಯಕ್ಷವಾಗಿ ಬಂದು ದರ್ಶನ ಕೊಟ್ಟಿದ್ದರು. ಅನೇಕ ವರ್ಷಗಳ ಹಿಂದೆ ಕಳಸಾಪುರದಲ್ಲಿ ಹೆಚ್ಚು ಬ್ರಾಹ್ಮಣರ ಮನೆಗಳಿರಲಿಲ್ಲ. ಕೇವಲ ನಾಲ್ಕೈದು ಮನೆಗಳು ಮಾತ್ರ ಇದ್ದವು. ಬರುಬರುತ್ತ ಕಳಸಾಪುರದಲ್ಲಿ

ಶಾನುಭೋಗರ ಮನೆಯೂ ಸೇರಿ ಹೆಚ್ಚುಕಮ್ಮಿ ನಲವತ್ತು ಮನೆಗಳಿಗೆ ಏರಿತ್ತು. ಎಲ್ಲರ ಮನೆಗಳಲ್ಲೂ ತುಂಬ ಮಕ್ಕಳಿದ್ದರು. ಶಾನುಭೋಗರ ಮನೆಯಲ್ಲಿ ಆ ದಿನ ವರಮಹಾಲಕ್ಷ್ಮೀ ಅಮ್ಮನವರ ವ್ರತವನ್ನು ಬಹಳ ನಿಷ್ಠೆಯಿಂದಲೂ ಸಂಭ್ರಮದಿಂದಲೂ ಮಾಡುತ್ತಿದ್ದರು.

ಹೀಗಿರಲು, ಒಂದು ಸಲ, ಈ ಹಬ್ಬದ ಹಿಂದಿನ ದಿಸ, ಮನೆಯ ಯಜಮಾನಿಯು ಮಕ್ಕಳಿಗೆ ಊಟಕ್ಕೆ ಬಡಿಸುತ್ತಿದ್ದಳು. ಮಕ್ಕಳು ಹಾಲು ಮೊಸರು ಬೇಕೆಂದು ರಗಳೆ ಮಾಡುತ್ತಿದ್ದರು. ಹಬ್ಬದ ದಿನ ಅಮ್ಮನವರಿಗೆ ನೈವೇದ್ಯಕ್ಕೆಂದು ಹಾಲು ಮೊಸರನ್ನು ಮೀಸಲು ಇಟ್ಟಿದ್ದರು. ಆದರಿಂದ ಯಜಮಾನಿ ಹುಡುಗರನ್ನು ಗದರಿಸಿ, ಹಾಲು ಮೊಸರು ಬಡಿಸದೆ ಮನೆಯ ಹತ್ತಿರವಿದ್ದ ಭಾವಿಯಿಂದ ನೀರುತರಲು ಹೋದಳು. ಹುಡುಗರು ಎಲೆಯ ಮುಂದೆ ಕುಳಿತು ಹಾಲು ಮೊಸರಿಗಾಗಿ ಅಳುತ್ತಲೇ ಇದ್ದರು.

ಮನೆಯ ಯಜಮಾನಿ ನೀರಿಗೆಂದು ಹೋದ ಸ್ವಲ್ಪಹೊತ್ತಿನ ಮೇಲೆ, ವರಮಹಾಲಕ್ಷ್ಮಿ ಅಮ್ಮನವರು ಮಕ್ಕಳ ಮೇಲೆ ಪ್ರೀತಿಯಿಂದ ಮನೆಯ ಯಜಮಾನಿಯಂತೆಯೇ ಬಂದು, ಮೀಸಲೆಂದು ಇಟ್ಟಿದ್ದ ಹಾಲು ಮೊಸರು ಬೆಣ್ಣೆಗಳನ್ನೆಲ್ಲ ಮಕ್ಕಳಿಗೆ ಬೇಕು ಬೇಕಾದಷ್ಟು ಬಡಿಸಿಬಿಟ್ಟರು. ಮಕ್ಕಳ ಸಂತೋಷ ಅಷ್ಟಿಷ್ಟಲ್ಲ. ಅವರು ಮನಸ್ಸು ಬಂದಷ್ಟು ಹಾಲು ಮೊಸರನ್ನು ಹಾಕಿಸಿಕೊಂಡರು. ಅವರ ಕೈ ಮೈ ಎಲ್ಲ ಹಾಲು ಮೊಸರಾಗಿತ್ತು. "ಅಮ್ಮಾ ನನಗೆ ಮೊಸರು, ಅಮ್ಮಾ ನನಗೆ ಹಾಲು, ಅಮ್ಮಾ ನನಗೆ ಬೆಣ್ಣೆ" ಎಂದು ಹುಡುಗರು ಕೂಗುತ್ತ ಕೆನೆಯುತ್ತ ಕೇಕೆ ಹಾಕುತ್ತಿದ್ದರು. ಅಮ್ಮಾನವರೂ ಹುಡುಗರನ್ನೆಲ್ಲ ಒಳ್ಳೆಯ ಮಾತುಗಳಿಂದ ಸಂತೈಸುತ್ತ, ಅವರೊಡನೆ ನಕ್ಕು ನಲಿಯುತ್ತ, ಅವರು ಕೇಳಿದಷ್ಟು ಹಾಲು ಮೊಸರು ಬೆಣ್ಣೆಗಳನ್ನು ಬಡಿಸಿ, ಉಪಚಾರಮಾಡಿ, ಸ್ವಲ್ಪಹೊತ್ತು ಕಳೆಯಲು ನಡುಮನೆಗೆ ಹೋದರು. ಅಷ್ಟರಲ್ಲಿ, ನೀರನ್ನು ತಂದ ಮನೆಯ ಯಜಮಾನಿ ಹುಡುಗರೆಲ್ಲ ಹಾಲು ಮೊಸರು ತಿನ್ನುತ್ತಿದ್ದುದನ್ನು ಕಂಡು, ಮೀಸಲಳಿಸಿದರೆಂದು ಕೋಪಗೊಂಡು ಸ್ವಲ್ಪ ವಯಸ್ಸಾದ ಹುಡುಗರಿಗೆ ಹೊಡೆಯಹೋದರು. ಆಗ ಆ ಹುಡುಗರು ಅಳುತ್ತ "ಯಾಕಮ್ಮ ಹೊಡಿತೀಯೆ ?" ಎಂದರು.

"ವಿಶಾಸಲು ಇಟ್ಟಿದ್ದ ಹಾಲು ಮೊಸರೆಲ್ಲಾ ಹಾಕಿಕೊಂಡಿದೀರಲ್ಲ?" ಎಂದರು ಅವರಮ್ಮ.

"ಊ, ನಾವೇನು ಹಾಕಿಕೊಳ್ಳಲಿಲ್ಲ. ನೀನೇ ಬಂದು ಬಡಿಸಿದೆ ಯಲ್ಲಮ್ಮಾ" ಎಂದರು ಹುಡುಗರು.

ಅವರಮ್ಮನಿಗೆ ಆಶ್ಚರ್ಯವಾಯಿತು. "ಏನು? ನಾನು ಬಂದು ಬಡಿಸಿದೆನೆ?" ಎಂದರು.

"ನಮಗೆ ಬೇಕುಬೇಕಾದಷ್ಟು ನೀನೇ ಬಡಿಸಿದೆ. ಈಗ ನಡುಮನೆಗೆ ಹೋದೆ. ಮತ್ತೆ ಅಲ್ಲಿಂದ ಬಂದು ನಮ್ಮನ್ನ ಬೈತೀಯೆ?" ಎಂದರು ಹುಡುಗರು.

ಯಜಮಾನಿ ಕೂಡಲೇ ನಡುಮನೆಗೆ ಹೋದಳು. ಸ್ವಲ್ಪ ವಯಸ್ಸಾದ ಹುಡುಗರೂ ಹಿಂದೆ ಹೋದರು.

"ಅಮ್ಮಾ, ಅಮ್ಮಾ, ನಮಗೆ ಹಾಲು ಮೊಸರು ಬಡಿಸಿದ ಅಮ್ಮ ಅಲ್ಲಿ" ಎಂದು ಹುಡುಗರು ಕೂಗಿ ಕದವಿನ ಕಡೆ ಕೈತೋರಿಸಿದರು.

ನಕ್ಷತ್ರಗಳಂತೆ ಹೊಳೆಯುತ್ತಿದ್ದ ಅನೇಕ ಒಡವೆಗಳಿಂದ ಅಲಂಕರಿಸಿಕೊಂಡು ಚಂದ್ರನಂತೆ ಹೊಳೆಯುತ್ತಿದ್ದ ಹೆಂಗಸೊಬ್ಬಳು ಜರಿಯ ಪೀತಾಂಬರವನ್ನುಟ್ಟು, ಕಾಲಂದುಗೆಗಳು ಝಣಝಣವೆಂದು ಶಬ್ದಮಾಡುತ್ತಿರಲು ಕದವಿನ ಹಿಂದಕ್ಕೆ ಹೋದುದನ್ನು ಎಲ್ಲರೂ ನೋಡಿದರು. ಮನೆಯ ಯಜಮಾನಿ ಕದವಿನ ಕಡೆಗೆ ಓಡಿಹೋಗಿ ಆಕೆಯನ್ನು ಹಿಡಿದುಕೊಳ್ಳಬೇಕೆಂದು ಕೈ ನೀಡಿದಳು. ಆವರೆ ಅಷ್ಟರಲ್ಲೇ ಆಕೆ ಮರೆಯಾಗಿಬಿಟ್ಟಿದ್ದಳು. ಕೈಗೆ ಆಕೆಯ ಪೀತಾಂಬರದ ಸೆರಗು ಸಿಕ್ಕಿತು; ಕೈಗೆ ಸಿಕ್ಕಿದಷ್ಟು ಮಾತ್ರ ಕೈಲೇ ಉಳಿದುಕೊಂಡಿತು.

ವರಮಹಾಲಕ್ಷ್ಮಿ ಅಮ್ಮನವರೇ ಅಂದು ಮನೆಗೆ ಬಂದು ಮಕ್ಕಳಿಗೆ ತಾವೇ ಊಟಕ್ಕೆ ಬಡಿಸಿದರು. ಮಕ್ಕಳೇ ದೇವರೆಂಬುದನ್ನು ತೋರಿಸಿಕೊಟ್ಟರು. ಅಂದು ಅಮ್ಮನವರು ಅನುಗ್ರಹಿಸಿದ ಪೀತಾಂಬರದ ಸೆರಗನ್ನು

ಇಟ್ಟು ಪೂಜೆಮಾಡುತ್ತಾ ಬಂದರು. ಅಮ್ಮನವರ ದಯದಿಂದ ಮನೆತುಂಬ ಮಕ್ಕಳಾಗಿ, ಆ ಒಂದು ಮನೆ ನಮ್ಮ ಕಥೆ ಮೊದಲಾಗುವ ಹೊತ್ತಿಗೆ ನಲವತ್ತು ಮನೆಯಾಗಿ, ಪ್ರತಿ ಮನೆಯಲ್ಲೂ ಮಕ್ಕಳು ಮರಿಗಳಾಗಿ ಊರು ದಿನದಿನಕ್ಕೂ ಅಭಿವೃದ್ಧಿಗೆ ಬರುತ್ತಿತ್ತು. ಅಮ್ಮನವರು ಧರಿಸಿದ್ದ ಪೀತಾಂಬರದ ಸೆರಗು ತಲೆತಲಾಂತರದಿಂದಲೂ ಮನೆಯ ಹಿರಿಯ ಮಗನ ಸಂತತಿಯವರಿಗೆ ಸೇರುತ್ತ ಬಂದಿದ್ದಿತು.

ಕಳಸಾಪುರದ ಹೆಣ್ಣುಮಕ್ಕಳೆಲ್ಲ ವರಮಹಾಲಕ್ಷ್ಮಿಯ ಹಬ್ಬಕ್ಕೆ ತೌರು ಮನೆಗೆ ಬರುತ್ತಿದ್ದರು. ಸುತ್ತಮುತ್ತ ಬಹು ಊರುಗಳಿಂದ ನೆಂಟರಿಷ್ಟರು ಈ ಹಬ್ಬಕ್ಕೆ ತಪ್ಪದೆ ಬರುತ್ತಿದ್ದರು. ಇಷ್ಟಲ್ಲದೆ, ಅನೇಕ ಬ್ರಾಹ್ಮಣ್ಯವೂ ಅಮ್ಮನವರ ದರ್ಶನಕ್ಕಾಗಿ ಕಳಸಾಪುರಕ್ಕೆ ಬಂದು ನಾಲ್ಕೈದು ದಿನ ಅಲ್ಲಿರುತ್ತಿದ್ದಿತು. ಅವರನ್ನೆಲ್ಲ ಕಳಸಾಪುರದ ಗೃಹಸ್ಥರು ಚೆನ್ನಾಗಿ ಆದರಿಸುತ್ತಿದ್ದರು. ಈ ಹಬ್ಬಕ್ಕೆ ಎಷ್ಟು ಜನ ಬಂದರೂ ಅವರಿಗೆ ತೃಪ್ತಿಯಾಗುತ್ತಿರಲಿಲ್ಲ. ಆದರಣೆ, ಮೃಷ್ಟಾನ್ನಭೋಜನ, ಕೈತುಂಬ ದಕ್ಷಿಣೆ, ಮೇಲಾಗಿ ಅಮ್ಮನವರ ಯಶಸ್ಸು ಇವುಗಳಿಂದ ಆಕರ್ಷಿತರಾಗಿ ವರ್ಷವರ್ಷಕ್ಕೂ ಹೆಚ್ಚು ಹೆಚ್ಚು ಜನರು ಕಳಸಾಪುರಕ್ಕೆ ಬರುತ್ತಿದ್ದರು. ಈ ಹಬ್ಬವು ಕಳಸಾಪುರದ ಕೀರ್ತಿಯನ್ನು ಬಹುದೂರದವರೆಗೂ ಹಬ್ಬಿಸಿದ್ದಿತು.

ರಾಮಚಂದ್ರನು ಕಳಸಾಪುರಕ್ಕೆ ಬಂದಾಗ ಮಹಾಲಕ್ಷ್ಮಿಯ ಹಬ್ಬಕ್ಕೆ ಇನ್ನೂ ಹತ್ತು ದಿನವಿತ್ತು. ಪ್ರತಿ ಮನೆಯಲ್ಲೂ ಹಬ್ಬದ ಸಿದ್ಧತೆಗಳಾಗುತ್ತಿದ್ದವು. ಪ್ರತಿ ಮನೆಯಲ್ಲೂ ಹೆಣ್ಣುಮಕ್ಕಳನ್ನು ಗಂಡನ ಮನೆಯಿಂದ ಕರೆಸಿಕೊಳ್ಳಲು ಗಾಡಿ ಕಳುಹಿಸುವ ಸಂಭ್ರಮ; ಹಬ್ಬಕ್ಕೆ ಬರಲು ನೆಂಟರಿಷ್ಟರಿಗೆ ಹೇಳಿ ಕಳುಹಿಸುವ ಸಂಭ್ರಮ. ಮನೆಮನೆಯೂ ಸುಣ್ಣಕಾರಣೆಗಳಿಂದ ಹೊಳೆಯುತ್ತಿತ್ತು. ಬೀದಿಗಳನ್ನೆಲ್ಲಾ ಚೊಕ್ಕಟವಾಗಿ ಗುಡಿಸಿದ್ದರು.

ಈ ಹಬ್ಬದಲ್ಲಿ ಕಳಸಾಪುರದ ಹುಡುಗರ ಉತ್ಸಾಹಕ್ಕೆ ಮಿತಿಯಿಲ್ಲ. ಏಕೆಂದರೆ, ಆಗ ಅವರಿಗೆ ಹೆಚ್ಚು ಚೇಷ್ಟೆಮಾಡಲು ಹೆಚ್ಚು ಅವಕಾಶವಿರುತ್ತಿತ್ತು. ಬೆಳವಾಡಿ, ಜಾವಗಲ್, ನೇರಲಿಗೆ, ಅರಕೆರೆ, ಬಾಣಾವರ, ಅರಸೀಕೆರೆ, ಹಾರನಹಳ್ಳಿ, ಮತಿಘಟ್ಟ, ಗಟ್ಟದಹಳ್ಳಿ, ಹಳೇಬೀಡು, ಬೈಲಹಳ್ಳಿ,

ಬೇಲೂರು, ಮರಲೆ ಮುಂತಾದ ಸುತ್ತಲ ಹತ್ತಿರದ ಮತ್ತು ದೂರದ ಊರು ಗಳಿಂದ ಹುಡುಗರು ಈ ಹಬ್ಬಕ್ಕೆ ಕಳಸಾಪುರಕ್ಕೆ ಬರುತ್ತಿದ್ದರು. ಕಳಸಾ ಪುರದ ಹುಡುಗರು ಅವರನ್ನೆಲ್ಲ ಕೇಟಲೆಮಾಡಿ ಪೀಡಿಸುತ್ತಿದ್ದರು.

ಈ ಹಬ್ಬದಲ್ಲಿ ಕಳಸಾಪುರಕ್ಕೆ ಬರುತ್ತಿದ್ದ ಪರಸ್ಥಳದ ಪ್ರತಿ ಹುಡುಗ ನಿಗೂ ಸುಮಾರು ಒಂದ್ರೂವರೆ ಎರಡು ರೂಪಾಯಿನಷ್ಟು ದಕ್ಷಿಣೆ ಬರು ತ್ತಿತ್ತು. ಪ್ರತಿ ಮನೆಯಲ್ಲೂ ದೊಡ್ಡವರಿಗೆ ಎರಡು ಅಣೆ, ಹುಡುಗರಿಗೆ ಒಂದು ಆಣೆಯಂತೆ ದಕ್ಷಿಣೆ ಕೊಡುತ್ತಿದ್ದರು. ಎಲ್ಲರ ಮನೆಯಲ್ಲೂ ಕೊಡು ತ್ತಿದ್ದ ಚರಪನ್ನು ಒಂದೆರಡು ದಿನಗಳಲ್ಲಿ ತಿಂದು ಮುಗಿಸಲು ಸಾಧ್ಯವೇ ಇರು ತ್ತಿರಲಿಲ್ಲ. ಕೋಸುಂಬರಿ, ಬಾಳೇಹಣ್ಣಿನ ರಸಾಯನ ಮೊದಲಾದ ಆ ದಿನವೇ ತಿಂದು ಮುಗಿಸಬೇಕಾದ ಚರ್ಪುಗಳಲ್ಲದೆ, ಕೊಬರಿಸಕ್ಕರೆ, ಕಡಲೇ ಹಿಟ್ಟು, ಪಂಚಕಜ್ಜಾಯ ಮೊದಲಾದ ತಿಂಡಿಗಳೂ ಹೇರಳವಾಗಿ ಸಿಕ್ಕು ತ್ತಿತ್ತು. ಆದರೆ ಕಳಸಾಪುರದ ಹುಡುಗರ ಕಾಟವನ್ನು ಮಾತ್ರ ಸಹಿಸು ವುದು ಅವರಿಗೆ ಕಷ್ಟವಾಗುತ್ತಿತ್ತು.

ಹೊರಗಿನ ಹುಡುಗರಿಗೂ ಕಳಸಾಪುರದ ಹುಡುಗರಿಗೂ ಈ ಹಬ್ಬ ದಲ್ಲಿ ಸಾಮಾನ್ಯವಾಗಿ ಹೊಡೆದಾಟವಾಗುತ್ತಲೇ ಇತ್ತು. ಕಳಸಾಪುರದ ಹುಡುಗರು ಯಾವ ಚೇಷ್ಟೆಯನ್ನೇ ಮಾಡಲಿ ಎಲ್ಲರೂ ಒಟ್ಟಾಗಿ ಮಾಡು ತ್ತಿದ್ದುದರಿಂದ ಈ ಹೊಡೆದಾಟಗಳಿಂದ ಅವರಿಗೆ ಹೆಚ್ಚು ತೊಂದರೆಯಾಗು ತ್ತಿರಲಿಲ್ಲ. ಹೊರಗಿನ ಹುಡುಗರು ಏಟು ತಿನ್ನುವುದಲ್ಲದೆ, ಅನೇಕವೇಳೆ, ಹಬ್ಬದಲ್ಲಿ ಸಿಕ್ಕಿದ ದಕ್ಷಿಣೆಯನ್ನೂ ತಿಂಡಿಯ ಗಂಟನ್ನೂ ಕಳಸಾಪುರದ ಹುಡುಗರಿಗೆ ಕೊಟ್ಟು ಅವರ ಕೈಯಿಂದ ತಪ್ಪಿಸಿಕೊಳ್ಳುವ ಸ್ಥಿತಿಗೂ ಬಂದಿ ದ್ದರು. ಹೀಗೆ ಸುಮಾರು ಮೂರು ನಾಲ್ಕು ವರ್ಷಗಳು ಹೊಡೆದಾಟವಾದ ಮೇಲೆ, ಕಳಸಾಪುರದ ಹುಡುಗರಿಗೆ, ಸೀತಾರಾಮು ಮೇಟಿಯಾದಮೇಲೆ, ಈ ಹಬ್ಬಕ್ಕೆ ಹೊರಗಿನಿಂದ ಬರುವ ಪ್ರತಿ ಹುಡುಗನೂ ನಾಲ್ಕಾಣೆಯಂತೆ ಕಾಣಿಕೆ ಕೊಡಬೇಕೆಂದೂ, ಕಳಸಾಪುರದ ಹುಡುಗರು ಯಾರಿಗೂ ತೊಂದರೆ ಕೊಡಕೂಡದೆಂದೂ ತೀರ್ಮಾನ ಮಾಡಿದನು. ಹೊರಗಿನ ಹುಡು ಗರು ಈ ನಿಯಮಕ್ಕೆ ಒಪ್ಪಿಕೊಳ್ಳಲಿಲ್ಲದಿದ್ದರೆ ಏಟು ಬೀಳುತ್ತಿತ್ತು. ಅದರಿಂದ

ಬೇರೆ ದಾರಿಯಿಲ್ಲದೆ ಎಲ್ಲರೂ ಈ ಏರ್ಪಾಡಿಗೆ ಒಪ್ಪಿಕೊಂಡರು. ಈ ನಿಯಮದಂತೆ ಒಂದು ವರ್ಷ ಮೂರೂವರೆ ರೂಪಾಯಿ, ಇನ್ನೊಂದು ವರ್ಷ ಐದು ರೂಪಾಯಿಯೂ ಬಂದಿತ್ತು. ಹುಡುಗರೆಲ್ಲ ಸೇರಿ ಆ ಹಣವನ್ನು ರಂಗನ ಗಿರಿಯಮೇಲೆ ಬೆಳದಿಂಗಳೂಟ ಮಾಡಿ ಖರ್ಚುಮಾಡಿದ್ದರು.

ಈ ನಿಯಮವೇರ್ಪಟ್ಟ ಮೂರನೇ ವರ್ಷದ ಹಬ್ಬದ ಹೊತ್ತಿಗೆ ರಾಮಚಂದ್ರನು ಕಳಸಾಪುರಕ್ಕೆ ಬಂದಿದ್ದನು.

ರಾಮಚಂದ್ರನು ಕಳಸಾಪುರಕ್ಕೆ ಬರುವುದಕ್ಕೆ ಹದಿನೈದು ದಿನ ಮುಂಚೆ ಹುಡುಗರಿಗೆ ಸಂಬಂಧಿಸಿದ ಒಂದು ಮುಖ್ಯ ಘಟನೆ ನಡೆಯಿತು. ಜಾವಗಲ್ ಸಂತೆಗೆಂದು ಹೋಗಿದ್ದ ನಾಲ್ವರು ಕಳಸಾಪುರದ ಹುಡುಗರನ್ನು ಬೆಳವಾಡಿ, ಜಾವಗಲ್ ಮತ್ತು ಸೀರಿಲಿಗೆಯ ಹತ್ತು ಹನ್ನೆರಡು ಹುಡುಗರು ಸೇರಿ, ವ್ಯಾಜ್ಯ ತೆಗೆದು ಚೆನ್ನಾಗಿ ಹೊಡೆದಿದ್ದರು. ಮತ್ತು ಆ ವರ್ಷದ ಹಬ್ಬದಲ್ಲಿ ಕಾಣಿಕೆ ಕೊಡುವುದಿಲ್ಲವೆಂದೂ ಕಳಸಾಪುರದ ಹುಡುಗರಿಗೆಲ್ಲಾ ಚೆನ್ನಾಗಿ ಬುದ್ಧಿ ಕಲಿಸುವೆವೆಂದೂ ಹಟ ತೊಟ್ಟಿದ್ದರು. ಕಳಸಾಪುರದ ಹುಡುಗರು ಈ ವಿಚಾರವನ್ನು ತಿಳಿದು ಅವರಿಗೆಲ್ಲ ತಕ್ಕ ರೀತಿಯಲ್ಲಿ ಶಿಕ್ಷೆ ಮಾಡಬೇಕೆಂದೂ ಹಿಂದಿನ ವರ್ಷಗಳಿಗಿಂತ ಹೆಚ್ಚು ಕಾಣಿಕೆ ವಸೂಲು ಮಾಡಬೇಕೆಂದೂ ನಿರ್ಧರಿಸಿದ್ದರು.

ಆದರೆ ಹಬ್ಬ ಇನ್ನು ಐದಾರು ದಿನವಿದೆ ಎನ್ನುವಾಗ ಕಳಸಾಪುರದ ಹುಡುಗರು ತಮ್ಮ ತಮ್ಮಲ್ಲೇ ಹೊಡೆದಾಡಿ, ಎರಡು ಪಂಗಡವಾಗಿದ್ದರು. ಎಲ್ಲ ಹುಡುಗರೂ ಒಟ್ಟಾಗಿ ಆಟವಾಡುತ್ತಿದ್ದುದು ಹೋಗಿ ಬೇರೆ ಬೇರೆ ಎರಡು ಕಡೆ ಆಟವಾಡುವಂತಾಯಿತು. ಸೀತಾರಾಮುವಿನ ಕಡೆಯವರು ಗಣೇಶನ ಬಯಲಲ್ಲೇ ಆಡುತ್ತಿದ್ದರು. ರಾಮಚಂದ್ರನ ಕಡೆಯವರು ಕೆರೆಯ ಅಂಗಳದಲ್ಲಿ ಆಡುತ್ತಿದ್ದರು. ತೋಟಕ್ಕೆ ಹೋಗುವಾಗ, ನೇರಳೇಹಣ್ಣಿಗೆ ಹೋಗುವಾಗ, ಜೇನಿಗೆ ಹೋಗುವಾಗ ಒಟ್ಟಾಗಿ ಹೋಗುತ್ತಿದ್ದ ಕಳಸಾಪುರದ ಹುಡುಗರು ಈಗ ಎರಡು ಗುಂಪಾಗಿ ಹೋಗುತ್ತಿದ್ದರು. ಮತ್ತು ಸಮಯ ಸಿಕ್ಕಿದಾಗಲೆಲ್ಲಾ ಎರಡು ಗುಂಪಿನವರೂ ಒಬ್ಬರೊಡನೊಬ್ಬರು ನೆವ ತೆಗೆದು ಜಗಳವಾಡುತ್ತಿದ್ದರು.

ಹೀಗಿರುವಾಗ ವರಮಹಾಲಕ್ಷ್ಮಿಯ ಹಬ್ಬವು ಬಂದಿತು.

ಎಲ್ಲರ ಮನೆಗೂ ಅನೇಕ ನೆಂಟರಿಷ್ಟರು ಬಂದಿದ್ದರು. ದೂರದ ಊರುಗಳಿಂದ ಅನೇಕ ಬ್ರಾಹ್ಮಣರು ಬಂದಿದ್ದರು. ಊರಿಗೆ ಊರೇ ಸಂತೋಷದಿಂದ ನಲಿಯುತ್ತಿತ್ತು. ರಾಮಚಂದ್ರನ ಅಜ್ಜ ಕೃಷ್ಣಶಾಸ್ತ್ರಿಗಳೂ ಆ ಸಲದ ಹಬ್ಬಕ್ಕೆ ಉಳಿದುಕೊಂಡಿದ್ದುದರಿಂದ ಊರಿನವರ ಉತ್ಸಾಹ ಶ್ರದ್ಧೆ ಹೆಚ್ಚಾಗಿತ್ತು.

## — ಇದಿರಾಳಿಗಳು —

ಬೆಳವಾಡಿ, ಜಾವಗಲ್, ನೇರಲಿಗೆ, ಅರಕೆರೆ ಮೊದಲಾದ ಊರುಗಳ ಹುಡುಗರು ಒಂದುಕಡೆ ಸೇರಿ ಹಬ್ಬಕ್ಕೆ ಕಳಸಾಪುರಕ್ಕೆ ಹೋಗಬೇಕೆ? ಬೇಡವೆ? ಎಂಬುದನ್ನು ಆಲೋಚಿಸಿದರು. ಹಟ ತೊಟ್ಟಿದ್ದುದರಿಂದ ಹಬ್ಬಕ್ಕೆ ಹೋಗಲೇಬೇಕೆಂದೂ, ಹೋಗದೆ ಇದ್ದರೆ ಬಹಳ ಅವಮಾನ ವಾಗುವುದೆಂದೂ, ಸುತ್ತಲ ಎಲ್ಲ ಊರುಗಳಿಗೂ ಹೇಳಿ ಕಳುಹಿಸಿ ಎಲ್ಲ ಹುಡುಗರೂ ಒಟ್ಟಾಗಿ ಕಳಸಾಪುರಕ್ಕೆ ಹೋಗಿ, ಒಟ್ಟಾಗಿದ್ದು ಕಳಸಾಪುರದ ಹುಡುಗರಿಗೆ ಕಾಣಿಕೆ ಕೊಡುವುದನ್ನು ನಿಲ್ಲಿಸಬೇಕೆಂದೂ, ಸಾಧ್ಯವಾದರೆ ಅವರಿಗೆಲ್ಲಾ ನಾಲ್ಕು ನಾಲ್ಕು ಬಿಗಿದು ಬರಬೇಕೆಂದೂ ತೀರ್ಮಾನಿಸಿದರು. ವರ್ಷ ವರ್ಷದಂತೆ ಒಂದು ದಿನ ಮುಂಚಿತವಾಗಿ ಹೋಗುವ ಬದಲು, ಹಬ್ಬದ ದಿನ ಬೆಳಗ್ಗೆ ಕಳಸಾಪುರಕ್ಕೆ ಹೋಗಬೇಕೆಂದೂ ನಿಶ್ಚಯಮಾಡಿ ಕೊಂಡರು. ಅವರಿಗೆಲ್ಲ ಬೆಳವಾಡಿಯ ದೇವರಯ್ಯನು ಮೇಟಿಯಾಗಿದ್ದನು.

ಗುರುವಾರ ಸಂಜೆಯವರೆಗೂ ಬೆಳವಾಡಿ ಜಾವಗಲ್ ನೇರಲಿಗೆ ಮೊದಲಾದ ಊರುಗಳಿಂದ ಹುಡುಗರಾರೂ ಕಳಸಾಪುರಕ್ಕೆ ಬರಲಿಲ್ಲ. ಅವರು ಹೆದರಿಕೊಂಡು ಬರಲಿಲ್ಲವೆಂದು ಕಳಸಾಪುರದ ಹುಡುಗರು ಯೋಚಿಸಿದರು.

ಸೀತಾರಾಮಯ್ಯನ ಕಡೆಯವರೆಲ್ಲ ಈಶ್ವರ ದೇವಾಲಯದ ಮೆಟ್ಟಿಲ

ಮೇಲೆ ಬೆಳದಿಂಗಳಲ್ಲಿ ಕುಳಿತು ಮಾತಾಡುತ್ತಿದ್ದರು. ಆಗ ಒಬ್ಬ ಹುಡುಗನು ಜಾವಗಲ್ ಮೊದಲಾದ ಊರುಗಳ ಹುಡುಗರು ಹಟ ಕಟ್ಟಿರುವ ಸಂಗತಿಯನ್ನು ತಿಳಿಸಿ "ಅವರು ನಾಳೆಯಾದರೂ ಖಂಡಿತ ಬರುವರು" ಎಂದನು.

"ಅವರು ಬಂದರೆ ಒಳ್ಳೆಯದೇ ಆಯಿತು. ಮಾಮೂಲಿನಂತೆ ಕಾಣಿಕೆ ಸಿಕ್ಕುತ್ತದೆ. ಇಲ್ಲದೆ ಇದ್ದರೆ ನಮಗೆ ಇನ್ನೊಂದು ಕೆಲಸವಿದೆ" ಎಂದನು ಸೀತಾರಾಮು.

"ಅದೇನು ಹೇಳು" ಎಂದನು ಕಾಳ.

"ಇದುವರೆಗೂ ನಮ್ಮ ಜೊತೆ ಇದ್ದು ಈಗ ಆ ರಾಮಚಂದ್ರನ ಜೊತೆ ಸೇರಿರುವ ಹುಡುಗರಿಗೆಲ್ಲ ಸರಿಯಾಗಿ ಬುದ್ಧಿ ಕಲಿಸಬೇಕು" ಎಂದನು ಸೀತಾರಾಮು.

"ಇಷ್ಟಕ್ಕೂ ಆ ರಾಮಚಂದ್ರ ಕಾರಣ. ಮೊದಲು ಅವನು ಊರು ಬಿಟ್ಟು ಹೋಗುವಂತೆ ಮಾಡಬೇಕು" ಎಂದನು ಕಿಟ್ಟ.

ಎಲ್ಲರೂ ಕಿಟ್ಟನ ಮಾತು ನ್ಯಾಯವೆಂದುಕೊಂಡು ರಾಮಚಂದ್ರನನ್ನು ಊರು ಬಿಟ್ಟು ಓಡಿಸಲು ಏನು ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದರು.

ಸೀತಾರಾಮುವೂ ಅವನ ಕಡೆಯವರೂ ಈಶ್ವರ ದೇವಸ್ಥಾನದಲ್ಲಿ ಸೇರಿರುವುದನ್ನು ನೋಡಿ ರಾಮಚಂದ್ರನೂ ಅವನ ಕಡೆಯವರೂ ಕೇಶವ ದೇವಾಲಯದ ಪೌಳಿಯಲ್ಲಿ ಸೇರಿದರು. ಬಹಳ ಹೊತ್ತು ಚರ್ಚೆಯಾದ ಮೇಲೆ, ಹೊರಗಿನಿಂದ ಬಂದ ಹುಡುಗರಿಗೆ ತಾವು ಯಾವ ತೊಂದರೆಯನ್ನೂ ಕೊಡಕೂಡದೆಂದೂ, ಸೀತಾರಾಮುವಿನ ಕಡೆ ಹೆಚ್ಚು ಜನ ಹುಡುಗರಿರುವುದರಿಂದ ಅವರನ್ನು ತಾವಾಗಿಯೇ ಕೆಣಕಕೂಡದೆಂದೂ, ಅವರಿಂದ ತಮಗೆ ಯಾರಿಗೂ ತೊಂದರೆಯಾಗದಂತೆ ಎಲ್ಲರೂ ಒಟ್ಟಾಗಿರಬೇಕೆಂದೂ ತೀರ್ಮಾನಿಸಿದರು.

ಕಳಸಾಪುರದಲ್ಲಿ ಹುಡುಗರು ಹೀಗೆ ಬೇರೆ ಬೇರೆಯಾಗಿ ಆಲೋಚನೆ ನಡೆಸುತ್ತಿದ್ದ ಸಮಯದಲ್ಲೇ ಬೆಳವಾಡಿಯ ವೀರನಾರಾಯಣ ದೇವಸ್ಥಾನದ

ಪೌಳಿಯಲ್ಲಿ ಬೆಳವಾಡಿ, ಜಾವಗಲ್, ನೇರಲಿಗೆ ಮೊದಲಾದ ಊರುಗಳ ಹುಡುಗರು ಸೇರಿ ಆಲೋಚನೆ ನಡೆಸುತ್ತಿದ್ದರು.

ನೇರಲಿಗೆಯಿಂದ ತಮ್ಮಯ್ಯನ ಮುಂದಾಳುತನದಲ್ಲಿ ಐದು ಹುಡುಗರೂ ಜಾವಗಲ್ಲಿನಿಂದ ಚಲುವಯ್ಯನ ಮುಂದಾಳುತನದಲ್ಲಿ ಐದು ಹುಡುಗರೂ ಬಂದಿದ್ದರು. ಬೆಳವಾಡಿಯಿಂದ ಹನ್ನೆರಡು ಹುಡುಗರು ಪ್ರಯಾಣ ಹೊರಡಲು ಸಿದ್ಧರಾಗಿದ್ದರು. ಈ ಇಪ್ಪತ್ತೈದು ಹುಡುಗರಿಗೂ ದೇವರಯ್ಯನು ಮೇಟಿಯಾಗಿದ್ದನು. ಅವರೆಲ್ಲ ಆಲೋಚಿಸಿ ಮಾರನೇ ದಿನ ಬೆಳಿಗ್ಗೆ ಕಳಸಾಪುರಕ್ಕೆ ಹೋಗಬೇಕೆಂದೂ, ಸಂಜೆಯುವರೆಗೂ ಕಳಸಾಪುರದ ಹುಡುಗರೊಡನೆ ವಿಶ್ವಾಸದಿಂದಲೇ ಇರಬೇಕೆಂದೂ, ಮಂಗಳಾರತಿಯಾದ ಮೇಲೆ ವಾಪಸು ಬಂದುಬಿಡಬೇಕೆಂದೂ ಹಾಗೆ ಬರುವಾಗ ಸಾಧ್ಯವಾದರೆ ಸೀತಾರಾಮುವಿಗೆ ನಾಲ್ಕು ಏಟು ಕೊಟ್ಟು ಬರಬೇಕೆಂದೂ ತೀರ್ಮಾನಿಸಿದರು.

ಆ ರಾತ್ರಿ ಕಳೆದು ಬೆಳಗಾಯಿತು. ಕಳಸಾಪುರದಲ್ಲಿ ಎಲ್ಲೆಲ್ಲೂ ಹಬ್ಬದ ಸಂಭ್ರಮವೇ ಸಂಭ್ರಮ. ಪರಮಹಾಲಕ್ಷ್ಮಿ ಅಮ್ಮನವರು ಆ ಊರಿನಲ್ಲಿ ಪ್ರತ್ಯಕ್ಷವಾಗಿ ಬಂದ ದಿನವದು.

ಹುಡುಗರು ಮುಂಜಾವಿನಲ್ಲೇ ಎದ್ದು ಗುಂಪು ಕಟ್ಟಿಕೊಂಡು ತೋಟಗಳಿಗೆ ಹೂವು ಪತ್ರೆಗಳನ್ನು ತರಲು ಹೋದರು. ಕೈ ಸೋಲುವವರೆಗೆ ಕೊಯ್ದರೂ ಅವರಿಗೆ ತೃಪ್ತಿಯಿಲ್ಲ. ಹೀಗೆ ಹೂವಿಗೆ ಹೋದಾಗ ಸೀತಾರಾಮುವಿಗೂ ರಾಮಚಂದ್ರನಿಗೂ ಘರ್ಷಣೆಯಾಯಿತು.

ರಾಮಚಂದ್ರ ತನ್ನ ಕಡೆಯ ನಾಲ್ಕೈದು ಹುಡುಗರೊಡನೆ ಊರಿಗೆ ಮೂರು ಮೈಲಿ ದೂರದಲ್ಲಿದ್ದ ಕೇದಿಗೆ ಬನಕ್ಕೆ ಹೂವಿಗೆ ಹೋಗಿದ್ದನು. ಅವರು ಬೇಕಾದಷ್ಟು ಹೂವು ಕುಯ್ದು ಹೊರೆ ಕಟ್ಟಿ ಇನ್ನೇನು ಹೊರಡಬೇಕು, ಅಷ್ಟರಲ್ಲಿ ಸೀತಾರಾಮು ತನ್ನ ಕಡೆಯ ಎಂಟು ಹತ್ತು ಹುಡುಗರೊಡನೆ ಹೂವಿಗೆಂದು ಅಲ್ಲಿಗೆ ಬಂದನು. ತಾವು ಬರುವ ಮೊದಲೇ ರಾಮಚಂದ್ರ ಹೂವು ಕುಯ್ದುದರಿಂದ ಅವನಿಗೆ ಬಹಳ ಅಸಮಾಧಾನವಾಯಿತು. ತನ್ನ ಕಡೆ ಹೆಚ್ಚು ಜನರಿದ್ದುದರಿಂದ ಅವರು ಕುಯ್ದಿದ್ದ ಆ ಹೂವುಗಳನ್ನೆಲ್ಲ ಕಿತ್ತುಕೊಳ್ಳಬೇಕೆಂದು "ನಿನ್ನೆಯೇ ಬಂದು ನಾವು ಈ ವನ ನೋಡಿ

ಮೇಲೆ ಬೆಳದಿಂಗಳಲ್ಲಿ ಕುಳಿತು ಮಾತಾಡುತ್ತಿದ್ದರು. ಆಗ ಒಬ್ಬ ಹುಡುಗನು ಜಾವಗಲ್ ಮೊದಲಾದ ಊರುಗಳ ಹುಡುಗರು ಹಟ ಕಟ್ಟಿರುವ ಸಂಗತಿಯನ್ನು ತಿಳಿಸಿ "ಅವರು ನಾಳೆಯಾದರೂ ಖಂಡಿತ ಬರುವರು" ಎಂದನು.

"ಅವರು ಬಂದರೆ ಒಳ್ಳೆಯದೇ ಆಯಿತು. ಮಾಮೂಲಿನಂತೆ ಕಾಣಿಕೆ ಸಿಕ್ಕುತ್ತದೆ. ಇಲ್ಲದೆ ಇದ್ದರೆ ನಮಗೆ ಇನ್ನೊಂದು ಕೆಲಸವಿದೆ" ಎಂದನು ಸೀತಾರಾಮು.

"ಅದೇನು ಹೇಳು" ಎಂದನು ಕಾಳ.

"ಇದುವರೆಗೂ ನಮ್ಮ ಜೊತೆ ಇದ್ದು ಈಗ ಆ ರಾಮಚಂದ್ರನ ಜೊತೆ ಸೇರಿರುವ ಹುಡುಗರಿಗೆಲ್ಲ ಸರಿಯಾಗಿ ಬುದ್ಧಿ ಕಲಿಸಬೇಕು" ಎಂದನು ಸೀತಾರಾಮು.

"ಇಷ್ಟಕ್ಕೂ ಆ ರಾಮಚಂದ್ರ ಕಾರಣ. ಮೊದಲು ಅವನು ಊರು ಬಿಟ್ಟು ಹೋಗುವಂತೆ ಮಾಡಬೇಕು" ಎಂದನು ಕಿಟ್ಟಿ.

ಎಲ್ಲರೂ ಕಿಟ್ಟನ ಮಾತು ನ್ಯಾಯವೆಂದುಕೊಂಡು ರಾಮಚಂದ್ರನನ್ನು ಊರು ಬಿಟ್ಟು ಓಡಿಸಲು ಏನು ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದರು.

ಸೀತಾರಾಮುವೂ ಅವನ ಕಡೆಯವರೂ ಈಶ್ವರ ದೇವಸ್ಥಾನದಲ್ಲಿ ಸೇರಿರುವುದನ್ನು ನೋಡಿ ರಾಮಚಂದ್ರನೂ ಅವನ ಕಡೆಯವರೂ ಕೇಶವ ದೇವಾಲಯದ ಪೌಳಿಯಲ್ಲಿ ಸೇರಿದರು. ಬಹಳ ಹೊತ್ತು ಚರ್ಚೆಯಾದ ಮೇಲೆ, ಹೊರಗಿನಿಂದ ಬಂದ ಹುಡುಗರಿಗೆ ತಾವು ಯಾವ ತೊಂದರೆಯನ್ನೂ ಕೊಡಕೂಡದೆಂದೂ, ಸೀತಾರಾಮುವಿನ ಕಡೆ ಹೆಚ್ಚು ಜನ ಹುಡುಗರಿರುವುದರಿಂದ ಅವರನ್ನು ತಾವಾಗಿಯೇ ಕೆಣಕಕೂಡದೆಂದೂ, ಅವರಿಂದ ತಮಗೆ ಯಾರಿಗೂ ತೊಂದರೆಯಾಗದಂತೆ ಎಲ್ಲರೂ ಒಟ್ಟಾಗಿರಬೇಕೆಂದೂ ತೀರ್ಮಾನಿಸಿದರು.

ಕಳಸಾಪುರದಲ್ಲಿ ಹುಡುಗರು ಹೀಗೆ ಬೇರೆ ಬೇರೆಯಾಗಿ ಆಲೋಚನೆ ನಡೆಸುತ್ತಿದ್ದ ಸಮಯದಲ್ಲೇ ಬೆಳವಾಡಿಯ ವೀರನಾರಾಯಣ ದೇವಸ್ಥಾನದ

ಪೌಳಿಯಲ್ಲಿ ಬೆಳವಾಡಿ, ಜಾವಗಲ್, ನೇರಲಿಗೆ ಮೊದಲಾದ ಊರುಗಳ ಹುಡುಗರು ಸೇರಿ ಆಲೋಚನೆ ನಡೆಸುತ್ತಿದ್ದರು.

ನೇರಲಿಗೆಯಿಂದ ತಮ್ಮಯ್ಯನ ಮುಂದಾಳುತನದಲ್ಲಿ ಐದು ಹುಡುಗರೂ ಜಾವಗಲ್ಲಿನಿಂದ ಚಲುವಯ್ಯನ ಮುಂದಾಳುತನದಲ್ಲಿ ಐದು ಹುಡುಗರೂ ಬಂದಿದ್ದರು. ಬೆಳವಾಡಿಯಿಂದ ಹನ್ನೆರಡು ಹುಡುಗರು ಪ್ರಯಾಣ ಹೊರಡಲು ಸಿದ್ಧರಾಗಿದ್ದರು. ಈ ಇಪ್ಪತ್ತೈದು ಹುಡುಗರಿಗೂ ದೇವರಯ್ಯನು ಮೋಟಿಯಾಗಿದ್ದನು. ಅವರೆಲ್ಲ ಆಲೋಚಿಸಿ ಮೂರನೇ ದಿನ ಬೆಳಿಗ್ಗೆ ಕಳಸಾಪುರಕ್ಕೆ ಹೋಗಬೇಕೆಂದೂ, ಸಂಜೆಯವರೆಗೂ ಕಳಸಾಪುರದ ಹುಡುಗರೊಡನೆ ವಿಶ್ವಾಸದಿಂದಲೇ ಇರಬೇಕೆಂದೂ, ಮಂಗಳಾರತಿಯಾದ ಮೇಲೆ ವಾಪಸು ಬಂದುಬಿಡಬೇಕೆಂದೂ ಹಾಗೆ ಬರುವಾಗ ಸಾಧ್ಯವಾದರೆ ಸೀತಾರಾಮುವಿಗೆ ನಾಲ್ಕು ಏಟು ಕೊಟ್ಟು ಬರಬೇಕೆಂದೂ ತೀರ್ಮಾನಿಸಿದರು.

ಆ ರಾತ್ರೆ ಕಳೆದು ಬೆಳಗಾಯಿತು. ಕಳಸಾಪುರದಲ್ಲಿ ಎಲ್ಲೆಲ್ಲೂ ಹಬ್ಬದ ಸಂಭ್ರಮವೇ ಸಂಭ್ರಮ. ವರಮಹಾಲಕ್ಷ್ಮಿ ಅಮ್ಮನವರು ಆ ಊರಿನಲ್ಲಿ ಪ್ರತ್ಯಕ್ಷವಾಗಿ ಬಂದ ದಿನವದು.

ಹುಡುಗರು ಮುಂಜಾವಿನಲ್ಲೇ ಎದ್ದು ಗುಂಪು ಕಟ್ಟಿಕೊಂಡು ತೋಟಗಳಿಗೆ ಹೂವು ಪತ್ರೆಗಳನ್ನು ತರಲು ಹೋದರು. ಕೈ ಸೋಲುವವರೆಗೆ ಕೊಯ್ದರೂ ಅವರಿಗೆ ತೃಪ್ತಿಯಿಲ್ಲ. ಹೀಗೆ ಹೂವಿಗೆ ಹೋದಾಗ ಸೀತಾರಾಮುವಿಗೂ ರಾಮಚಂದ್ರನಿಗೂ ಘರ್ಷಣೆಯಾಯಿತು.

ರಾಮಚಂದ್ರ ತನ್ನ ಕಡೆಯ ನಾಲ್ಕೈದು ಹುಡುಗರೊಡನೆ ಊರಿಗೆ ಮೂರು ಮೈಲಿ ದೂರದಲ್ಲಿದ್ದ ಕೇದಿಗೆ ಬನಕ್ಕೆ ಹೂವಿಗೆ ಹೋಗಿದ್ದನು. ಅವರು ಬೇಕಾದಷ್ಟು ಹೂವು ಕುಯ್ದು ಹೊರೆ ಕಟ್ಟಿ ಇನ್ನೇನು ಹೊರಡಬೇಕು, ಅಷ್ಟರಲ್ಲಿ ಸೀತಾರಾಮು ತನ್ನ ಕಡೆಯ ಎಂಟು ಹತ್ತು ಹುಡುಗರೊಡನೆ ಹೂವಿಗೆಂದು ಅಲ್ಲಿಗೆ ಬಂದನು. ತಾವು ಬರುವ ಮೊದಲೇ ರಾಮಚಂದ್ರ ಹೂವು ಕುಯ್ದುದರಿಂದ ಅವನಿಗೆ ಬಹಳ ಅಸಮಾಧಾನವಾಯಿತು. ತನ್ನ ಕಡೆ ಹೆಚ್ಚು ಜನರಿದ್ದುದರಿಂದ ಅವರು ಕುಯ್ದಿದ್ದ ಆ ಹೂವುಗಳನ್ನೆಲ್ಲ ಕಿತ್ತುಕೊಳ್ಳಬೇಕೆಂದು "ನಿನ್ನೆಯೇ ಬಂದು ನಾವು ಈ ವನ ನೋಡಿ

ಕೊಂಡು ಹೋಗಿದ್ದೆವು. ಆದರಿಂದ ಈಗ ನೀವು ಕುಯ್ದಿರುವ ಹೂವುಗಳನ್ನೆಲ್ಲ ಕೊಟ್ಟು ಬಿಡಿ ” ಎಂದನು.

ರಾಮಚಂದ್ರನು ಮೊದಲು ಸ್ವಲ್ಪ ಜೋರು ಮಾಡಿದರೂ, ತನ್ನ ಕಡೆ ಜನ ಕಡಿಮೆ ಇದ್ದುದರಿಂದ “ಈ ಭಂಡವ್ಯಾಜ್ಯದಿಂದ ನೀವೇ ದೊಡ್ಡೋರಾಗಿ; ಚಿಂತೆಯಿಲ್ಲ ” ಎಂದು ಹೇಳಿ ತಾವು ಕುಯ್ದಿದ್ದ ಹೂಗಳಲ್ಲಿ ಕೆಲವನ್ನು ಕೊಟ್ಟನು. ಸೀತಾರಾಮು ಎಲ್ಲ ಹೂವೂ ಬೇಕೆಂದು ಕೇಳಿದನು. ರಾಮಚಂದ್ರನ ಕಡೆಯ ಹುಡುಗರು ಒಪ್ಪಲಿಲ್ಲ. ಸೀತಾರಾಮುವಿನ ಕಡೆಯ ಹುಡುಗರು ಬಲವಂತದಿಂದ ಆ ಹೂಗಳನ್ನೆಲ್ಲಾ ಕಿತ್ತುಕೊಂಡು, ಹೆಚ್ಚು ಮಾತಾಡಿದರೆ ನಾಲ್ಕು ಬಿಗಿಯುವುದಾಗಿ ಹೆದರಿಸಿದರು. ರಾಮಚಂದ್ರನು ತನ್ನ ಕಡೆಯವರನ್ನು ಕರೆದುಕೊಂಡು ಬೇರೆ ವನಕ್ಕೆ ಹೋಗಿ ಸಿಕ್ಕಿದಷ್ಟು ತಾಳೆ ಹೂವು ಕುಯ್ದುಕೊಂಡು ಬಂದನು. ಭಂಡವ್ಯಾಜ್ಯ ತೆಗೆದು ತಾವು ಕುಯ್ದ ಹೂವುಗಳನ್ನೆಲ್ಲ ಕಿತ್ತುಕೊಂಡುದಕ್ಕಾಗಿ ಸೀತಾರಾಮುವಿನ ಮೇಲೆ ರಾಮಚಂದ್ರನಿಗೆ ಬಹಳ ಸಿಟ್ಟು ಬಂದಿತ್ತು.

ಹೀಗೆ ಜಗಳವಾಡಿಕೊಂಡು ಮನೆಗೆ ಬರುವ ಹೊತ್ತಿಗೆ ಆಗಲೇ ಹತ್ತು ಗಂಟೆಯ ಹತ್ತಿರ ಬಂದಿತ್ತು. ಅಷ್ಟರಲ್ಲೇ ನೇರಲಿಗೆ, ಜಾವಗಲ್ ಮತ್ತು ಬೆಳವಾಡಿಯ ಹುಡುಗರು ಕಳಸಾಪುರಕ್ಕೆ ಬಂದು ಯಾರ ಅಂಕೆಯೂ ಇಲ್ಲದೆ ಊರಲ್ಲೆಲ್ಲ ಸುತ್ತಾಡುತ್ತಿದ್ದರು. ಒಬ್ಬ ಹುಡುಗನಿಂದ ರಾಮಚಂದ್ರನ ವಿಚಾರವನ್ನೂ ಅವನಿಗೂ ಸೀತಾರಾಮುವಿಗೂ ಜಗಳವಾದ ವಿಚಾರವನ್ನೂ, ಕಳಸಾಪುರದ ಹುಡುಗರು ಎರಡು ಪಂಗಡವಾಗಿರುವ ವಿಚಾರವನ್ನೂ ಅವರು ತಿಳಿದುಕೊಂಡಿದ್ದರು. ಮತ್ತು ಆ ದಿನ ಸೀತಾರಾಮುವನ್ನು ಬಲಿ ಹಾಕಬೇಕೆಂದು ಅವರು ನಿರ್ಧರಿಸಿದರು.

ಹೊರ ಊರುಗಳಿಂದ ಬಂದ ಹುಡುಗರನ್ನು ಸೀತಾರಾಮುವಿನ ಕಡೆಯವರು ಒಂದೆರಡು ಬಾರಿ ಕೆಣಕಲು ಪ್ರಯತ್ನಿಸಿ ಏಟು ತಿಂದು ತೆಪ್ಪಗಾದರು. ದೇವರಯ್ಯನು ಕಳಸಾಪುರದಲ್ಲಿ ರಾಜನಂತೆ ಮೆರೆದನು.

# ಸೆರೆಸಿಕ್ಕಿದ ಸೀತಾರಾಮನು

ಹಬ್ಬದ ಸಂಭ್ರಮದಲ್ಲಿ ಸಂಜೆಯಾದುದು ಯಾರಿಗೂ ಗೊತ್ತಾಗಲೇ ಇಲ್ಲ. ಇನ್ನೂ ಪೂಜೆಗೆ ಅಣಿಮಾಡಿಯಿರಲಿಲ್ಲ, ಆಗಲೇ ದನಗಳು ಬಂದವು! ನೋಡಿ, ಹೆಂಗಸರು 'ಸಂಜೆಯಾಯಿತು, ಪೂಜೆಗೆ ಅಣಿಯಾಗಿಲ್ಲ. ನೈವೇದ್ಯಕ್ಕೆ ಸಿದ್ಧವಾಗಿಲ್ಲ' ಎಂದುಕೊಂಡು ಬೇಗ ಬೇಗ ಕೆಲಸಮಾಡತೊಡಗಿದರು. ಗಂಡಸರು ಸ್ನಾನಮಾಡಿ ಮಡಿಯುಟ್ಟು ಸಂಧ್ಯಾವಂದನೆ ಮಾಡಿ ಅಮ್ಮನವರನ್ನು ಪೂಜಿಸಲು ಸಿದ್ಧರಾದರು. ದನಕರುಗಳನ್ನೆಲ್ಲ ಕಟ್ಟಿ ಹುಲ್ಲು ಹಾಕಿದುದಾಯಿತು. ಎಳೆಗರುಗಳನ್ನೆಲ್ಲ ಮೊಲೆಯೂಡಲು ಬಿಟ್ಟುಬಿಟ್ಟರು. ಎಳೆಗಂದಿಹಸುಗಳ ಹಾಲನ್ನು ಕರೆಯಲೇ ಇಲ್ಲ. ಹೆಂಗಸರು ಹಸುಗಳಿಗೆಲ್ಲ ಕುಂಕುಮವಿಟ್ಟು ಆರತಿಮಾಡಿ ಚಲ್ಲಿದರು. ಗಂಡಸರು ಅವುಗಳ ಮೈ ತಿಕ್ಕಿ ಸೇವೆಮಾಡಿದರು.

ಸೂರ್ಯನನ್ನು ಹಿಂಬಾಲಿಸಿ ಬಂದಂತೆ ಸಂಜೆಯೊಡನೆಯೇ ಶುಕ್ಲಪಕ್ಷದ ಚಂದ್ರ ಪ್ರಶಾಂತವಾದ ಕಿರಣಗಳನ್ನು ಬೀರತೊಡಗಿದನು. ಆಕಾಶವು ನಿರ್ಮಲವಾಗಿತ್ತು. ಒಂದಾದರೂ ಮೋಡದ ಸುಳಿವಿಲ್ಲ. ಬೆಳದಿಂಗಳಂತೂ ಹಾಲು ಚಲ್ಲಿದಂತೆ ಮನೋಹರವಾಗಿತ್ತು. ಮಧ್ಯಾಹ್ನದ ಉರಿಬಿಸಿಲಿನಲ್ಲಿ ಕಾದು ನಿಂತಿದ್ದ ಮನೆಗಳೆಲ್ಲವೂ ಆ ಚಂದ್ರಿಕೆಯ ಕಡಲಿನಲ್ಲಿ ಮಿಂದು ಬಂದು ವಿಶ್ರಾಂತಿ ಪಡೆಯುತ್ತಿರುವಂತೆ ತೋರುತ್ತಿತ್ತು. ಈಶ್ವರ ದೇವಾಲಯವೂ ಕೇಶವ ದೇವಾಲಯವೂ, ಸುಣ್ಣ ಹೊಡೆದಿದ್ದುದರಿಂದ ಹಾಲಿನಲ್ಲಿ ಅದ್ದಿದ ಬೆಳ್ಳಿಯ ಮಂದಿರಗಳಂತೆ ಕಣ್ಣಿಗೆ ಮನೋಹರವಾಗಿ ಕಂಗೊಳಿಸುತ್ತಿದ್ದವು. ದೇವಸ್ಥಾನಗಳ ಮುಂದೆ ಇದ್ದ ತೆಂಗಿನಮರದ ಗರಿಗಳು ಮೆಲುಗಾಳಿಗೆ ಅಲುಗಿದಾಗ ಚಂದ್ರನ ಬೆಳಕಿನಲ್ಲಿ ಅತ್ಯದ್ಭುತವಾದ ರಮ್ಯತೆಯು ಉಂಟಾಗುತ್ತಿತ್ತು. ಸೂರ್ಯನ ಕಿರಣಗಳು ಇಣುಕಿ ನೋಡುತ್ತಿರುವಾಗ ನದಿಯಲ್ಲಿ ಫಳಫಳನೆ ಮಿಂಚುವ ಮೀನುಗಳಂತೆ ಬೆಳದಿಂಗಳಿನಲ್ಲಿ ತೆಂಗಿನ ಗರಿಗಳು ಮಿಂಚುತ್ತಿದ್ದವು. ಆಚೆ, ಊರಿನ ಆಚೆ, ರಂಗನಗಿರಿಯು ಬಿಳಿಯ ಬಟ್ಟೆಯ

ಮೇಲೆ ಬರೆದ ನೀಲಿಯ ಚಿತ್ತಾರದಂತೆ ಕಾಣುತ್ತಿತ್ತು. ಹೊರಗಿನ ಈ ಬೆಳಕಿನ ವೈಭವವನ್ನು ಮೀರಿಸುವ ರೀತಿಯಲ್ಲಿ ಪ್ರತಿ ಮನೆಯಲ್ಲೂ ಸೊಡಲುಗಳು ಬೆಳಕು ಚೆಲ್ಲುತ್ತಿದ್ದವು. ಕಳಸಾಪುರವು ಆನಂದೋತ್ಸಾಹಗಳ ಕಲರವದಲ್ಲಿ ತುಂಬಿಹೋಗಿತ್ತು.

ಆ ಸಮಯದಲ್ಲಿ, ಆ ಬೆಳದಿಂಗಳಲ್ಲಿ ಕಳಸಾಪುರದ ಊರು ಮುಂದಿನ ತೋಪಿನಲ್ಲಿ ಸೀತಾರಾಮುವು ತನ್ನ ಕಡೆಯ ಕೆಲವು ಹುಡುಗರೊಡನೆ ಒಂದು ಮುಖ್ಯ ವಿಚಾರವನ್ನು ಆಲೋಚಿಸುತ್ತ ಕುಳಿತಿದ್ದನು. ಆ ದಿನ ಬೆಳಗೆ ಕೇದಿಗೆ ಹೂವಿನ ಜಗಳದಲ್ಲಿ ಅನ್ಯಾಯಮಾಡಿದ ಸೀತಾರಾಮುವಿಗೆ ಹೇಗಾದರೂ ಮಾಡಿ ಕೈಕೊಡಬೇಕೆಂದು ರಾಮಚಂದ್ರನು ಯೋಚಿಸಿ, ಒಂದು ಸುಳ್ಳು ಸುದ್ದಿಯನ್ನು ಹುಟ್ಟಿಸಿ ಅದು ಸೀತಾರಾಮುವಿನ ಕಡೆಯ ಕೆಲವರಿಗೆ ಮುಟ್ಟುವಂತೆ ಮಾಡಿದ್ದನು. ಒಬ್ಬ ರೈತನ ತೋಟದಲ್ಲಿ ಒಳ್ಳೆಯ ಮಾವಲ ಹಣ್ಣುಗಳಿದ್ದವು - ಸುಮಾರು ಮೂವತ್ತು ನಲವತ್ತು! ಅವನ್ನು ಕುಯ್ದು ತರಬೇಕೆಂದು ಕಳಸಾಪುರದ ಹುಡುಗರು ಬಹಳವಾಗಿ ಪ್ರಯತ್ನಿಸಿ ವಿಫಲರಾಗಿದ್ದರು. ಆ ತೋಟದಲ್ಲಿ ಹಗಲೂ ರಾತ್ರೀ ಕಾವಲು ತಪ್ಪುತ್ತಿರಲಿಲ್ಲ. ಆ ತೋಟದ ಯಜಮಾನ ಆ ಮಾವಲ ಹಣ್ಣುಗಳ ರಕ್ಷಣೆಯ ವಿಚಾರದಲ್ಲಿ ಮೈಯೆಲ್ಲಾ ಕಣ್ಣಾಗಿದ್ದನು. ಆದರೆ, ಆ ದಿನ ಆ ಹಣ್ಣುಗಳನ್ನೆಲ್ಲ ಕುಯ್ದು ಮನೆಗೆ ತೆಗೆದುಕೊಂಡು ಹೋಗಿ ಭಾನುವಾರ ಜಾವಗಲ್ಲು ಸಂತೆಗೆ ಹಾಕಬೇಕೆಂದು ಗೌಡನು ತನ್ನ ಮಗನಿಗೆ ಹೇಳಿದುದನ್ನು ರಾಮಚಂದ್ರನು ಕೇಳಿದ್ದನು; ಮತ್ತು ಆ ಹಣ್ಣುಗಳು ತಮ್ಮ ಕೈತಪ್ಪಿ ಹೋದುದಕ್ಕಾಗಿ ಬಹಳ ವ್ಯಸನ ಪಟ್ಟಿದ್ದನು. ಈ ಮಾವಲು ಹಣ್ಣುಗಳ ನೆಪದಲ್ಲೇ ಸೀತಾರಾಮುವಿಗೆ ಅವನು ಕೈ ಕೊಡಬೇಕೆಂದು ಯೋಚಿಸಿ, ಅಮ್ಮನವರಿಗೆ ಎಲ್ಲರ ಮನೆಯಲ್ಲೂ ಮಂಗಳಾರತಿಯಾದ ಮೇಲೆ, ಆ ಹಣ್ಣುಗಳನ್ನು ತರಲು ಹೋಗುವುದಾಗಿ ಸುದ್ದಿ ಹುಟ್ಟಿಸಿದನು. 'ಈ ಸುದ್ದಿಯನ್ನುಕೇಳಿ ಸೀತಾರಾಮು ಮಂಗಳಾರತಿಯನ್ನೂ ಬಿಟ್ಟು ತೋಟಕ್ಕೆ ಹೋಗುತ್ತಾನೆ; ಆಗ ಅವನಿಗೆ ಅಲ್ಲಿ ಹಣ್ಣೂ ಇಲ್ಲ, ಇಲ್ಲಿ ಚರಪೂ ಇಲ್ಲ' ಎಂದು ಅವನು ಯೋಜಿಸಿದನು. ರಾಮಚಂದ್ರನ ಈ ಊಹೆ ನಿಜವಾಯಿತು. ಈ ಸಮಾಚಾರವನ್ನು ಕೇಳಿಯೇ

ಮೇಲೆ ತಿಳಿಸಿದಂತೆ ಸೀತಾರಾಮು ಊರು ಮುಂದಿನ ತೋಪಿನಲ್ಲಿ ಕುಳಿತು ಏನು ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದನು.

'ಆ ಹಣ್ಣುಗಳು ಎಷ್ಟು ಚೆನ್ನಾಗಿವೆ, ನಮ್ಮ ತೋಟದ ಬೈಲಿನಲ್ಲೇ ಅಂಥ ಹಣ್ಣುಗಳಿಲ್ಲ. ಇನ್ನು ಸ್ವಲ್ಪ ದಿನ ಬಿಟ್ಟಿದ್ದರೆ ದೇವತೆಗಳು ಬಂದು ತೆಗೆದುಕೊಂಡು ಹೋಗಿಬಿಡುತ್ತಾರೆ' ಎಂದನು ಒಬ್ಬ ಹುಡುಗ. ಮಾದಲ ಹಣ್ಣಿನಲ್ಲಿ ಅಮೃತವಿರುವುದೆಂದೂ, ಗಿಡದಲ್ಲಿ ಇದ್ದಂತೆಯೇ ಚೆನ್ನಾಗಿ ಹಣ್ಣಾದರೆ ಅದನ್ನು ದೇವತೆಗಳು ತೆಗೆದುಕೊಂಡು ಹೋಗಿ ಬಿಡುವರೆಂದೂ ತನ್ನ ಅಜ್ಜಿ ಹೇಳಿದುದನ್ನು ಆ ಹುಡುಗನು ಕೇಳಿದ್ದನು. ಎಲ್ಲರೂ ಹಾಗೇ ಆಗುವುದೆಂದು ನಂಬಿದ್ದರು.

'ಅವುಗಳನ್ನು ನಾವು ಹಾರಿಸಬೇಕೆಂದು ಎಷ್ಟೋ ದಿನಗಳಿಂದ ಹೊಂಚು ಹಾಕಿದ್ದೆವು' ಎಂದನು ನಾಗಪ್ಪ.

'ನಾವು ಈಗಲೇ ಹೋಗಿ ಆ ಹಣ್ಣುಗಳನ್ನು ಕುಯ್ದು ಬಚ್ಚಿಟ್ಟು ಮಂಗಳಾರತಿಯ ಹೊತ್ತಿಗೆ ಬಂದುಬಿಡೋಣ. ತೀರ, ಒಂದೆರಡು ಮನೆಗಳಲ್ಲಿ ಮಂಗಳಾರತಿಯಾಗಿದ್ದರೂ ಚಿಂತೆಯಿಲ್ಲ' ಎಂದನು ಸೀತಾರಾಮು. ಅವನ ಮಾತಿಗೆ ಮಿಕ್ಕವರೆಲ್ಲ ಒಪ್ಪಿದರು. ಆಗ ಅಲ್ಲಿದ್ದ ಐದಾರು ಜನರೇ ಸಾಕೆಂದೂ, ಮಿಕ್ಕವರನ್ನು ಕರೆಯಹೋದರೆ ರಾಮಚಂದ್ರನ ಕಡೆಯವರಿಗೆ ತಿಳಿದು ಅಡ್ಡಿಯಾಗಬಹುದೆಂದೂ ಅವರು ಯೋಚಿಸಿದರು. ಮತ್ತೆ ಅವರೆಲ್ಲರೂ ತೋಟದ ಕಡೆ ಹೊರಟರು.

ಸೀತಾರಾಮು ಮೊದಲಾದವರು ಆ ತೋಪಿನಿಂದ ತೋಟಕ್ಕೆ ಹೊರಟ ಸ್ವಲ್ಪಹೊತ್ತಿನ ಮೇಲೆ ಅವರು ಮಾತಾಡುತ್ತ ಕುಳಿತಿದ್ದ ಬಂಡೆಯ ಹತ್ತಿರದ ಒಂದು ಮಾವಿನ ಮರದಿಂದ ಇಬ್ಬರು ಹುಡುಗರು ಇಳಿದು ಬಂದರು. ಅವರು ಬೆಳವಾಡಿಯ ಹುಡುಗರು. ಹಾಗೇ ತಿರುಗಾಡಲು ಬಂದಿದ್ದವರು ಸೀತಾರಾಮುವನ್ನೂ ಅವನ ಕಡೆಯ ಹುಡುಗರನ್ನೂ ಕಂಡು ಮರಹತ್ತಿ ಅವಿತು ಕುಳಿತಿದ್ದರು. ಅವರು ಮರದಿಂದ ಇಳಿದವರೇ ಒಂದೇ ಉಸುರಿಗೆ ಊರು ಕಡೆ ಓಡಿದರು.

ಬೆಳವಾಡಿ ಜಾವಗಲ್ ನೇರಲಿಗೆಗಳ ಹುಡುಗರೆಲ್ಲರೂ ಈಶ್ವರ ದೇವಾ

ಲಯದ ಕಟ್ಟೆಯಮೇಲೆ ಕುಳಿತು ಬೆಳದಿಂಗಳಲ್ಲಿ ಹರಟೆ ಹೊಡೆಯುತ್ತಿದ್ದರು. ತರೀಕೆರೆ ರಂಗಪ್ಪನಾಯಕ ಮತ್ತು ಸರ್ಜಪ್ಪನಾಯಕರು ಮಾಡಿದ ಸಾಹಸ ಕೃತ್ಯಗಳನ್ನು ದೇವರಯ್ಯ ಅಜ್ಜನಿಂದ ಕೇಳಿ ಕೇಳಿ ಆ ವೀರಪುರುಷರ ವಿಚಾರದಲ್ಲಿ ಅವನಿಗೆ ವಿಶೇಷವಾದ ಅಭಿಮಾನ, ಆದರ ಬಂದಿತ್ತು. ದೇವರಯ್ಯನ ಅಜ್ಜನವರೂ ಅಡಾವುಡಿಯ ಸಮಯದಲ್ಲಿ ತರೀಕೆರೆ ನಾಯಕರಿಗೆ ಬೆಂಬಲಿಗರಾಗಿ ನಿಂತು ಸಹಾಯ ಮಾಡಿದ್ದರು. ಅವರಿಂದ ತಾನು ಕೇಳಿದ ಆ ಇತಿಹಾಸವನ್ನು ದೇವರಯ್ಯನು ತನ್ನ ಜೊತೆಯ ಹುಡುಗರಿಗೆಲ್ಲರಿಗೂ ಹೇಳುತ್ತಿದ್ದನು. ದೇವಸ್ಥಾನದ ಪಕ್ಕದಲ್ಲೇ ಇದ್ದ ಕೋಟೆ, ಅಲ್ಲಲ್ಲೇ ಮುರಿದು ಬಿದ್ದಿದ್ದರೂ ನೋಡುವವರಿಗೆ ಹಿಂದಿನ ಕಾಲದ ಸಾಹಸ ಜೀವನದ ನೆನಪುಮಾಡಿ ಕೊಡುತ್ತಿತ್ತು. ಒಂದುಸಲ ರಂಗಪ್ಪನಾಯಕರು ಕಳಸಾಪುರದಲ್ಲಿ ಬೀಡು ಬಿಟ್ಟಿದ್ದಾಗ ಹುಲಿಯ ಶಿಕಾರಿಗೆ ಹೊರಟರು. ಆಗ ದೇವರಯ್ಯನ ಅಜ್ಜ ದೇವರಯ್ಯನವರೂ ಜೊತೆಯಲ್ಲಿ ಹೋದರು. ಇಬ್ಬರಲ್ಲೂ ಬಂದೂಕು ಇತ್ತು. ಎದುರಿಗೇ ಬಂದಿತು ಒಂದು ಭಾರಿ ಹುಲಿ. ಅದನ್ನು ಒಂದೇ ಕಾಲದಲ್ಲಿ ಇಬ್ಬರೂ ಹೊಡೆದರು. ಇಬ್ಬರು ಹೊಡೆದ ಏಟುಗಳೂ ಅದಕ್ಕೆ ತಗುಲಿತು. ಆದರೆ ಅದು ಸಾಯಲಿಲ್ಲ. ರೋಷದಿಂದ ರಂಗಪ್ಪನಾಯಕರ ಮೇಲೆ ನೆಗೆಯಿತು. ದೇವರಯ್ಯನವರು ರಂಗಪ್ಪನಾಯಕರನ್ನು ಕೈಹಿಡಿದು ಪಕ್ಕಕ್ಕೆ ಎಳೆದುಕೊಳ್ಳದಿದ್ದರೆ ಹುಲಿ ಅವರನ್ನು ಅಗಿದು ಬಿಡುತ್ತಿತ್ತು. ಅವರು ನಿಂತಿದ್ದ ಜಾಗಕ್ಕೆ ಹಾರಿಬಿದ್ದು ನೆಲವನ್ನು ಗವರಿ ಬಾಯಿಗೆ ಸಿಕ್ಕಿದ ಒಂದು ತೆಂಗಿನಕಾಯಿ ದಪ್ಪದ ಕಲ್ಲನ್ನು ಬಲವಾಗಿ ಕಚ್ಚಿಕೊಂಡು ಅದು ಪ್ರಾಣ ಬಿಟ್ಟಿತ್ತು. ಇಕ್ಕಳ ತಂದು ಅದರ ಬಾಯಿ ಬಿಡಿಸಿ ಆ ಕಲ್ಲನ್ನು ಹೊರಗೆ ತೆಗೆಯಬೇಕಾಯಿತಂತೆ. ಈ ಕಥೆಯನ್ನು ದೇವರಯ್ಯ ತನ್ನ ಅಜ್ಜನಿಂದಲೇ ಕೇಳಿದ್ದ. ಕಳಸಾಪುರಕ್ಕೆ ಬಂದಾಗಲೆಲ್ಲ ಆ ಕಥೆ ಅವನಿಗೆ ನೆನಪಾಗುತ್ತಿತ್ತು. ದೇವರಯ್ಯ ತಾನು ಕೇಳಿದ್ದ ಕಥೆಗಳನ್ನು ತನ್ನ ಜೊತೆಯ ಹುಡುಗರಿಗೂ ಹೇಳುತ್ತಿದ್ದನು. ಹುಡುಗರು ಮೈಯೆಲ್ಲಾ ಕಿವಿಯಾಗಿ ಕೇಳುತ್ತ ಕುಳಿತಿದ್ದರು.

ಆಗ ಇಬ್ಬರು ಹುಡುಗರು ಅಲ್ಲಿಗೆ ಬಂದರು. ಅವರು ಊರು ಮುಂದಿನ ತೋಪಿನಿಂದ ಬಂದವರೆಂದು ಮತ್ತೆ ಹೇಳಬೇಕಾಗಿಯೇ ಇಲ್ಲ.

ಅವರು ಬಂದವರೇ ದೇವರಯ್ಯನ ಕಿವಿಯಲ್ಲಿ ಸೀತಾರಾಮು ತನ್ನ ಜೊತೆಯವರೊಡನೆ ತೋಟಕ್ಕೆ ಹೋದ ಸಮಾಚಾರವನ್ನು ತಿಳಿಸಿದರು.

"ಅವರು ಎಷ್ಟು ಜನ ಇದಾರೆ?" ಎಂದು ಕೇಳಿದನು ದೇವರಯ್ಯ.

"ಆರು ಜನ" ಎಂದರು ಆ ಹುಡುಗರು.

"ಸೀತಾರಾಮು ಹೊರ ಊರಿನ ಹುಡುಗರನ್ನು ಎಷ್ಟೋಂದು ಗೋಳು ಗುಟ್ಟಿಸಿದ್ದಾನೆ, ಅವರ ಮೇಲೆ ಎಷ್ಟೋಂದು ಜಬರ್ ತೋರಿಸಿದ್ದಾನೆ; ಎಷ್ಟೋಂದು ಅಪಮಾನ ಮಾಡಿದ್ದಾನೆ. ಅದನ್ನೆಲ್ಲ ತೀರಿಸುವ ಸಮಯ ಒದಗಿ ಬಂದಿದೆ. ಅವನನ್ನು ಹಿಡಿಯಲು ಇಂತಹ ಸುಸಮಯ ಮತ್ತೆ ಸಿಕ್ಕುವುದಿಲ್ಲ" ಎಂದು ದೇವರಯ್ಯನು ಯೋಚಿಸಿದನು. ವಿಚಾರವನ್ನು ಸೂಕ್ಷ್ಮವಾಗಿ ತಿಳಿಸಿ ಕೂಡಲೇ ಹೊರಡಲು ತನ್ನ ಕಡೆಯವರಿಗೆ ಅಪ್ಪಣೆ ಮಾಡಿದನು. ಆ ಹುಡುಗರೆಲ್ಲ ಒಬ್ಬೊಬ್ಬರಾಗಿ ಅಗಳು ಇಳಿದು ತೋಟದ ಕಡೆ ಬೇಗ ಬೇಗ ಹೊರಟುಹೋದರು. ಸ್ವಲ್ಪ ಹೊತ್ತಿನ ಮೇಲೆ ಅಜ್ಜಪ್ಪನ ಶಾಮಿಯ ಮನೆಯಲ್ಲಿ ಮಂಗಳಾರತಿಗೆ ಜನರನ್ನು ಕರೆಯುತ್ತಿದ್ದಾಗ ದೇವರಯ್ಯನು ಸೀತಾರಾಮುವನ್ನು ಹಿಡಿಯಲು ಕಳ್ಳನ ಮರುಟೆಯಲ್ಲಿ ತನ್ನ ಜೊತೆಯವರೊಡನೆ ಹೋಗುತ್ತಿದ್ದನು.

ಅತ್ತ ಸೀತಾರಾಮುವು ತನ್ನ ಜೊತೆಯ ಹುಡುಗರೊಂದಿಗೆ ಆ ಗೌಡನ ತೋಟಕ್ಕೆ ಹೋಗಿ ನೋಡಿದನು. ಹಣ್ಣುಗಳನ್ನು ಇನ್ನೂ ಕುಯ್ದಿರಲಿಲ್ಲ; ಮತ್ತು ಆ ದಿನ ರಾತ್ರಿ ಯಾರೂ ಕಾವಲಿರಲಿಲ್ಲ. ಹುಡುಗರ ಸಂತೋಷ ಹಿಡಿಸದಂತಾಯಿತು. ಅವರು ಹಣ್ಣುಗಳನ್ನೆಲ್ಲ ಬೇಗ ಬೇಗ ಕುಯ್ದು ಹೊದೆದಿದ್ದ ಶಲ್ಯಗಳಲ್ಲಿ ಕಟ್ಟಿಕೊಂಡು, ಕಳ್ಳನ ಮರುಟೆಯಲ್ಲಿದ್ದ ಒಂದು ಪೊದೆಯಲ್ಲಿ ಬಚ್ಚಿಡಲು ಬರುತ್ತಿದ್ದರು. ಇವರು ಬರುತ್ತಿದ್ದುದನ್ನು ದೂರದಿಂದಲೇ ಗುರುತಿಸಿದ ದೇವರಯ್ಯ ತನ್ನ ಕಡೆಯವರನ್ನೆಲ್ಲ ದಾರಿಯ ಪಕ್ಕದಲ್ಲಿ ಬೆಳೆದಿದ್ದ ಪೊದೆಗಳ ಹಿಂದೆ ಅವಿತುಕೊಳ್ಳುವಂತೆ ಹೇಳಿ ತಾನೂ ಒಂದು ಕಡೆ ಅವಿತು ಕುಳಿತನು ಸ್ವಲ್ಪ ಹೊತ್ತಿನಲ್ಲೇ ಸೀತಾರಾಮು ಮೊದಲಾದವರು ಅವರು ಕುಳಿತಿದ್ದ ಜಾಗಕ್ಕೆ ಬಂದರು. ಆಗ, ಅವಿತುಕೊಂಡಿದ್ದ ಇಪ್ಪತ್ತೈಯ್ದು ಹುಡುಗರೂ ಅವರ ಮೇಲೆ ಬಿದ್ದರು. ಅನಿರೀಕ್ಷಿತವಾಗಿ

ಅವರು ತಮ್ಮ ಸೋಲಿ ಬಿದ್ದುದರಿಂದಲೂ, ಅವರು ಬಹಳ ಜನ ಇದ್ದುದರಿಂದಲೂ ಸ್ವಲ್ಪ ಹೋರಾಡುವುದರಲ್ಲೇ ಕಳಸಾಪುರದ ಹುಡುಗರೆಲ್ಲ ಸಿಕ್ಕಿಬಿದ್ದರು. ಒಬ್ಬರೂ ತಪ್ಪಿಸಿಕೊಂಡು ಹೋಗದಂತೆ ಹಿಡಿದುಕೊಂಡು ದೇವರಯ್ಯನ ಕಡೆಯ ಹುಡುಗರು ಅವರಿಗೆ ಎರಡೆರಡು ಗುದ್ದು ಕೊಟ್ಟರು. ಮತ್ತು ಹಣ್ಣುಗಳನ್ನೆಲ್ಲ ಕಿತ್ತುಕೊಂಡು ಸೀತಾರಾಮು ಒಬ್ಬನನ್ನು ಉಳಿದು ಮಿಕ್ಕವರನ್ನೆಲ್ಲ ಬಿಟ್ಟುಬಿಟ್ಟರು.

''ನನ್ನೂ ಬಿಡಿ'' ಎಂದನು ಸೀತಾರಾಮು; ಅವನು ಸ್ವಲ್ಪವೂ ಹೆದರಿದಂತೆ ಕಾಣಲಿಲ್ಲ.

''ಹೂ, ಬಿಡ್ತೀವಿ ತಾಳು – ತುರುಚೀ ತಂದು'' ಎಂದನು ಜಾವಗಲ್ಲಿನ ತಮ್ಮು.

''ನನ್ನ ಏನ್ಮಾಡ್ತೀರಿ ?'' ಎಂದು ಕೇಳಿದನು ಸೀತಾರಾಮು.

''ನಿನ್ನ ಕೈಕಾಲು ಕಟ್ಟಿ ಬೆಳವಾಡಿ ದೊಡ್ಡಕೆರೆಗೆ ಹಾಕ್ತೀವಿ'' ಎಂದನು ನೇರಲಿಗೆಯ ಚಲುವಯ್ಯ. ನಾಲ್ಕು ಮಾರು ದೂರ ಹೋಗಿದ್ದ ಕಳಸಾಪುರದ ಹುಡುಗರಿಗೆ ಇದನ್ನು ಕೇಳಿ ಬಹಳ ಹೆದರಿಕೆಯಾಯಿತು. ಬೆಳವಾಡಿಯ ಹುಡುಗರು ಸೀತಾರಾಮುವಿನ ಕೈಗಳನ್ನು ಹಂಬುಗಳಿಂದ ಕಟ್ಟಿದರು. ಸೊಂಟಕ್ಕೆ ಹಂಬನ್ನು ಬಿಗಿದು ನಾಲ್ಕು ಜನ ಹಿಡಿದುಕೊಂಡರು. ಅವರಿಂದ ಬಿಡಿಸಿಕೊಳ್ಳಲು ಸೀತಾರಾಮು ಎರಡು ಮೂರು ಸಲ ಪ್ರಯತ್ನಿಸಿ ವಿಫಲನಾದನು. ಬಿಡಿಸಿಕೊಳ್ಳಲು ಪ್ರಯತ್ನಿಸಿದಷ್ಟೂ ಅವನಿಗೆ ಬಂಧನಗಳು ಹೆಚ್ಚಾದವು.

ರಾಮಚಂದ್ರನು ಮೊದಲು ಹಣ್ಣಿಗಾಗಿ ಬರುವನೆಂಬ ಸುದ್ದಿ ಬೇರೆ ಇತ್ತು. ಅದರಿಂದ ಹೆಚ್ಚು ಹೊತ್ತು ಅಲ್ಲಿ ನಿಲ್ಲುವುದು ಕ್ಷೇಮವಲ್ಲವೆಂದು ಯೋಚಿಸಿ ದೇವರಯ್ಯನು ಸೀತಾರಾಮುವನ್ನು ಸೆರೆಹಿಡಿಸಿಕೊಂಡು ಕೊಳ್ಳೆಯೊಡನೆ ಬೆಳವಾಡಿಯ ಕಡೆ ಪ್ರಯಾಣ ಮಾಡಿದನು.

## — ರಾಮಚಂದ್ರನ ಸಾಹಸ —

ತಮ್ಮನ್ನು ಬಿಟ್ಟಕೂಡಲೇ ಕಾಳ ಮುಂತಾದ ಹುಡುಗರು ಸ್ವಲ್ಪದೂರ ಓಡಿಹೋಗಿ ಒಂದು ಪೊದೆಯ ಮರೆಯಲ್ಲಿ ಅವಿತು ಸೀತಾರಾಮುವನ್ನು ಏನು ಮಾಡುತ್ತಾರೋ ಎಂದು ಹೆದರುತ್ತ ಕುಳಿತಿದ್ದರು. ಒಂದು ವೇಳೆ ಅವನನ್ನೇನಾದರೂ ಹಿಂಸಿಸಿದರೆ ತಾವು ಪ್ರಾಣದ ಮೇಲೆ ಹಂಗು ತೊರೆದು ಅವನ ಸಹಾಯಕ್ಕೆ ಹೋಗಬೇಕೆಂದುಕೊಂಡಿದ್ದರು. ಆದರೆ ಸೀತಾರಾಮು ವನ್ನು ಒಳ್ಳಿಗಳಿಂದ ಬಿಗಿದು ಬೆಳವಾಡಿಯ ಕಡೆಗೆ ಕರೆದುಕೊಂಡು ಹೊರಟು ದನ್ನು ನೋಡಿ ಏನು ಮಾಡಬೇಕೆಂದು ಸ್ವಲ್ಪಹೊತ್ತು ಅವರವರೇ ಚರ್ಚಿಸಿ ದರು. ಕಡೆಗೆ, ಕಾಳನೂ ಶಂಕರನೂ ಅವರನ್ನು ಹಿಂಬಾಲಿಸಿ ಹೋಗಿ ಸೀತಾರಾಮುವಿಗೆ ಹೆಚ್ಚಾದ ಅಪಾಯ ಸಂಭವಿಸುವುದಾದರೆ ಆಗ ಅವನಿಗೆ ನೆರವಾಗಬೇಕೆಂದೂ, ಉಳಿದವರು ಊರಿಗೆ ಹೋಗಿ ರಾಮಚಂದ್ರನಿಗೆ ಈ ಸಮಾಚಾರವನ್ನು ತಿಳಿಸಿ ಸಹಾಯಕ್ಕೆ ಎಲ್ಲರನ್ನೂ ಕರೆದುಕೊಂಡು ಬರ ಬೇಕೆಂದೂ ನಿಶ್ಚಯಿಸಿದರು; ಮತ್ತು ಅದರಂತೆ ಹುಡುಗರು ತಮ್ಮ ತಮ್ಮ ದಾರಿ ಹಿಡಿದರು.

ಅಜ್ಜಪ್ಪನ ಶಾಮಯ ಮನೆಯಲ್ಲೇ ಮೊದಲು ಎಲ್ಲರೂ ಮಂಗಳಾ ರತಿಗೆ ಸೇರಿದ್ದರು. ಅಲ್ಲಿ ಸೀತಾರಾಮು ಇಲ್ಲದುದನ್ನು ಕುರಿತು ತನ್ನ ಉಪಾಯ ಫಲಿಸಿತೆಂದು ರಾಮಚಂದ್ರನು ಹಿಗ್ಗಿದನು. ದೇವರಯ್ಯನ ಗುಂಪೂ ಕಾಣಲಿಲ್ಲ. ಇದು ಅವನಿಗೆ ಬಹಳ ಆಶ್ಚರ್ಯವನ್ನುಂಟು ಮಾಡಿತು. ಆದರೆ, ತನ್ನ ಸಂತೋಷದ ಭರದಲ್ಲೂ, ಮನೆ ಮನೆಯಲ್ಲೂ ಮಂಗಳಾರತಿ ಕೊಡುವುದು, ಎಲೆ ಹಂಚುವುದು ಮೊದಲಾದ ಕೆಲಸಗಳ ಸಂಭ್ರಮದಲ್ಲೂ ದೇವರಯ್ಯನ ಗುಂಪು ಎತ್ತ-ಎಲ್ಲಿ ಎಂಬುದನ್ನು ಪತ್ತೆಹಚ್ಚುವುದರ ಕಡೆಗೆ ಮನಸ್ಸು ಓಡಲಿಲ್ಲ.

ಮಠದ ಸುಬೇದಾರ್ ತಮ್ಮಯ್ಯನವರ ಮನೆಯಲ್ಲಿ ಮಂಗಳಾರತಿ ಯಾಗುತ್ತಿತ್ತು. ಇನ್ನೂ ಬಹಳ ಮನೆಗಳಲ್ಲಿ ಮಂಗಳಾರತಿಯಾಗಬೇಕಾ ಗಿದ್ದುದರಿಂದ ಜಾಗ್ರತ ಜಾಗ್ರತೆಯಾಗಿ ಮಂಗಳಾರತಿ ಮಾಡುತ್ತಿದ್ದರು. ಮಠದ ತಮ್ಮಯ್ಯನವರ ಮನೆಯಲ್ಲಿ ಜನರೆಲ್ಲ ಸೇರಿದ್ದಾಗ ಮುತ್ತಾರಿ ಬಂದು

ರಾಮಚಂದ್ರನ ಕಿವಿಯಲ್ಲಿ ಏನೋ ಹೇಳಿದನು. ಅವನು ಹೇಳಿದುದನ್ನು ಕೇಳಿ ರಾಮಚಂದ್ರನು ಸ್ವಲ್ಪ ಗಾಬರಿಗೊಂಡನು. ಅವನು ಹೊರಗೆ ಬಂದು ಕೊಟ್ಟಿಗೆಯ ಮರೆಯಲ್ಲಿ ನಿಂತಿದ್ದ ಸೀನ, ಕಿಟ್ಟಿ ಮುಂತಾದ ಹುಡುಗರ ಬಳಿ ಹೋದನು. ಆ ಹುಡುಗರೆಲ್ಲ ಸಪ್ಪೆಮೋರೆ ಹಾಕಿಕೊಂಡು ನಿಂತಿದ್ದರು. ರಾಮಚಂದ್ರನನ್ನು ನೋಡಿ ಕೆಲವು ಹುಡುಗರಿಗೆ ಅಳುವೇ ಬಂದಂತಾಯಿತು.

'ಕಿಟ್ಟಿ ಏನಾಯಿತು ?' ಎಂದು ಕೇಳಿದನು ರಾಮಚಂದ್ರ.

'ಸೀತಾರಾಮು........' ಎಂದನು ಕಿಟ್ಟಿ. ದುಃಖದಿಂದ ಅವನಿಗೆ ಮುಂದಕ್ಕೆ ಮಾತೇ ಹೊರಡಲಿಲ್ಲ.

'ಸೀತಾರಾಮು ? ........ಏನಾಯಿತು ?' ಎಂದನು ರಾಮಚಂದ್ರ.

ಅಷ್ಟರಲ್ಲಿ 'ರಾಮಚಂದ್ರ' ಎಂದು ಒಳಗಡೆಯಿಂದ ದೊಡ್ಡವರು ಯಾರೋ ಕೂಗಿದರು. 'ಬಂದೆ' ಎಂದು ಉತ್ತರಕೊಟ್ಟು ಸೀತಾರಾಮುವಿನ ಸಮಾಚಾರವನ್ನು ಕೇಳತೊಡಗಿದನು.

ದೇವರಯ್ಯನ ಕಡೆಯವರು ಸೀತಾರಾಮುವನ್ನು ಹಿಡಿದುಕೊಂಡು ಹೋದ ಸಮಾಚಾರವನ್ನು ವಿಶದವಾಗಿ ತಿಳಿಸಿ "ಬೇಗ ಹೋಗಿ ಹೇಗಾದರೂ ಮಾಡಿ ಅವನನ್ನು ಬಿಡಿಸಿಕೊಳ್ಳದಿದ್ದರೆ ಬೆಳವಾಡಿ ಕೆರೆಗೆ ಹಾಕಿಬಿಡುತ್ತಾರೆ" ಎಂದನು ಕಿಟ್ಟಿ. ಅಷ್ಟು ಹೊತ್ತಿಗೆ ಅಯ್ಯ ಬಂದು ಸಮಾಚಾರವನ್ನೆಲ್ಲ ಕೇಳಿ "ಬೆಳಿಗ್ಗೆ ಭಂಡವ್ಯಾಜ್ಯ ತೆಗೆದು, ಸ್ವಲ್ಪ ಜನ ಅಂತ ನಮ್ಮನ್ನೆಲ್ಲ ಹೊಡೆದು ಹೂ ಕಿತ್ತುಕೊಂಡು ಹೋದನಲ್ಲ; ಅದಕ್ಕೆ ತಕ್ಕ ಫಲವಾಯ್ತು" ಎಂದನು.

ರಾಮಚಂದ್ರ ಸ್ವಲ್ಪಹೊತ್ತು ಯೋಚನೆ ಮಾಡಿದನು. ಒಂದು ಸಲ, ಅಯ್ಯನು ಹೇಳುವುದು ನ್ಯಾಯವೆಂದೂ ಬೆಳಿಗ್ಗೆಯ ಭಂಡವ್ಯಾಜ್ಯಕ್ಕೆ ತಕ್ಕ ಫಲವಾಯಿತೆಂದೂ ಯೋಚಿಸಿದನು. ಮರುಕ್ಷಣವೇ ಬೆಳಗಿನ ವ್ಯಾಜ್ಯವನ್ನು ಮರೆತನು. ತನ್ನ ಹೊಡೆದಾಟವನ್ನು ಮರೆತನು. ತಾನು ಕಳಸಾಪುರಕ್ಕೆ ಬಂದ ದಿನ, ಕಣಿವೆಯಲ್ಲಿ ಹುಲಿ ಅಡ್ಡಹಾಕಿದಾಗ, ಸೀತಾರಾಮು ಹುಡುಗರೊಡನೆ ಬಂದುದೂ, ಅಲ್ಲಿಂದ ಎಲ್ಲರೂ ಎಷ್ಟೋ ಸಂತೋಷವಾಗಿ ಮಾತಾಡಿಕೊಂಡು ಊರಿಗೆ ಬಂದುದೂ, ಆ ದಿನ ರಾತ್ರಿ ಸೀತಾರಾಮುವಿನೊಡನೆ

ಅವನ ಮಾವನ ಮನೆಗೆ ಹೋಗುತ್ತ ಒಬ್ಬರ ಹೆಗಲ ಮೇಲೊಬ್ಬರು ಕೈ ಹಾಕಿ ಕೊಂಡು ಹೋದುದೂ, ಆಗ ಇಬ್ಬರೂ ತಮ್ಮ ತಮ್ಮ ತಾಯಿ ತಂದೆಯ ರನ್ನು ಜ್ಞಾಪಿಸಿಕೊಂಡುದೂ, ತನಗೆ ಅಣ್ಣ ತಮ್ಮಂದಿರು ಯಾರೂ ಇಲ್ಲವೆಂದು ತಾನು ಹೇಳಿದಾಗ "ರಾಮಚಂದ್ರ, ನಾವು ಅಣ್ಣ ತಮ್ಮಂದಿರಂತೆ ಇರೋಣ" ಎಂದು ಸೀತಾರಾಮು ಹೇಳಿದುದೂ ಅವನಿಗೆ ಜ್ಞಾಪಕಕ್ಕೆ ಬಂದಿತು. ಇದ ನ್ನೆಲ್ಲಾ ನೆನೆಸಿಕೊಂಡು, ಸೀತಾರಾಮು ಆ ಹುಡುಗರ ಕೈಗೆ ಸಿಕ್ಕಿದುದಕ್ಕಾಗಿ ರಾಮಚಂದ್ರನಿಗೆ ಬಹಳ ದುಃಖವಾಯಿತು.

"ನಮ ನಮಗೆ ಕಾರಣಾಂತರದಿಂದ ಮನಸ್ತಾಪ ಬಂದು ಬಿಟ್ಟಿತು. ಈಗ ಅದನ್ನು ದೊಡ್ಡದು ಮಾಡಿಕೊಂಡು ಸೀತಾರಾಮುವನ್ನು ಬಿಡಿಸಿ ಕೊಂಡು ಬರದೇ ಹೋದರೆ ನಮ್ಮ ಊರಿನ ಹುಡುಗರಿಗೇ ಕೆಟ್ಟ ಹೆಸರು ಬರುತ್ತದೆ. ಸೀತಾರಾಮುವಿಗೆ ಏನೂ ಅಪಾಯ ಸಂಭವಿಸದೇ ಇದ್ದರೂ ಅವನನ್ನು ಬಿಡಿಸಿಕೊಂಡು ಬರದೇ ಇದ್ದರೆ ಮಿಕ್ಕ ಊರಿನ ಹುಡುಗರೆಲ್ಲ ನಮ್ಮನ್ನು ಕೈಲಾಗದವರೆಂದು ಹಾಸ್ಯಮಾಡುತ್ತಾರೆ. ಹಾಗಾಗದ ಹಾಗೆ ಏನಾದರೂ ಮಾಡಿ ಸೀತಾರಾಮುವನ್ನು ಬಿಡಿಸಿಕೊಂಡು ಬರಲೇ ಬೇಕು" ಎಂದನು ರಾಮಚಂದ್ರ.

ರಾಮಚಂದ್ರನ ಮಾತು ಸರಿಯೆಂದು ಎಲ್ಲ ಹುಡುಗರೂ ಹೇಳಿದರು. ಸ್ವಲ್ಪಹೊತ್ತಿನಲ್ಲೇ ಅವನ ಅಪ್ಪಣೆಯಂತೆ ಕಳಸಾಪುರದ ಹುಡುಗರೆಲ್ಲ ಕವಣೆ ಕಲ್ಲು ದೊಣ್ಣೆಗಳೊಡನೆ ಊರು ಮುಂದಿನ ತೋಪಿನಲ್ಲಿ ಸಿದ್ಧರಾಗಿ ಬಂದು ಸೇರಿದರು. ಮತ್ತು ಬೆಳವಾಡಿಯ ಕಡೆಗೆ ಧಾವಿಸಿ ಹೋದರು

ಇತ್ತ, ದೇವರಯ್ಯನ ಗುಂಪು ಮೊದಲು ಹೇಳಿದಂತೆ ಸೀತಾರಾಮು ವನ್ನು ಬಳ್ಳಿಗಳಿಂದ ಬಿಗಿದು ಅವನನ್ನು ಗೇಲಿಮಾಡುತ್ತ, ಮಧ್ಯೆ ಮಧ್ಯೆ ಒಂದೊಂದು ಏಟು ಕೊಡುತ್ತ, ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆ ಎಂದು ಹೆದರಿಸುತ್ತ ಅವನನ್ನು ಸುತ್ತುಗಟ್ಟಿಕೊಂಡು ಹೋಗುತ್ತಿದ್ದರು. ಹೀಗೆ ಅವರು ಕಳಸಾಪುರದಿಂದ ಎರಡೂವರೆ ಮೈಲಿಯಷ್ಟು ದೂರ ಹೋಗಿ ದ್ದರು. ಬೆಳವಾಡಿಗೆ ಇನ್ನೂ ಒಂದೂವರೆ ಮೈಲಿ ಹೋಗಬೇಕಾಗಿತ್ತು.

ಬಸವನಕೋಡಿಗೆ ಅರ್ಧಮೈಲಿ ಕಳಸಾಪುರದ ಕಡೆಗಿರುವ ಈಶ್ವರ ಹಳ್ಳಿಯ ತಿಟ್ಟಿನಲ್ಲಿ ಮೊದಲ ಹಣ್ಣನ್ನು ತಿನ್ನಲು ನಿಂತರು. ಸೀತಾರಾಮುವಿನ ಕೈಕಾಲುಗಳನ್ನು ಬಿಗಿಯಾಗಿ ಕಟ್ಟಿ ನೆಲದ ಮೇಲೆ ಉರುಳುಗೆಡವಿದರು. ಎಲ್ಲರಿಗೂ ಒಂದೊಂದು ಹಣ್ಣು ಬಂದು ಇನ್ನೂ ನಾಲ್ಕೈದು ಉಳಿದಿತ್ತು. ಎಲ್ಲರೂ ಹಣ್ಣುಗಳನ್ನು ಕಲ್ಲಿನಿಂದ ಚಚ್ಚಿ ಹಲ್ಲಿನಿಂದ ಸಿಪ್ಪೆ ಕಡಿದು ತೆಗೆದುಹಾಕುತ್ತ ತಿನ್ನುತ್ತಿದ್ದರು.

ಸೀತಾರಾಮುವನ್ನು ಕೈಕಾಲು ಕಟ್ಟಿಹಾಕಿದ್ದ ಕಡೆಗೂ ಹುಡುಗರು ಮೊದಲಹಣ್ಣು ತಿನ್ನುತ್ತಕುಳಿತಿದ್ದ ಕಡೆಗೂ ಐದಾರು ಮಾರು ಅಂತರವಿತ್ತು. ದಾರಿಯ ಎರಡು ಕಡೆಗಳಲ್ಲೂ ಈಚಲ ಗಿಡಗಳೂ ಕುರುಚಲು ಗಿಡಗಳೂ ಪೊದೆಗಳೂ ಬೆಳೆದಿದ್ದವು. ಹಣ್ಣು ತಿನ್ನುತ್ತ ಹರಟೆ ಹೊಡೆಯುವುದರಲ್ಲಿ ಹುಡುಗರೆಲ್ಲ ಮಗ್ನರಾಗಿದ್ದಾಗ ಸೀತಾರಾಮು ಮೆಲ್ಲಗೆ ತೆವಳಿಕೊಂಡು ಹತ್ತಿರ ವಿದ್ದ ಕುರುಚಲುಗಿಡದ ಕಡೆಗೆ ಹೋಗಲು ಪ್ರಯತ್ನಿಸುತ್ತಿದ್ದನು. ಕಲ್ಲಿಗೆ ಉಜ್ಜಿ ಕೈಗೆ ಕಟ್ಟಿದ ಕಟ್ಟನ್ನು ಮೊದಲು ಹರಿದುಕೊಂಡು ಅನಂತರ ಕಾಲಿನ ಕಟ್ಟನ್ನು ಬಿಡಿಸಿಕೊಂಡು ಹೋಗಬೇಕೆಂದು ಅವನು ನಿರ್ಧರಿಸಿದ್ದನು.

ಹೀಗೆ ಪೊದೆಯ ಕಡೆ ಉರುಳಿ ಹೋಗುತ್ತಿದ್ದಾಗ, ಆ ಕುರುಚಲು ಗಿಡಗಳ ಮಧ್ಯೆ, ಸ್ವಲ್ಪದೂರದಲ್ಲಿ, ನೆಲದಲ್ಲಿ ಮಲಗಿಕೊಂಡು ಒಂದು ವ್ಯಕ್ತಿ ತನ್ನ ಕಡೆಗೇ ಬರುತ್ತಿದ್ದುದನ್ನು ಸೀತಾರಾಮುವು ಕಂಡನು. ತನ್ನ ಕಡೆಯವರು ಯಾರೋ ಇರಬೇಕೆಂದು ಸೀತಾರಾಮುವಿಗೆ ಅರ್ಧ ಧೈರ್ಯ ಬಂದಂತಾಯಿತು. ಮೈಯಲ್ಲಿ ಎಷ್ಟೋ ಶಕ್ತಿ ಬಂದಂತಾಯಿತು. ನೆಲದ ಮೇಲಿದ್ದ ಕಲ್ಲು ಮುಳ್ಳು ಒಂದನ್ನೂ ಲಕ್ಷ್ಯಮಾಡದೆ ತನ್ನ ಶಕ್ತಿಮೀರಿ ಗಿಡಗಳ ಕಡೆಗೆ ಉರುಳಿಹೋದನು. ಅವನು ಒಂದು ಸಣ್ಣ ಕುರುಚಲು ಗಿಡದ ಮರೆಗೆ ಬಂದನೋ ಇಲ್ಲವೋ, ಗಿಡದಲ್ಲಿ ಅವಿತು ಬರುತ್ತಿದ್ದ ವ್ಯಕ್ತಿ ಮಾತಾಡದೆ, ಮಾತಾಡಬೇಡವೆಂದು ಸೀತಾರಾಮುವಿಗೂ ಸನ್ನೆಮಾಡಿ, ಕೈಲಿದ್ದ ಕುಡುಗೋಲಿನಿಂದ ಸೀತಾರಾಮುವಿನ ಮೈಮೇಲಿನ ಕಟ್ಟುಗಳನ್ನೆಲ್ಲಾ ಕತ್ತರಿಸಿ ಅವನನ್ನು ಬಿಡಿಸಿದನು.

ಸೀತಾರಾಮು ನೋಡಿದನು. ಅವನು ರಾಮಚಂದ್ರನಾಗಿದ್ದನು!

ರಾಮಚಂದ್ರನು ಸೀತಾರಾಮುವಿನ ಕೈ ಹಿಡಿದುಕೊಂಡು ಅವನ ಕಿವಿಯಲ್ಲಿ 'ಎಲ್ಲರೂ ಬಂದಿದ್ದೇವೆ; ಹೆದರಬೇಡ' ಎಂದನು. ಮತ್ತು ಇಬ್ಬರೂ ತೆವಳಿಕೊಂಡೇ ಸ್ವಲ್ಪದೂರ ಹೋಗಿ, ಅನಂತರ ಓಡಿಹೋಗಿ ತಮ್ಮ ಗುಂಪು ಸೇರಿಕೊಂಡರು.

ಕಳಸಾಪುರದ ಹುಡುಗರು, ದೇವರಯ್ಯನ ಗುಂಪಿನವರೆಲ್ಲ ಅಲ್ಲಿ ಕುಳಿತಿರುವುದನ್ನು ಪತ್ತೆಮಾಡಿ ಅವರನ್ನು ಮಧ್ಯೆ ಸೇರಿಸಿಕೊಂಡು, ಬೆಳವಾಡಿಯ ಕಡೆಯ ಹಾದಿಯಲ್ಲಿ ಕವಣೆ ಕಲ್ಲುಗಳೊಡನೆ ಸಿದ್ಧರಾಗಿ ನಿಂತರು. ತಾವು ಇದಿರು ಪಕ್ಷದವರಿಗೆ ಕಾಣಿಸಿಕೊಳ್ಳುವ ಮೊದಲು ಸೀತಾರಾಮುವನ್ನು ಬಿಡಿಸಿಕೊಂಡು ಬರಬೇಕಾಗಿತ್ತು. ಆದುದರಿಂದ ರಾಮಚಂದ್ರನೇ ಹೋಗಿ ಸೀತಾರಾಮುವನ್ನು ಬಿಡಿಸಿಕೊಂಡು ಬಂದನು.

ಸೀತಾರಾಮುವು ತಮ್ಮ ಮಧ್ಯೆ ಬಂದಮೇಲೆ ಹುಡುಗರೆಲ್ಲ ಕೇಕೆ ಹಾಕಿ ಗಟ್ಟಿಯಾಗಿ ಕೂಗಿದರು. ಆ ಕೂಗನ್ನು ಕೇಳಿ ದೇವರಯ್ಯನ ಕಡೆ ಹುಡುಗರೆಲ್ಲ ಬೆಚ್ಚಿಬಿದ್ದರು. ಅವರು ನೋಡುತ್ತಾರೆ; ಸೀತಾರಾಮು ತಪ್ಪಿಸಿಕೊಂಡು ಹೋಗಿದ್ದಾನೆ! ಅವರು ದಿಗಿಲಿನಿಂದ ಎದ್ದು ನಿಂತರು. ಆಗ ಸಂತತವಾಗಿ ಕವಣೆ ಕಲ್ಲುಗಳು ಬೀಳಲು ಮೊದಲಾಯಿತು; ಕೆಲವು ದೂರದಲ್ಲಿ ಬಿದ್ದವು; ಕೆಲವು ಹತ್ತಿರದಲ್ಲೇ ಬಿದ್ದವು. ಬೆಳವಾಡಿಯ ಕಡೆ ಹೋಗಲು ಅವರು ನಾಲ್ಕು ಹೆಜ್ಜೆ ಮುಂದೆ ಸರಿದರು.

ರಾಮಚಂದ್ರನು ಮುಂದೆ ಬಂದು "ಈಗ ನಾವು ಹೇಳಿದ ಹಾಗೆ ಕೇಳುತ್ತೀರೋ ಇಲ್ಲವೊ ?" ಎಂದನು.

ಇದಿರು ಪಕ್ಷದಿಂದ ಉತ್ತರ ಬರಲಿಲ್ಲ.

"ಸೋತೆವು ಎಂದು ಒಪ್ಪಿಕೊಂಡು ಬಿಡಿ, ಇಲ್ಲದೇ ಇದ್ದರೆ ಕವಣೇ ಏಟು ಬೀಳುತ್ತದೆ" ಎಂದನು ಸೀತಾರಾಮು.

"ನೀವು ಏನೇ ಹೇಳಿ ನಾವು ಸೋತೆವು ಎಂದು ಒಪ್ಪುವುದಿಲ್ಲ" ಎಂದನು ನೇರಲಿಗೆ ಚಲುವಯ್ಯ.

"ಹೋಗಲಿ, ಕಳಸಾಪುರಕ್ಕೆ ಬಂದು ಮಂಗಳಾರತಿಯಲ್ಲಿ ಬರುವ ದಕ್ಷಿಣೆಯಲ್ಲಿ ಅರ್ಧ ಕೊಟ್ಟುಬಿಡಿ" ಎಂದನು ರಾಮಚಂದ್ರ.

ದೇವರಯ್ಯನು ತನ್ನ ಕಡೆಯವರನ್ನೆಲ್ಲ ವಿಚಾರಿಸಿದನು. ಸಿರ್ವಾಹ ವಿಲ್ಲದೆ ಕಡೆಗೆ ಎಲ್ಲರೂ ಒಪ್ಪಿದರು.

"ಒಪ್ಪಿದೆ" ಎಂದನು ದೇವರಯ್ಯ.

"ಹಾಗಿದ್ದರೆ ಇನ್ನು ನಮುನಮಗೆ ವ್ಯಾಜ್ಯವಿಲ್ಲ. ಯಾರೂ ಓಡಿಹೋಗು ವುದಾಗಲೀ, ಜಗಳವಾಡುವುದಾಗಲೀ ಕೂಡದು" ಎಂದು ರಾಮಚಂದ್ರನು ಹೇಳಿದನು. ಎರಡು ಗುಂಪಿನ ಹುಡುಗರೂ ಒಂದು ಕಡೆ ಸೇರಿದರು.

"ಬನ್ನಿ, ಬೇಗ ಹೋಗೋಣ. ತೋಟ್ಟಿಯ ಮನೆಯಲ್ಲಿ ಮಂಗಳಾರತಿ ಯಾಗುವ ಹೊತ್ತಿಗಾದರೂ ಹಾಜರಾಗೋಣ" ಎಂದನು ಅಯ್ಯ.

"ಇವತ್ತು ಚರ್ಪನ್ನೆಲ್ಲ ಕಳೆದುಕೊಂಡು ಬಿಟ್ಟೆವು" ಎಂದನು ಮುತ್ತಾರಿ. ಹುಡುಗರೆಲ್ಲ ವಿಶ್ವಾಸದಿಂದ ಮಾತಾಡಲು ಮೊದಲು ಮಾಡಿದ್ದರು.

"ಎಲ್ಲ ಮಾದಲ ಹಣ್ಣನ್ನೂ ತಿಂದುಬಿಟ್ಟಿರೇನಿರೋ?" ಎಂದು ಸೀತಾ ರಾಮು ಕೇಳಿದ. ಹುಡುಗರೆಲ್ಲಾ ಗಟ್ಟಿಯಾಗಿ ನಕ್ಕರು. ಅವರೊಡನೆ ಸೀತಾರಾಮುವೂ ನಕ್ಕನು.

"ನಾಲ್ಕೈದು ಹಣ್ಣಿದೆ. ಮಿಕ್ಕುವನ್ನೆಲ್ಲಾ ತಿಂದುಬಿಟ್ಟೆವು" ಎಂದ ದೇವರಯ್ಯ. ಕೇಳಿ ಕಳಸಾಪುರದ ಹುಡುಗರಿಗೆ ಬಹಳ ಸಂಕಟವಾಯಿತು.

"ನೀವೇ ಅದೃಷ್ಟವಂತರು. ಅಂಥ ಒಳ್ಳೇ ಹಣ್ಣುಗಳನ್ನೆಲ್ಲ ಹೊಡೆದು ಬಾರಿಸಿಬಿಟ್ಟಿರಿ" ಎಂದ ನಾಗಪ್ಪ.

"ನಾವು ಕಷ್ಟಪಟ್ಟು ಕುಯ್ದುಕೊಂಡು ಬಂದೆವು" ಎಂದನು ಕಾಳ.

"ಮಹಾ; ನೀವೇನು ಕಷ್ಟಪಟ್ಟಿದು? ಸುಮ್ಮನೆ ಕುಯ್ದುಕೊಂಡು ಬಂದಿರಿ, ಅಷ್ಟೆ. ಆದರೆ ನಾವು, ಎರಡೆರಡು ತಲೆ ದಪ್ಪ ಇದ್ದ ಆ ಹಣ್ಣು ಗಳನ್ನು, ಒಬ್ಬೊಬ್ಬರು ಒಂದೊಂದು ತೆಗೆದುಕೊಂಡು ತಿನ್ನಲೂ ಸಾಧ್ಯ ವಾಗದೆ, ಎಸೆಯಲೂ ಮನಸ್ಸು ಬರದೆ, ಎಷ್ಟೋ ಕಷ್ಟಪಟ್ಟು ಮುಗಿಸಿದೆವು" ಎಂದನು ಬೆಳವಾಡಿಯ ಒಬ್ಬ ಹುಡುಗ. ಕಳಸಾಪುರದ ಹುಡುಗರು ಹೊರತು ಮಿಕ್ಕವರೆಲ್ಲ ನಕ್ಕರು.

'ನಾಲ್ಕೈದು ಹಣ್ಣಿದೆ ಅಂದ್ರಲ್ಲ, ಅದನ್ನಾದರೂ ಕೊಡಿರಪ್ಪ' ಎಂದನು ರಾಮಚಂದ್ರ.

ಆ ಹಣ್ಣುಗಳನ್ನು ಹೆಚ್ಚಿ ದೇವರಯ್ಯನ ಕಡೆಯುವರಿಗೂ ಎರಡೆರಡು ಹೋಳು ಕೊಟ್ಟು, ಕಳಸಾಪುರದ ಹುಡುಗರು ಹಂಚಿಕೊಂಡರು. ಮತ್ತೆ ಮಾತಾಡುತ್ತ ಎಲ್ಲರೂ ಕಳಸಾಪುರದ ಕಡೆ ಹೊರಟರು.

## — ಕಳಸಾಪುರದಲ್ಲಿ ಕೋಲಾಹಲ —

ರಾಮಚಂದ್ರನೂ ಅವನ ಮಾತಿನಂತೆ ಕಳಸಾಪುರದ ಹುಡುಗರೂ ಮಂಗಳಾರತಿಗೆ ತಪ್ಪಿಸಿಕೊಳ್ಳುವವರೆಗೂ ದೊಡ್ಡವರ ದೃಷ್ಟಿ ಹುಡುಗರ ಕಡೆ ಬಿದ್ದಿರಲಿಲ್ಲ. ಸೀತಾರಾಮು ಮೊದಲಾದ ಕೆಲವು ಹುಡುಗರು ಇಲ್ಲದೆ ಇದ್ದುದು ಅಷ್ಟಾಗಿ ಅವರ ಗಮನಕ್ಕೆ ಬಂದಿರಲಿಲ್ಲ. ಬೆಳವಾಡಿ ಜಾವಗಲ್ ಮುಂತಾದ ಹೊರ ಊರುಗಳ ಹುಡುಗರು ಕಾಣದೇ ಹೋದಾಗ ಸ್ವಲ್ಪ ವಿಚಾರಣೆ ನಡೆಯಿತು. ಆ ಹುಡುಗರ ಪೈಕಿ ಅನೇಕರ ತಂದೆ ತಾಯಿಯರೂ ಹಬ್ಬಕ್ಕೆ ಬಂದಿದ್ದರು. ಅವರೆಲ್ಲ ಕಳಸಾಪುರದವರಿಗೆ ಹತ್ತಿರದ ನೆಂಟರು. ಮಂಗಳಾರತಿಯಲ್ಲಿ ಹುಡುಗರು ಕಾಣದೇ ಇದ್ದಾಗ ಅವರೂ ವಿಚಾರಿಸಿದರು. ಕಳಸಾಪುರದ ಹುಡುಗರ ಕೀಟಲೆ ಸ್ವಭಾವ ಎಲ್ಲರಿಗೂ ಗೊತ್ತು. ಆದುದರಿಂದ, ಹೊರ ಊರುಗಳ ಹುಡುಗರಿಗೆ ಕಳಸಾಪುರದ ಹುಡುಗರು ಏನೋ ಕೀಟಲೆ ಮಾಡಿರಬೇಕೆಂದೂ, ಅದರಿಂದಲೇ ಅವರು ಬಂದಿಲ್ಲವೆಂದೂ ಜನರು ಊಹಿಸಿದರು. ಆದರೆ ಮಂಗಳಾರತಿಯ ಗಲಾಟೆಯಲ್ಲಿ ಹೆಚ್ಚು ವಿಚಾರಿಸಲು ಯಾರಿಗೂ ಬಿಡುವಿರಲಿಲ್ಲ.

ಮಠದ ಸುಬೇದಾರ್ ತಮ್ಮಯ್ಯನವರ ಮನೆಯಿಂದ ರಾಮಚಂದ್ರ ಹೊರಟು ಹೋದಮೇಲೆ ಹುಡುಗರೆಲ್ಲ ಅದೃಶ್ಯರಾಗಿ ಬಿಟ್ಟಿದ್ದರು! ಮಂಗಳಾರತಿ ಕೊಡುವವರಿಲ್ಲ, ಚರ್ಪಿಗೆ ಎಲೆ ಕೊಡುವವರಿಲ್ಲ, ಜಮಖಾನ ಹಾಸುವವರಿಲ್ಲ. ಹುಡುಗರು ಮಾಡುತ್ತಿದ್ದ ಈ ಕೆಲಸಗಳನ್ನೆಲ್ಲ ದೊಡ್ಡವರೇ ಮಾಡಬೇಕಾಯಿತು. ಯಾವ ಹುಡುಗನನ್ನೂ ಕೂಗಿದರೂ "ಇಲ್ಲ!"

ಆಗ ವಿಚಾರಣೆಗೆ ಮೊದಲಾಯಿತು. ಆದರೆ, ಯಾರಿಗೂ ಹುಡುಗರು ಏನಾದರೆಂಬುದೇ ತಿಳಿಯದು !

ರಾಮಚಂದ್ರನ ಅಪ್ಪಣೆಯಂತೆ ಸೀತಾರಾಮುವನ್ನು ಬಿಡಿಸಿಕೊಂಡು ಬರಲು ಹೋಗುವಾಗ, ಕವಣೆ ತರಲು ಮುತ್ತಾರಿ ಮನೆಗೆ ಹೋದನು. ಆಗ ಅವನ ತಂಗಿ, ಎಂಟು ವರ್ಷದ ಹುಡುಗಿ ಪಾರ್ವತಿ, ಅವನನ್ನು ನೋಡಿದಳು. ಅಣ್ಣನು ತೋಟಕ್ಕೆ ಹೊರಟುದನ್ನು ಊಹಿಸಿ ತಿಳಿದು "ತಡೀ ಅಪ್ಪನಿಗೆ ಹೇಳ್ತೀನಿ. ಮಂಗಳಾರತಿ ಬಿಟ್ಟು ತೋಟಕ್ಕೆ ಹೊರಟಿಯೋ ?" ಎಂದಳು ಪಾರ್ವತಿ.

ಸೀತಾರಾಮು ಬೆಳವಾಡಿಯ ಹುಡುಗರಿಗೆ ಸೆರೆ ಸಿಕ್ಕಿರುವುದನ್ನು ಮುತ್ತಾರಿ ಅವಳಿಗೆ ತಿಳಿಸಿ, ಅವನನ್ನು ಕೆರೆಗೆ ಹಾಕುವರೆಂದೂ, ತಾವೆಲ್ಲರೂ ಹೋಗಿ ಅವನನ್ನು ಬಿಡಿಸಿಕೊಂಡು ಬರುವೆವೆಂದೂ ಹೇಳಿ, "ಈ ವಿಚಾರವನ್ನು ಯಾರಿಗೂ ಹೇಳಬೇಡ. ನಿನಗೆ ಬೇಕಾದಷ್ಟು ಮಾದಲು ಹಣ್ಣು ತಂದು ಕೊಡುತ್ತೇವೆ" ಎಂದು ಆಸೆ ತೋರಿಸಿದನು.

ಹುಡುಗಿ ಯಾರಿಗೂ ಹೇಳುವುದಿಲ್ಲವೆಂದು ಮುತ್ತಾರಿಗೆ ಭರವಸೆ ಹೇಳಿದರೂ, ಅವನು ಮರೆಯಾದ ಕೂಡಲೇ ಸೀತಾರಾಮುವಿನ ತಂಗಿ ಲಕ್ಷ್ಮಿಯನ್ನು ಮನೆಗೆ ಕರೆದುಕೊಂಡು ಬಂದು "ಅಯ್ಯೋ ಲಕ್ಷ್ಮಿ, ಏನು ಹೇಳಲೇ ನಾನು ಯಾರಿಗೂ ಇಲ್ಲದ ಕಷ್ಟ ಬಂದುಬಿಟ್ಟಿತಲ್ಲಮ್ಮ ನಿನಗೆ" ಎಂದು ಎಷ್ಟೋ ವಯಸ್ಸಾದ ಹೆಂಗಸು ಮಾತಾಡುವಂತೆ ಮರುಕ ತೋರಿ ಮಾತಾಡಿದಳು. ಕಷ್ಟ ಬಂದಿತೆಂಬ ಮಾತನ್ನು ಕೇಳಿ ಲಕ್ಷ್ಮಿಯು ಅಳುವುದಕ್ಕೆ ಮೊದಲು ಮಾಡಿದಳು.

"ಇನ್ನೂ ವಿಚಾರವನ್ನೇ ತಿಳಿಸಿಲ್ಲ, ಆಗಲೇ ಅಳುತ್ತೀಯಲ್ಲಮ್ಮ ಲಕ್ಷ್ಮಿ. ಎಂಥಾ ಹುಡುಗಿಯೋ ನೀನು ? ಧೈರ್ಯ ತಂದುಕೋ. ಹೀಗಾದರೆ ಹೇಗೆ ?" ಎಂದು ಪಾರ್ವತಿಯು ಸ್ವಲ್ಪ ಮೂದಲಿಸಲು ಲಕ್ಷ್ಮಿಯು ಅಳುವುದನ್ನು ನಿಲ್ಲಿಸಿದಳು.

"ಅಳು ; ಅಳದೇ ಹೇಗೆ ಇರೋಕೆ ಆಗುತ್ತೆ. ಇದ್ದ ಒಬ್ಬ ಅಣ್ಣನನೂ

ಕಳೆದುಕೊಂಡೆ " ಎಂದು ಪಾರ್ವತಿ ಬಹಳ ದುಃಖವನ್ನು ತೋರಿಸಿ ಹೇಳಿದಳು. ನಿಜವಾಗಿಯೂ ಅವಳ ಕಣ್ಣುಗಳಲ್ಲೂ ನೀರು ತುಂಬಿತ್ತು.

"ಅಣ್ಣಯ್ಯ ಎಲ್ಲಿ?" ಎಂದು ಲಕ್ಷ್ಮಿ ಅಳುತ್ತ ಕೇಳಿದಳು.

"ಬೆಳವಾಡಿಯ ಹುಡುಗರೆಲ್ಲ ಸೇರಿ ಅವನನ್ನು ಕೆರೆಗೆ ಹಾಕಿದರಂತೆ" ಎಂದಳು ಪಾರ್ವತಿ.

ಲಕ್ಷ್ಮಿ ಅಣ್ಣಾ ಎಂದು ಗಟ್ಟಿಯಾಗಿ ಅಳಲು ಮೊದಲು ಮಾಡಿದಳು.

"ಅಯ್ಯೋ, ಅಳಬೇಡ ಬಿಡು. ನಮ್ಮ ಅಣ್ಣ, ರಾಮಚಂದ್ರ, ಕಾಳ, ಅಯ್ಯ ಇವರೆಲ್ಲಾ ಹೋಗಿದಾರೆ, ಸೀತಾರಾಮೂನ ಬಿಡಿಸಿ ಕರಕೊಂಡು ಬರೋಕೆ. ಅವರು ಕರಕೊಂಡು ಬರುತ್ತಾರೆ; ಅಳಬೇಡಮ್ಮ ಬಿಡು" ಎಂದು ಪಾರ್ವತಿ ಸಮಾಧಾನ ಹೇಳಿದಳು.

ಲಕ್ಷ್ಮಿಯ ಅಳು ನಿಲ್ಲಲಿಲ್ಲ; ಹೆಚ್ಚಾಯಿತು. ಅಡುಗೆಯ ಮನೆಯಲ್ಲಿದ್ದ ಪಾರ್ವತಿಯ ತಾಯಿಗೆ ಕೇಳಿಸಿತು. ಅವರು ಹೊರಗೆ ಬಂದು ನೋಡಿ, "ಏಕಮ್ಮ ಲಕ್ಷ್ಮಿ, ಅಳುತ್ತೀ?" ಎಂದರು.

ಲಕ್ಷ್ಮಿಯಿಂದ ಉತ್ತರ ಬರಲಿಲ್ಲ. ಅಳುವುದು ಜೋರಾಯಿತು.

ಪಾರ್ವತಿಯನ್ನು ವಿಚಾರಿಸಲು ಅವಳು ಮುತ್ತಾರಿಯಿಂದ ಕೇಳಿದ್ದು ಒಂದಾದರೆ ತನ್ನ ಸ್ವಂತದ್ದು ಹತ್ತು ಸೇರಿಸಿಕೊಂಡು - ಸೀತಾರಾಮುವನ್ನು ಬೆಳವಾಡಿ ಹುಡುಗರು ಹಿಡಿದುಕೊಂಡು ಹೋಗಿ ಬೆಳವಾಡಿ ಕೆರೆಗೆ ಹಾಕಿರುವರೆಂದೂ, ಅವನು ಈಜಿಕೊಂಡು ದೊಡ್ಡ ಗುತ್ತಿಗೆ ಹೋಗಿರುವನೆಂದೂ, ಅಲ್ಲಿ ಎಂಟು ಹತ್ತು ಮೊಸಳೆಗಳು ಮುತ್ತಿಕೊಂಡಿದ್ದುವೆಂದೂ, ಸೀತಾರಾಮು ಅವುಗಳೊಡನೆ ವ್ಯಾಜ್ಯವಾಡುತ್ತಿದ್ದನೆಂದೂ, ಅವನನ್ನು ಮೊಸಳೆಗಳಿಂದ ಬಿಡಿಸಿಕೊಂಡು ಬರಲು ಊರಿನ ಹುಡುಗರೆಲ್ಲ ಹೋಗಿರುವರೆಂದೂ, ಮುಂತಾಗಿ - ಬಹಳ ಹೇಳಿದಳು.

ಅಷ್ಟರಲ್ಲಿ ಪಾರ್ವತಿಯ ತಂದೆ ಮನೆಗೆ ಎಲ್ಲರನ್ನೂ ಮಂಗಳಾರತಿಗೆ ಕರೆದುಕೊಂಡು ಬಂದರು. ಬಂದವರೇ ಹೆಂಡತಿಯನ್ನು "ಮುತ್ತಾರಿ ಎಲ್ಲಿ?" ಎಂದು ಕೇಳಿದರು. ಮತ್ತು ಹೆಂಡತಿಯಿಂದ ಪಾರ್ವತಿ ತಿಳಿಸಿದ

ಅಸ್ಪಷ್ಟ ಅದ್ಭುತ ಸಮಾಚಾರಗಳನ್ನು ಕೇಳಿ ದಿಗಿಲುಬಿದ್ದರು. ಅವರೂ ಪಾರ್ವತಿಯನ್ನು ವಿಚಾರಿಸಿದರು. ಅವಳು ತಾಯಿಗೆ ಹೇಳಿದುದಕ್ಕಿಂತ ಎಷ್ಟೋ ಹೆಚ್ಚು ಸಂಗತಿಗಳನ್ನು ಆಗ ಕೂಡಿಸಿಕೊಂಡು ಹೇಳಿದಳು.

"ಇದೆಲ್ಲ ನಿನಗೆ ಹೇಗೆ ತಿಳಿಯಿತು?" ಎಂದರು ಅವಳ ತಂದೆ.

"ಮುತ್ತಾರಿ ಕವಣೆ ತೆಗೆದುಕೊಂಡು ಹೋಗಲು ಬಂದಿದ್ದ. ಅವನೇ ಹೇಳಿದ. ಇನ್ನೂ ಎಷ್ಟೋ ಹೇಳಿದ್ದ. ಆದರೆ ಅದೆಲ್ಲ ಮರೆತು ಹೋಯ್ತು" ಎಂದಳು ಪಾರ್ವತಿ.

ಪಾರ್ವತಿಯ ಸ್ವಭಾವ ಕಳಸಾಪುರದವರೆಲ್ಲರಿಗೂ ಗೊತ್ತು. ಅವಳ ಬುದ್ಧಿ ಬಹಳ ಚುರುಕು. ಒಂದು ಹೇಳಿದರೆ ನೂರು ಊಹಿಸುತ್ತಿದ್ದಳು. ಯಾವ ವಿಚಾರವನ್ನೇ ಆಗಲೀ ಪ್ರಪಂಚದ ಕಷ್ಟಸುಖಗಳನ್ನೆಲ್ಲ ಕಂಡ ದೊಡ್ಡವರಂತೆಯೇ, ದೊಡ್ಡವರ ರೀತಿಯಲ್ಲೇ ಹೇಳುವಳು. ಮಾತಿಗೆ ಮೊದಲಾದರೆ ಮುಗಿಯುವುದೇ ಕಷ್ಟ. ಹಾಡು ಹೇಳುವುದರಲ್ಲಂತೂ ತನಗಿಂತ ಎಷ್ಟೋ ವಯಸ್ಸಾದ ಹುಡುಗಿಯರನ್ನೂ ಮೀರಿಸಿದ್ದಳು. ಕಳಸಾಪುರದ ಹೆಂಗಸರಿಗೆ ಬರುತ್ತಿದ್ದ ಹಾಡುಗಳ ಬಹು ಭಾಗವನ್ನೆಲ್ಲ ಅವಳು ಕಲಿತಿದ್ದಳು. ಅಲ್ಲದೆ, ರಾಗದ ಧಾಟಿಯ ಮೇಲೆ ಎಷ್ಟೋ ಸುಳ್ಳು ಸುಳ್ಳು ಹಾಡುಗಳನ್ನು ಕೂಡಿಸಿಕೊಂಡು, ಆರತಕ್ಷತೆಗಳಲ್ಲಿ, ಕೇಳುವವರಿಗೆ ಸ್ವಲ್ಪವೂ ಐಬು ತೋರದಂತೆ ಹೇಳುವಳು. ಹುಡುಗರೆಲ್ಲ ಅವಳಿಗೆ ''ಸರಬುರುಡೆ'' ಎಂದೂ, "ಬುರುಡೇ ಪಾತು'' ಎಂದೂ ಅಡ್ಡ ಹೆಸರಿಟ್ಟಿದ್ದರು. ಹೀಗಾಗಿ ಬುರುಡೆ ಪಾತು ಹೇಳುವ ನೂರು ಹಾಡುಗಳಲ್ಲಿ ಒಂದಾದರೂ ಸರಿಯಾದ ಹಾಡು ಇರುವುದೆಂದು ಒಪ್ಪಿಕೊಂಡರೂ, ಅವಳು ಹೇಳುವ ನೂರು ಮಾತುಗಳಲ್ಲಿ ಒಂದು ಮಾತಾದರೂ ನಿಜವಿರುವುದೆಂದು ಯಾರೂ ಒಪ್ಪುತ್ತಿರಲಿಲ್ಲ.

ಪಾತು ಸೀತಾರಾಮುವಿನ ಸಮಾಚಾರವನ್ನು ಹೇಳುವಾಗ ತಾನು ಸ್ವಲ್ಪವೂ ಇಲ್ಲದ ಸಂಗತಿಯನ್ನು ಹೇಳುತ್ತಿಲ್ಲವೆಂದು ನೆನೆನು ಭಾವಕ್ಕೆ ತಕ್ಕ ದನಿಯಲ್ಲಿ ಹೇಳುತ್ತಿದ್ದಳು. ಹೇಳಿ, ಕೊನೆಯಲ್ಲಿ "ಅಯ್ಯೋ, ಸೀತಾರಾಮುವಿಗೆ ಎಂಥ ಕಷ್ಟ ಬಂದುಬಿಟ್ಟಿತು. ರಾಮಚಂದ್ರ ಅವರೆಲ್ಲ ಹೋಗಿದಾರೆ. ಆದರೆ, ಪಾಪ! ಆ ಹುಡುಗರು ಆ ನೊಸಳೆಗಳ ಕೈಯಿಂದ ಸೀತಾರಾಮೂನ ಹೇಗೆ

ಬಿಡಿಸಿಕೊಂಡು ಬಂದಾರು ? ನಾಲ್ಕು ಜನ ದೊಡ್ಡೋರು ಹೋಗಿ ಅವರಿಗೆ ಸಹಾಯ ಮಾಡುವುದನ್ನು ಬಿಟ್ಟು, ಕತೆ ಕೇಳೋ ಹುಡುಗರ ಹಾಗೆ ನಿಂತು ಬಿಟ್ಟರಲ್ಲ ! ವಿವೇಕವಾಯಿತು ! ಬಿಡಿ " ಎಂದು ಸುತ್ತ ನಿಂತಿದ್ದವರನ್ನೆಲ್ಲ ತಾಯಿ ಮಕ್ಕಳನ್ನು ಗದರಿಸುವಂತೆ ಗಟ್ಟಿಯಾಗಿ ಗದರಿಸಿಕೊಂಡಳು.

ಪಾರ್ವತಿಯು ಕಥೆಯನ್ನು ನಂಬದೇ ಇದ್ದರೂ, ಹುಡುಗರಿಗೆ ಏನೋ ಅನಾಹುತ ಸಂಭವಿಸಿದೆ ಎಂದು ಎಲ್ಲರೂ ಭಾವಿಸಿದರು. ಸ್ವಲ್ಪಹೊತ್ತಿನಲ್ಲೇ ಪಾರ್ವತಿಯು ಕಟ್ಟುಕಥೆ ಕಾಲು ಬಾಲಗಳೊಡನೆ ಎಲ್ಲೆಲ್ಲೂ ವ್ಯಾಪಿಸಿ ಅಸಾಧ್ಯ ಕೋಲಾಹಲಕ್ಕೆ ಇಟ್ಟುಕೊಂಡಿತು. ಹೊರ ಊರುಗಳಿಂದ ಬಂದಿದ್ದ ಹುಡುಗರ ತಂದೆತಾಯಿಯರಂತೂ ಬಹಳ ಪೇಚಾಡಿದರು. ಕಳಸಾಪುರದ ಹಿರಿಯರು ತಮ್ಮ ಊರ ಹುಡುಗರಮೇಲೆ ರೇಗಾಡಿ ಕೋಪಗೊಂಡು ಕೂಗಾಡಿದರು. ಕೆಲವರು ಮುಂದೇನು ಮಾಡುವುದೆಂದು ಚಿಂತಿಸಿದರು.

ಸ್ವಲ್ಪಹೊತ್ತು ಯೋಚಿಸಿ, ಎಂಟು ಹತ್ತು ಜನ ರೈತರೊಡನೆ ದಫೇದಾರ್ ಶಾಮಣ್ಣನೆಂಬುವರನ್ನು ಹುಡುಗರನ್ನು ಹೋಗಿ ನೋಡಿಕೊಂಡು ಬರಲು ಕಳುಹಿಸಿದರು. ಶಾಮಣ್ಣನವರು ತಮ್ಮಲ್ಲಿದ್ದ ಒಂದು ಹಳೆಯ ಕೆಟ್ಟುಹೋಗಿದ್ದ ಬಂದೂಕವನ್ನು ಎಲ್ಲಿ ಹೋಗಬೇಕಾದರೂ ಜೊತೆಯಲ್ಲಿ ತೆಗೆದುಕೊಂಡೇ ಹೋಗುವರು. ಹುಲಿಯ ಬೇಟೆಗೆ ಹೊರಟವರಂತೆ ಶಾಮಣ್ಣನವರು ಆ ಬಂದೂಕವನ್ನು ಹೆಗಲಮೇಲೆ ಇಟ್ಟುಕೊಂಡು ಹುಡುಗರನ್ನು ಹುಡುಕಿಕೊಂಡು ಬೆಳವಾಡಿಯ ಕಡೆ ಹೊರಟರು.

## — ಉಪಾಯ . .

ವಾಪಸು ಬರುತ್ತ, ಹುಡುಗರಿಗೆ ಒಂದು ದೊಡ್ಡ ಯೋಚನೆ ಬಂದಿತು. ಊರಿಗೆ ಹೋದಕೂಡಲೆ "ಎಲ್ಲಿಗೆ ಹೋಗಿದ್ದಿರಿ ?" ಎಂದು ಕೇಳುತ್ತಾರೆ. "ಪೂಜೆಗೂ ಇರದೆ ಎಲ್ಲಿ ಹೋಗಿದ್ದಿರಿ ?'' ಎಂದು ಕೇಳಿದರೆ ಏನು ಹೇಳು

ವುದು ? ಎಂದು ಎಲ್ಲರೂ ಎಷ್ಟೆಷ್ಟೋ ಯೋಚಿಸಿದರು. ಉಪಾಯ ಬೇಗ ತೋಳಿಯಲಿಲ್ಲ.

ಕಡೆಗೆ, ಕಪ್ಪಯ್ಯ ಎಂಬ ಹುಡುಗ "ಒಂದು ಹಸುವಾಗಲಿ ಎತ್ತಾಗಲಿ ಇದ್ದಿದ್ದರೆ ಒಂದು ಉಪಾಯ ಮಾಡಬಹುದಾಗಿತ್ತು" ಎಂದನು.

"ಏನು ಉಪಾಯ ?" ಎಂದು ಹುಡುಗರು ಅವನನ್ನು ಕೇಳಿದರು.

"ಈಗ ಒಂದು ಹಸುವೋ ಎತ್ತೋ ಇದ್ದಿದ್ದರೆ ಅದನ್ನು ಹಿಡಿದುಕೊಂಡು ಅದಕ್ಕೆ ಪಾಪಾಸುಕಳ್ಳಿ ಹಣ್ಣಿನ ರಸಬಳಿದು ಊರಿಗೆ ಹೊಡೆದುಕೊಂಡು ಹೋಗುವುದು. ಹೋಗಿ 'ಇದನ್ನು ಹುಲಿ ಹಿಡಿದಿತ್ತು. ಬಿಡಿಸಿಕೊಂಡು ಬರಲು ಹೋಗಿದ್ದೆವು. ನಾವು ಹೋಗದೇ ಇದ್ದಿದ್ದರೆ ಇದನ್ನು ಹುಲಿ ತಿಂದು ಹಾಕಿ ಬಿಡುತ್ತಿತ್ತು' ಎಂದು ಹೇಳುವುದು" ಎಂದನು ಕಪ್ಪಯ್ಯ.

ಕಪ್ಪಯ್ಯನ ಉಪಾಯ ಬಹಳ ಉತ್ತಮವಾಗಿ ಕಂಡಿತು. ಹಾಗೆ ತಾವು ಹೇಳಿದರೆ ದೊಡ್ಡವರು ತಮ್ಮ ಮಾತಿನಲ್ಲಿ ಸ್ವಲ್ಪವೂ ಸಂಶಯಪಡುವುದಿಲ್ಲವೆಂದು ಹುಡುಗರೆಲ್ಲ ದೃಢವಾಗಿ ನಂಬಿದರು; ಮತ್ತು ಕಪ್ಪಯ್ಯನ ಬುದ್ಧಿಶಕ್ತಿಯನ್ನು ಕಂಡು ಎಲ್ಲರೂ ಆಶ್ಚರ್ಯಪಟ್ಟರು.

ದಾರಿಯಲ್ಲಿ ಯಾವುದಾದರೂ ಪೋಲಿಯ ದನ ಸಿಕ್ಕಬಹುದೆಂದು ನೋಡುತ್ತ ಬಂದರು. ಆದರೆ ಅವರಿಗೆ ಯಾವ ದನವೂ ಕಂಡುಬರಲಿಲ್ಲ; ಊರು ಹತ್ತಿರ ಹತ್ತಿರ ಬರುತ್ತಿತ್ತು.

ಹೀಗೆ ಬರುತ್ತಿರುವಾಗ ಕಳಸಾಪುರಕ್ಕೆ ಅರ್ಧ ಮುಕ್ಕಾಲು ಮೈಲಿ ಇದೆ ಎನ್ನುವಾಗ "ರಾಮಚಂದ್ರ, ಸೀತಾರಾಮು, ಕಾಳ, ಅಯ್ಯ" ಎಂದು ಮುಂತಾಗಿ ಕಳಸಾಪುರದ ಹುಡುಗರ ಹೆಸರು ಹಿಡಿದು ಕೂಗಿಕೊಂಡು ದಫೇದಾರ್ ಶಾಮಣ್ಣನವರು ತಮ್ಮ ಕಡೆ ಬರುತ್ತಿರುವುದನ್ನು ಅವರು ನೋಡಿದರು. ಮತ್ತು ಎಲ್ಲ ಹುಡುಗರೂ ದಾರಿಯ ಪಕ್ಕದ ಗಿಡಗಳಲ್ಲಿ ಅವಿತು ಕುಳಿತುಕೊಂಡರು.

ಹುಡುಗರ ಹೆಸರುಗಳನ್ನು ಗಟ್ಟಿಯಾಗಿ ಕೂಗುತ್ತ ಶಾಮಣ್ಣನವರು ಅವರು ಕುಳಿತಿದ್ದ ಜಾಗವನ್ನು ದಾಟಿ ಬೆಳವಾಡಿಯ ಕಡೆಗೆ ಬೈತನೊಡನೆ

ಸಾಗಿಹೋದರು. ಅವರು ಕಣ್ಮರೆಯಾದ ಕೂಡಲೇ ಹುಡುಗರು ಊರುಕಡೆ ಹೊರಟರು.

ಊರು ಹತ್ತಿರ ಹೋಗುವ್ವವರೆಗೂ ಅವರಿಗೆ ಯಾವ ದನವೂ ಸಿಕ್ಕಲಿಲ್ಲ. ಆದರಿಂದ ಮುಂದೇನು ಮಾಡಬೇಕೆಂದು ಎಲ್ಲರೂ ಯೋಚಿಸಿದರು. ಆಗಲೂ ಕಪ್ಪಯ್ಯನೇ ಉಪಾಯ ಸೂಚಿಸಿದ. ಪಟೇಲ್ ಚನ್ನಪ್ಪಯ್ಯನವರ ಮನೆಯು ಕೋಟೆಯ ಪಕ್ಕದಲ್ಲೇ ಇದೆ. ಅವರ ಮನೆಯ ಹಿಂಭಾಗದಲ್ಲಿ ಕೋಟೆಯೂ ಮುರಿದುಬಿದ್ದು ಹೋಗಿಬರುವಂತೆ ದಾರಿಯಾಗಿದೆ. ಆದುದರಿಂದ ಚನ್ನಪ್ಪಯ್ಯನವರ ಮಗ ಮಲ್ಲಪ್ಪನು ಕೋಟೆಯ ಕಡೆಯಿಂದ ಹೋಗಿ ಕೊಟ್ಟಿಗೆಯಿಂದ ಒಂದು ಹಸುವನ್ನು ಬಿಚ್ಚಿಕೊಂಡು ಬರಬೇಕು. ಅದಕ್ಕೆ ಪಾಪಾಸುಕಳ್ಳಿಯ ಹಣ್ಣಿನರಸ ಬಳಿದು ಊರೊಳಕ್ಕೆ ಹಿಡಿದುಕೊಂಡು ಹೋಗಬೇಕು.

ಕಪ್ಪಯ್ಯನ ಬುದ್ಧಿಶಕ್ತಿಗೆ ಮತ್ತೆ ಹುಡುಗರೆಲ್ಲ ತಲೆದೂಗಿದರು. ಮಲ್ಲಪ್ಪನೂ ಮತ್ತೊಬ್ಬ ಹುಡುಗನೂ ಕೋಟೆಯ ಹಿಂದಿನಿಂದ ಹೋಗಿ ಕೊಟ್ಟಿಗೆಯಲ್ಲಿ ಹುಲ್ಲು ತಿನ್ನುತ್ತಿದ್ದ ಕಟ್ಟಿಹಾಕಿದ ಹಸುವನ್ನು ಬಿಚ್ಚಿ ಹಗ್ಗಸಮೇತ ಹಿಡಿದುಕೊಂಡು ಬಂದರು. ಆ ಹುಡುಗರು ಬರುವುದಕ್ಕೆ ಸ್ವಲ್ಪ ಮುಂಚೆ ಅದನ್ನು ಚನ್ನಪ್ಪಯ್ಯನವರು ಕೊಟ್ಟಿಗೆಯಲ್ಲಿ ಕಟ್ಟಿ ಹುಲ್ಲು ಹಾಕಿದ್ದರು.

ಆ ಹಸುವಿನ ಕೊರಳಿಗೂ ಹೊಟ್ಟೆಗೂ ಹುಡುಗರು ಬೇಕಾದಷ್ಟು ಪಾಪಾಸುಕಳ್ಳಿ ಹಣ್ಣಿನ ರಸವನ್ನು ಸವರಿದರು. ಮತ್ತು ಅದನ್ನು ಹೊಡೆದುಕೊಂಡು, ಅದರ ಸುತ್ತಲೂ ಗುಂಪು ಕಟ್ಟಿಕೊಂಡು ಊರಿಗೆ ಬಂದರು.

ದಾರಿಯನ್ನೇ ನೋಡುತ್ತಿದ್ದ ಊರಿನವರಿಗೆ ಹುಡುಗರ ಗುಂಪನ್ನು ನೋಡಿ ಸ್ವಲ್ಪ ಸಮಾಧಾನವಾಯಿತು. ಅವರು ಏನು ಅನಾಹುತ ಮಾಡಿಕೊಂಡು ಬಂದಿರುವರೋ ಎಂಬುದನ್ನು ವಿಚಾರಿಸಲು ಊರು ಬಾಗಿಲು ಅರಳೀ ಮರದವರೆಗೂ ಊರಿನವರು ಬಂದರು.

ದೊಡ್ಡವರನ್ನು ನೋಡಿದಮೇಲೆ ತಮ್ಮ ಮಾತನ್ನು ಅವರು ನಂಬುವರೋ ಇಲ್ಲವೋ ಎಂಬ ಶಂಕೆ ಹುಡುಗರಿಗೆ ಬಂತು. ತಮ್ಮ ಗುಟ್ಟು ಬಯಲಾಗುವುದೆಂದು ಅವರೆಲ್ಲ ಹೆದರಿದರು

ಹುಡುಗರ ಗುಂಪು ಹತ್ತಿರ ಬರುತ್ತಲೇ ದೊಡ್ಡವರ ಗುಂಪಿನಿಂದ ನಾಲ್ಕೈದು ಜನ ಒಟ್ಟಿಗೆ "ಸೀತಾರಾಮು ಎಲ್ಲಿರೋ ?" ಎಂದು ಗಟ್ಟಿಯಾಗಿ ಕೇಳಿದರು.

"ಇಗೋ, ಇಲ್ಲಿದೇನೆ" ಎಂದನು ಸೀತಾರಾಮು, ಹುಡುಗರ ಗುಂಪಿನಿಂದ ಮುಂದೆ ಬಂದು.

ಸೀತಾರಾಮುವನ್ನು ನೋಡಿ ಊರಿನವರಿಗೆಲ್ಲ ಪೂರ್ಣ ಸಮಾಧಾನವಾಯಿತು. ಸೀತಾರಾಮುವಿಗೆ ಏನೂ ತೊಂದರೆ ಆಗಿಲ್ಲ ಅವರಿಗೆ ಸಧ್ಯ ಅಷ್ಟು ಬೇಕಾಗಿತ್ತು.

"ಎಲ್ಲಿ ಹೋಗಿದ್ದಿರೊ ?" ಎಂದು ಮಠದ ಸುಬೇದಾರ್ ತಮ್ಮಯ್ಯನವರು ಘರ್ಜಿಸಿದರು. ಹುಡುಗರೆಲ್ಲ ನಡುಗಿದರು.

"ಯಾವ ತೋಟ ಲೂಟಿ ಹೊಡೆಯುವುದಕ್ಕೆ ಹೋಗಿದ್ದಿರಿ ? ನಿಜ ಬೊಗುಳಿ. ಇಲ್ಲದೇ ಇದ್ದರೆ ನಿಮ್ಮ ಚಮಡ ಸುಲಿಸಿ ಬಿಡ್ತೇನೆ" ಎಂದರು ಜವರಾಯಪ್ಪನವರು. ಯಾವ ಹುಡುಗನೂ ಬಾಯಿ ಬಿಡಲಿಲ್ಲ. ಪ್ರತಿಯೊಬ್ಬರೂ ತಮ್ಮ ಮನೆಯ ಹುಡುಗರನ್ನು ಹಿಡಿದುಕೊಂಡು ನಾಲ್ಕು ಬಿಗಿಯಬೇಕೆಂದು ಮುಂದಕ್ಕೆ ಹೆಜ್ಜೆ ಇಡಬೇಕು, ಅಷ್ಟರಲ್ಲಿ ಸೀತಾರಾಮು "ನಾವೇನೂ ಯಾರ ತೋಟವನ್ನೂ ಲೂಟಿ ಮಾಡುವುದಕ್ಕೆ ಹೋಗಿರಲಿಲ್ಲ" ಎಂದು ಹೇಳಿದನು.

"ಮತ್ತೆ ಎಲ್ಲಿ ಹೋಗಿದ್ದಿರಿ ?" ಎಂದು ಎಲ್ಲರೂ ಕೂಗಿಕೊಂಡರು.

"ಪಟೇಲ್ ಅಚ್ಚಣ್ಣನವರ ಮನೆಹಸೂನ ಹುಲಿ ಹಿಡಿದಿತ್ತು. ಅದನ್ನು ಬಿಡಿಸಿಕೊಂಡು ಬರೋಕೆ ಹೋಗಿದ್ದೆವು" ಎಂದನು ಅಯ್ಯ.

"ಯಾವ ಹಸು ?" ಎಂದರು ಅಚ್ಚಣ್ಣನವರು.

"ಹಂಡಿ" ಎಂದು ಹೇಳುತ್ತ ಮಲ್ಲಪ್ಪ ಹಸುವನ್ನು ಜನಗಳ ಮುಂದೆ ತಂದು ನಿಲ್ಲಿಸಿಕೊಂಡನು.

"ಹಂಡಿಯನ್ನು ಹುಲಿ ಹಿಡಿದಿತ್ತೆ ?" ಎಂದರು ಒಬ್ಬರು.

"ಎಲ್ಲಿ ?" ಎಂದು ಅಚ್ಚಣ್ಣನವರು ಕೇಳಿದರು.

"ಮಿಾಸೆಕಕ್ಕನ ತೋಟದ ಹತ್ತಿರ; ಈಚಲ ವನದಲ್ಲಿ" ಎಂದನು ಮಲ್ಲಪ್ಪ.

"ಹಂಡೀನ ಯಾವಾಗ ಹುಲಿ ಹಿಡಿದಿತ್ತು?" ಎಂದರು ಅಚ್ಚಣ್ಣ ನವರು

"ಹಸುವನ್ನು ಹುಲಿ ಹಿಡಿದಿದೆ ಎನ್ನುವುದನ್ನು ನೀವು ಹೇಗೆ ತಿಳಿದಿರಿ?" ಎಂದರು ಜವರಾಯಪ್ಪನವರು.

ಹುಡುಗರು ಉತ್ತರ ಹೇಳಲು ತಡವರಿಸಿದರು

"ಹಂಡಿಯನ್ನು ಹುಲಿ ಹಿಡಿಯುತ್ತೆ ಅನ್ನುವುದನ್ನು ತಿಳಿದು ಆ ಸಮಯಕ್ಕೆ ಸರಿಯಾಗಿ ನೀವು ಹೋಗಿದ್ದೀರಲ್ಲ?" ಎಂದು ಆಶ್ಚರ್ಯಪಟ್ಟವರಂತೆ ಶಾನುಭೋಗ್ ತಿಮ್ಮಪ್ಪಯ್ಯನವರು ಕೇಳಿದರು.

"ಹಂಡೀನ ಹುಲಿ ಹಿಡಿಯುತ್ತೆ ಅಂತ ನಮಗೆ ಸಂಜೆಯೇ ಗೊತ್ತಾಯಿತು. ಅದರಿಂದ ನಾವು ಹೋಗಿ ಬಿಡಿಸಿಕೊಂಡು ಬಂದೆವು. ನಾವು ಹೋಗುವುದು ಸ್ವಲ್ಪ ತಡವಾಗಿದ್ದರೂ ಹಂಡಿ ಬದುಕುತ್ತಿರಲಿಲ್ಲ" ಎಂದನು ಮಲ್ಲಪ್ಪ.

ಮಲ್ಲಪ್ಪ ಇನ್ನೂ ಏನೋ ಬುರುಡೇ ಬಿಡಬೇಕೆಂದಿದ್ದನು. ಆದರೆ ಅಷ್ಟರಲ್ಲೇ ಅವರ ತಂದೆ ಮುಂದೆ ಬಂದು ಹೊದೆದಿದ್ದ ಪಂಚೆಯಲ್ಲಿ ಮರೆಮಾಡಿ ಇಟ್ಟುಕೊಂಡಿದ್ದ ಒಂದು ಕೋಲಿನಿಂದ ಮಲ್ಲಪ್ಪನಿಗೆ ಎರಡೇಟು ಬಲವಾಗಿ ಬಿಗಿದು "ಯಾರ ಹತ್ರ ಹೇಳ್ತೀಯ ಈ ಸುಳ್ಳು? ಹಂಡೀನ ಕೊಟ್ಟಿಗೆಯಿಂದ ಬಿಚ್ಚಿಕೊಂಡು ಹೋದೋರು ಯಾರು? ಬೊಗಳು" ಎಂದು ಘರ್ಜಿಸಿದರು.

ಹುಡುಗರಿಗೆಲ್ಲ ಜೀವ ಬಾಯಿಗೇ ಬಂದಂತಾಯಿತು.

"ನಾನೇ" ಎಂದನು ಮಲ್ಲಪ್ಪ.

ಹುಡುಗರು ಹೇಳಿದುದೆಲ್ಲ ಬರೀ ಸುಳ್ಳಿನ ಕಂತೆ ಎಂಬುದನ್ನು ಆಗ ಎಲ್ಲರೂ ತಿಳಿದುಕೊಂಡರು. ಮತ್ತು ತಮ್ಮ ತಮ್ಮ ಮಕ್ಕಳನ್ನು ಹಿಡಿದುಕೊಂಡು ಚೆನ್ನಾಗಿ ಹೊಡೆಯಬೇಕೆಂದು ಎಲ್ಲರಿಗೂ ಮನಸ್ಸಾಯಿತು. ಕೆಲವರು ಹುಡುಗರನ್ನು ಗುಂಪಿನಿಂದ ಎಳೆದುಕೊಂಡು ಬಂದರು. ಆದರೆ ಅಷ

ರಲ್ಲಿ ಶಾಸ್ತ್ರಿಗಳು ಮುಂದೆ ಬಂದು "ಇವತ್ತು ಹೆಬ್ಬ. ಮಕ್ಕಳನ್ನು ಹೊಡೆಯ ಬೇಡಿ" ಎಂದು ದೊಡ್ಡವರನ್ನು ತಡೆದು, ಹುಡುಗರಿಗೆ "ಸುಳ್ಳು ಹೇಳ ಬಾರದು, ನಿಜ ಹೇಳಿ" ಎಂದರು. ಹುಡುಗರು ಚೂರೂ ಬಿಡದೆ ಎಲ್ಲ ವನ್ನೂ ತಿಳಿಸಿದರು. ಶಾಸ್ತ್ರಿಗಳು ದೊಡ್ಡವರನ್ನು ಕುರಿತು, "ಹುಡುಗರು, ಚೇಷ್ಟೆ ಮಾಡಿದರು ದೊಡ್ಡವರಾದ ಮೇಲೆ ಸರಿಯಾಗುತ್ತಾರೆ. ಮಕ್ಕಳನ್ನು ಹೊಡೆದರೆ ಅಮ್ಮಸವರಿಗೆ ನೋವಾದೀತು, ಒಳ್ಳೇ ಮಾತಿನಲ್ಲೇ ಹೇಳೋಣ" ಎಂದರು. ದೊಡ್ಡವರ ಸಿಟ್ಟು ಹೆಚ್ಚಾದುದನ್ನು ಕಂಡು.

"ಹೇಗೆ ಹೇಳುವುದೋ ನಮಗೆ ಬೇರೆ ತಿಳಿಯುವುದಿಲ್ಲ. ಹೊಡೆದು ಹೇಳಿಯಾಯ್ತು, ಬಡಿದು ಹೇಳಿಯಾಯ್ತು; ಒಳ್ಳೇ ಮಾತಿನಲ್ಲಿ ಹೇಳಿ ಯಾಯ್ತು. ಅವಕ್ಕೆಲ್ಲ ಬಗ್ಗುವ ಹುಡುಗರೇ ಇವರು?" ಎಂದರು ಮಂಟಪ ತಮ್ಮಯ್ಯನವರು. ಇವರು ಹುಡುಗರನ್ನು ಹೊಡೆಯುವುದಕ್ಕೆಂದೇ ವರ್ಷ ವರ್ಷವೂ ಮುಳ್ಳುಸೀಮೆಯಿಂದ ಒಂದು ಕಂತೆ ಬೆತ್ತವನ್ನು ತರುತ್ತಿದ್ದರು.

"ಇವರಿವರು ಏನಾದರೂ ಚೇಷ್ಟೆ ಮಾಡಲಿ, ಬೇಡ ಎನ್ನುವವರಾರು? ಹುಡುಗರಾಗಿದ್ದಾಗ ನಾವು ಇದರ ಹತ್ತರಷ್ಟು ಚೇಷ್ಟೆ ಮಾಡುತ್ತಿದ್ದೆವು. ಆದರೆ ಇದೇನಿದು ಗ್ರಹಚಾರ? ಬೇರೆ ಊರಿನಿಂದ ಒಬ್ಬ ಹುಡುಗನೂ ಈ ಊರಿಗೆ ಬರುವುದಕ್ಕೆ ಆಸ್ಪದವಿಲ್ಲವಲ್ಲ! ಬೆಳವಾಡಿ, ಜಾವಗಲ್, ನೇರಲಿಗೆ, ಹಾರನಹಳ್ಳಿಯ ಹುಡುಗರು ಇವರಿಗೆ ದೂರದವರೆ? ಇವರನ್ನೆಲ್ಲ ಶತ್ರು ಗಳನ್ನು ಕಂಡ ಹಾಗೆ ಕಾಣುತ್ತಾರಲ್ಲ. ಹುಡುಗರಲ್ಲೇ ಹೀಗಾದಮೇಲೆ ದೊಡ್ಡವರಾದ ಮೇಲೆ ಇನ್ನು ಹೇಳುವುದೇನಿದೆ? ನಾವು ಒಂದೂರು, ಒಂದು ಮನೆಯುವರಂತೆ-ಇದ್ದೆವು. ಈ ನೆಂಟು, ಈ ಸ್ನೇಹ, ಈ ವಿಶ್ವಾಸ ಇವೆಲ್ಲ ನಮ್ಮ ಕಾಲಕ್ಕೇ ಸೈ ಎಂದು ತೋರುತ್ತದೆ" ಎಂದು ಶಾನುಭೋಗ್ ತಿಮ್ಮಪ್ಪಯ್ಯನವರು ಬಹಳ ದುಃಖದಿಂದ ಹೇಳಿದರು. ಹೇಳುತ್ತ ಹೇಳುತ್ತ ಅವರ ಕಣ್ಣಿನಲ್ಲಿ ನೀರು ತುಂಬಿತು.

ತಿಮ್ಮಪ್ಪಯ್ಯನವರು ಊರಿನಲ್ಲಿ ದೊಡ್ಡವರು. ಅವರಿಗೆ ಹುಡುಗ ರನ್ನು ಕಂಡರೆ ಒಂದು ರೀತಿಯ ವಿಶ್ವಾಸ. ಹುಡುಗರಿಗೂ ಅವರನ್ನು ಕಂಡರೆ ಭಕ್ತಿ ಹೆಚ್ಚು. ತನ್ನ ನಡತೆಯಿಂದ ಅವರು ನೊಂದುಕೊಳ್ಳು

ವಂತಾಯಿತಲ್ಲ ಎಂದು ಕಳಸಾಪುರದ ಹುಡುಗರಿಗೆಲ್ಲ ಬಹಳ ಸಂಕೋಚವಾಯಿತು. ಏಟು ಕೊಟ್ಟುದಕ್ಕಿಂತ ಹೆಚ್ಚು ನೋವಾಯಿತು. ಹುಡುಗರೆಲ್ಲಾ ತಲೆ ತಗ್ಗಿಸಿದರು.

ಅಲ್ಲಿ ಸೇರಿದ್ದ ಬೇರೆ ಬೇರೆ ಊರಿನವರೂ, ಕಳಸಾಪುರದ ಹಿರಿಯರೂ ಹುಡುಗರಿಗೆಲ್ಲ ಚೆನ್ನಾಗಿ ಬುದ್ಧಿ ಹೇಳಿದರು. ಯಾರೂ ಹುಡುಗರನ್ನು ಹೊಡೆಯಲಿಲ್ಲ; ಬೈಯಲಿಲ್ಲ. ಅವರು ಹಾಗೆ ಮಾಡುವುದು ಸರಿಯಲ್ಲ ಎಂದು ಒಳ್ಳೆಯ ಮಾತಿನಲ್ಲೇ ಹೇಳಿದರು "ಇನ್ನು ಮೇಲೆ ಹೀಗೆ ಹೊಡೆದಾಡುವುದಿಲ್ಲ" ಎಂದು ಕಳಸಾಪುರದ ಹುಡುಗರೂ ಅಳುತ್ತ ಹೇಳಿದರು.

ಇನ್ನೂ ಕೆಲವು ಮನೆಗಳಲ್ಲಿ ಮಂಗಳಾರತಿಯಾಗಬೇಕಾಗಿತ್ತು. ಆ ಮನೆಗಳಿಗೆಲ್ಲ ಹೋಗಿಯಾದಮೇಲೆ ಹುಡುಗರು ತಾವು ಬರುವ ಹೊತ್ತಿಗೇ ಮಂಗಳಾರತಿ ಆಗಿದ್ದ ಎಲ್ಲ ಮನೆಗಳಿಗೂ ಹೋಗಿ ಪ್ರಸಾದ ತೆಗೆದುಕೊಂಡು ಬಂದರು. ಹಾಗೆ ಪ್ರಸಾದಕ್ಕೆ ಹೋದಾಗ ಅವರಿಗೆ ಮನೆಮನೆಯಲ್ಲೂ ಹೆಂಗಸರೂ ಒಳ್ಳೆಯ ಮಾತಿನಲ್ಲೇ ಚೆನ್ನಾಗಿ ಬುದ್ಧಿವಾದ ಹೇಳಿದರು.

ಅಂತೂ ಅಲ್ಲಿಂದ ಮುಂದೆ ಎಲ್ಲರೂ ಸ್ನೇಹಿತರಂತೆ ಇರಬೇಕೆಂದು ಎಲ್ಲ ಊರಿನ ಹುಡುಗರೂ ನಿರ್ಧರಿಸಿದರು.

## — "ಅಡಾವುಡಿ" —

ಇಲ್ಲಿಂದ ಮುಂದೆ ಕಳಸಾಪುರದ ಹುಡುಗರು ಹೊರಗಿನ ಹುಡುಗರ ಮೇಲೆ ತೋರಿಸುತ್ತಿದ್ದ ಛಲವನ್ನು ಬಿಟ್ಟುಬಿಟ್ಟರು. ನೆಂಟರ ಮನೆಗಳಿಗೆ ಹೋಗಿ ಬರುವರು. ಬೆಳವಾಡಿ, ಜಾವಗಲ್, ನೇರಲಿಗೆ ಮುಂತಾದ ಊರುಗಳಿಗೆ ಕಳಸಾಪುರದಿಂದ ಹೆಣ್ಣು ಕೊಟ್ಟು ತರುವ ನೆಂಟುತನ ಬಹಳ ಹಿಂದಿನಿಂದ ಬೆಳೆದು ಬಂದಿತ್ತು. ಈ ಊರುಗಳಲ್ಲಿ ಯಾರ ಮನೆಯಲ್ಲಿಯಾದರೂ ಒಂದು ಮದುವೆ ಮುಂಜಿ ಆದರೆ ಎಲ್ಲ ಊರುಗಳಿಂದಲೂ ನೆಂಟರು ಬರಬೇಕು. ಜನ ತುಂಬಾ ವಿಶ್ವಾಸದವರು. ಅದರಿಂದ ನೆಂಟರಿಷ್ಟರಲ್ಲಿ ಅಭಿಮಾನ ಹೆಚ್ಚು. ಅವರೆಲ್ಲ ಒಂದು ಮನೆಯವರಂತೆ ಕಷ್ಟ

ನ್ನೆಲ್ಲ ಒಂದುಕಡೆ ಇಟ್ಟುಕೊಂಡು ತಿನ್ನಲು ಅವರಿಗೆ ಸರಿಯಾದ ಒಂದು ಜಾಗವಿರಲಿಲ್ಲ. ಆದರಿಂದ ದೆವ್ವದ ಮನೆಯನ್ನು ಏಕೆ ತಮ್ಮ ಕೆಲಸಕ್ಕೆ ಉಪಯೋಗಿಸಿಕೊಳ್ಳಬಾರದೆಂದು ರಾಮಚಂದ್ರನು ಯೋಚಿಸಿದನು. ಆದರೆ ಹುಡುಗರು ದೆವ್ವದ ಮನೆಗೆ ಬರಲು ಹೆದರಿದರು.

"ಅಲ್ಲಿ ದೆವ್ವವಿದೆ. ನಾವು ಅಲ್ಲಿಗೆ ಬರುವುದಿಲ್ಲ" ಎಂದರು.

"ದೆವ್ವ ಅನ್ನುವುದೇ ಸುಳ್ಳು. ಅದು ಇಲ್ಲವೇ ಇಲ್ಲ" ಎಂದನು ರಾಮಚಂದ್ರ.

"ದೆವ್ವ ಇಲ್ಲ ಅಂತ ಹೇಗೆ ಹೇಳ್ತೀಯ ?" ಎಂದನು ಸೀತಾರಾಮು.

"ದೇವರು ಎಲ್ಲ ಕಡೆಯೂ ಇದಾನೆ ಎನ್ನುವುದನ್ನು ಪ್ರಹ್ಲಾದ ತೋರಿಸಿಕೊಡಲಿಲ್ಲವೇನೋ ? ಎಲ್ಲೆಲ್ಲಿಯೂ ದೇವರು ಇದಾನೆ ಅಂದಮೇಲೆ ಆ ಮನೆಯಲ್ಲೂ ಇದ್ದಾನೆ ಅಂದ ಹಾಗಾಯಿತಲ್ಲ" ಎಂದನು ರಾಮಚಂದ್ರ.

ಕೆಲವು ದಿನಗಳ ಹಿಂದೆ ಕಳಸಾಪುರದ ರೈತರು ಬೈಲಾಟದಲ್ಲಿ ಪ್ರಹ್ಲಾದನ ಕಥೆ ಆಡಿದ್ದರು. ಹುಡುಗರು ರಾತ್ರಿಯೆಲ್ಲಾ ಕುಳಿತು ಅದನ್ನು ನೋಡಿದ್ದರು. ರಾಮಚಂದ್ರನ ಮಾತು ನ್ಯಾಯವೆಂದು ಹುಡುಗರು ಯೋಚಿಸಿದರು.

"ದೇವರಿದ್ದ ಕಡೆ ದೆವ್ವ ಹೇಗೆ ಇರುವುದು ಸಾಧ್ಯ?" ಎಂದನು ರಾಮಚಂದ್ರ.

"ಅಲ್ಲಿ ದೆವ್ವ ಇದೆ ಅಂತಾರಲ್ಲ ಅಮ್ಮ ಅಣ್ಣ ಎಲ್ಲಾ?" ಎಂದು ಒಬ್ಬ ಹುಡುಗನು ಕೇಳಿದನು.

"ದೇವರಿದಾನೆ ಅಂತ ಅವರು ಯೋಚನೆ ಮಾಡಲಿಲ್ಲ. ಆದರಿಂದ ಅವರು ಹಾಗೆ ಹೇಳಿದರು. ಪ್ರಹ್ಲಾದ ತೋರಿಸುವುದಕ್ಕಿಂತ ಮೊದಲು ಆ ಕಂಭದಲ್ಲಿ ದೇವರು ಇರಲಿಲ್ಲವೇನು? ಇದ್ದೇ ಇದ್ದ. ಆದರೆ ಅದನ್ನು ಪ್ರಹ್ಲಾದ ತಿಳಿದ, ಮಿಕ್ಕವರು ತಿಳಿಯಲಿಲ್ಲ; ಅಷ್ಟೆ. ಇಲ್ಲೂ ಹಾಗೇ." ಎಂದನು ರಾಮಚಂದ್ರ.

"ನಾವೂ ದೇವರನ್ನು ನಂಬಿ ಬಿಡೋಣ. ಆ ಮನೆಗೇ ಹೋಗಿಬಿಡೋಣ" ಎಂದನು ಸೀತಾರಾಮು.

ಹುಡುಗರೆಲ್ಲರೂ ಒಪ್ಪಿದರು.

ಊರಿನ ದೇವರುಗಳಿಗೆಲ್ಲ ಕೈಮುಗಿದು ಅಡ್ಡಬಿದ್ದು ಸ್ತೋತ್ರಮಾಡಿ, ಬಿದ್ದುಹೋಗಿದ್ದ ಒಂದು ಕಡೆಯಿಂದ ಹುಡುಗರು ದೆವ್ವದ ಮನೆಗೆ ಹೋದರು. ಒಂದು ದೇವರ ಪಠವನ್ನು ಮನೆಯೊಳಗೆ ಒಂದುಕಡೆ ಇಟ್ಟು ಪೂಜೆಮಾಡಿದರು. ಒಂದೆರಡು ದಿನ ಹೋಗಿಬರಲು ಸ್ವಲ್ಪ ಅಳುಕಿದರು. ಮತ್ತು ಸ್ವಲ್ಪ ದಿನದಲ್ಲೇ ಅಲ್ಲಿ ಯಾವ ದೆವ್ವವೂ ಇಲ್ಲವೆಂದು ಧೈರ್ಯಗೊಂಡು ಹಗಲು ರಾತ್ರಿ ಎನ್ನದೆ ಅಲ್ಲಿ ಹೋಗಿಬರಲು ಮೊದಲು ಮಾಡಿದರು. ದೆವ್ವದ ಮನೆಯು ಹುಡುಗರ ಮಂದಿರವಾಯಿತು. ದೊಡ್ಡದಾಗಿದ್ದ ನಡುಮನೆಯನ್ನು ಸಾರಿಸಿ ಚೊಕ್ಕಟವಾಗಿಟ್ಟುಕೊಂಡು ಅಲ್ಲಿ ಕೂರುವರು, ಮಲಗುವರು, ಕಬ್ಬು ತಿನ್ನುವರು, ಎಳನೀರು ಕುಡಿಯುವರು, ಬಾಳೇಹಣ್ಣಿನ ಗೊನೆಗೊನೆಗಳನ್ನು ತಿಂದು ಮುಗಿಸುವರು. ಆದರೆ ಆ ವಿಚಾರ ಊರಿನಲ್ಲಿ ದೊಡ್ಡವರಿಗೆ ಯಾರಿಗೂ ತಿಳಿಯದಂತೆ ಬಹಳ ಎಚ್ಚರವಾಗಿದ್ದರು.

ಹೀಗಿರಬೇಕಾದರೆ ಒಂದು ದಿನ ರಾತ್ರಿ, ಊಟದ ಹೊತ್ತಿಗಿಂತ ಮೊದಲು, ಸೀತಾರಾಮು ದೆವ್ವದ ಮನೆಗೆ ಬಂದಿದ್ದವನು ಮನೆಗೆ ಹೋಗಲು ಹೊರಟು ಮನೆಯ ಮುಂದಿನ ತುಳಸೀಕಟ್ಟೆಯ ಹತ್ತಿರಕ್ಕೆ ಬಂದಿದ್ದನು. ಆಗ, ಮಸುಕುಮಸುಕಾದ ಬೆಳದಿಂಗಳಲ್ಲಿ ಯಾರೋ ಹೆಂಗಸರು ದೆವ್ವದ ಮನೆಯ ಕಡೆ ಬರುತ್ತಿದ್ದುದನ್ನು ನೋಡಿ ತುಳಸೀಕಟ್ಟೆಯ ಮರೆಯಲ್ಲಿ ಅಡಗಿ ಕುಳಿತುಕೊಂಡನು. ಬಂದವರು ಒಬ್ಬ ವೃದ್ಧ ಸುಮಂಗಲೆ. ಸಿಪ್ಪೆ ಸುಲಿಯದ ಒಂದು ದೊಡ್ಡ ಅಡಕೆಯ ಹಾಳೆಯಲ್ಲಿ ಮೊಸರನ್ನ, ಹುಳಿಯನ್ನ, ಬಾಳೇಹಣ್ಣಿನ ಚಿಪ್ಪು, ಕಡಲೇಬೇಳೆ ಹೆಸರುಬೇಳೆ ಕೋಸುಂಬರಿಗಳು, ನಿಂಬೇಹಣ್ಣಿನ ಪಾನಕ, ನೀರುಮಜ್ಜಿಗೆ, ನಿಂಬೇಕಾಯಿ ಉಪ್ಪಿನಕಾಯಿ ಮೊದಲಾದುವನ್ನು ಇಟ್ಟುಕೊಂಡು ದೆವ್ವಕ್ಕೆ ಹಾಕಲೆಂದು ತಂದಿದ್ದರು. ಅವರು ವೃಂದಾವನದ ಹತ್ತಿರಕ್ಕೆ ಬಂದು, ತುಳಸೀಕಟ್ಟೆಯ ಪಕ್ಕದಲ್ಲಿದ್ದ ಒಂದು ಹಾಸುಗಲ್ಲಿನ ಮೇಲೆ ಅದನ್ನು ಇಟ್ಟು, ಗಾಳಿಯೊಡನೆ ಮಾತಾಡುವವರಂತೆ "ನಿನಗೆ ಬೇಕಾದುದನ್ನೆಲ್ಲ ತಂದಿಟ್ಟಿದೇನೆ. ತಿಂದುಕೊಂಡು ಮತ್ತೆ ನಮ್ಮ ತಂಟೆಗೆ ಬರದಂತೆ ಹೋಗು. ಇನ್ನು ಸುಮ್ಮನೆ ಕಾಡಬೇಡ. ನಿನಗೆ ಯಾವು ದಕ್ಕೂ ಕಡಿಮೆ ಮಾಡಿಲ್ಲ" ಎಂದು ಹೇಳಿ, ನಾಲ್ಕುಹೆಜ್ಜೆ ಹೋಗುವುದ

ರೊಳಗೆ ಏನೋ ಸಪ್ಪಳವೆಂದು ಶಬ್ದವಾದಂತಾಗಿ ತಿರುಗಿ ನೋಡುತ್ತಾರೆ, ಅಡಕೆಯ ಹಾಳೆ ಸಮೇತ ಎಲ್ಲವೂ ಮಾಯವಾಗಿದೆ! ಅವರಿಗೆ ದೆವ್ವವನ್ನೇ ನೋಡಿದಷ್ಟು ದಿಗಿಲಾಗಿ ಭಯದಿಂದ ನಡುಗುತ್ತ ಅಂತೂ ಇಂತೂ ಹೇಗೋ ಮನೆಗೆ ಹೋಗಿ ಬಿದ್ದರು. ಅವರು ತಂದಿಟ್ಟ ಅನ್ನದ ಹಾಳೆಯನ್ನು ಎಳೆದು ಕೊಂಡವನು ಸೀತಾರಾಮುವೆಂದು ಮತ್ತೆ ಹೇಳಬೇಕಾದುದೇ ಇಲ್ಲ.

ಅಂದು ಮಧ್ಯಾಹ್ನದಿಂದ ಸಿಕ್ಕಿದ ಕಡೆಯಲ್ಲೆಲ್ಲಾ ಅಲೆದಲೆದು ಸೀತಾ ರಾಮುವಿಗೆ ಬಹಳ ಹಸಿವಾಗಿತ್ತು. ಅದರಿಂದ ಹುಳಿಯನ್ನ, ಮೊಸರನ್ನ, ಬಾಳೆಹಣ್ಣು, ಕೋಸುಂಬರಿ, ಪಾನಕಗಳನ್ನು ನೋಡಿ ಅವನಿಗೆ ತುಂಬಾ ಸಂತೋಷವಾಯಿತು. ದೆವ್ವಕ್ಕೆ ಹಾಕಿದ ಅನ್ನ, ತಿಂದರೆ ಏನಾಗುವುದೋ? ಎಂದು ಒಂದು ಕ್ಷಣ ಯೋಚಿಸಿದನು. ಮರುಕ್ಷಣದಲ್ಲೇ ದೆವ್ವ ಇರುವುದೇ ಸುಳ್ಳು ಎಂದ ಮೇಲೆ ಅದನ್ನು ತಿನ್ನುವುದರಲ್ಲಿ ಏನೂ ತೊಂದರೆ ಇಲ್ಲವೆಂದು ತೀರ್ಮಾನಿಸಿ ತುಳಸೀಕಟ್ಟೆಯ ಹತ್ತಿರ ಪಾನಕ ನೀರುಮಜ್ಜಿಗೆ ಕುಡಿದು ಅನ್ನದ ಹಾಳೆಯೊಡನೆ ದೆವ್ವದ ಮನೆಯನ್ನು ಹೊಕ್ಕನು. ಮತ್ತು, ಅಲ್ಲಿ ಮುರಿದ ಚಾವಣಿಯಿಂದ ಒಳಕ್ಕೆ ಬೀಳುತ್ತಿದ್ದ ಮಸುಕು ಮಸುಕಾದ ಬೆಳ ದಿಂಗಳಲ್ಲಿ ಕುಳಿತು ಅನ್ನ ತಿನ್ನಲು ತೊಡಗಿದನು.

ಆಗ ರಾಮಚಂದ್ರನು ಇಬ್ಬರು ಹುಡುಗರೊಡನೆ ಒಂದು ಕಬ್ಬಿನ ಜೊರೆ ತೆಗೆದುಕೊಂಡು ಬಂದನು. ಜೊರೆಯನ್ನು ಒಂದು ಕಡೆ ಇಟ್ಟು ಸೀತಾ ರಾಮುವು ಕುಳಿತಿರುವುದನ್ನು ಆಕಾರದಿಂದ ಗಮನಿಸಿ, "ಸೀತಾರಾಮು" ಎಂದು ಕೂಗಿದನು.

ಸೀತಾರಾಮು "ಆ" ಎಂದನು. ಧ್ವನಿಯಿಂದ ಬಾಯಿಯಲ್ಲಿ ಏನೋ ತುಂಬಿರುವುದೆಂಬುದನ್ನು ತಿಳಿದು 'ಅದೇನೋ ತಿನ್ನೋದು?' ಎಂದು ಕೇಳುತ್ತ ಹುಡುಗರು ಸೀತಾರಾಮು ಕುಳಿತಿದ್ದ ಕಡೆಗೆ ಓಡಿಹೋದರು.

ನಿರ್ವಾಹವಿಲ್ಲದೆ, ಸೀತಾರಾಮುವು ಹುಳಿಯನ್ನ ಮೊಸರನ್ನದಲ್ಲಿ ಅವ ರಿಗೂ ಪಾಲು ಕೊಡಬೇಕಾಯಿತು. ಎಲೆಯ ಸುತ್ತ ನಾಲ್ಕು ಹುಡುಗರೂ ಕುಳಿತು ಅನ್ನ ತಿನ್ನುತ್ತಿದ್ದರು.

ಒಂದು ಅಗುಳೂ ಇಲ್ಲದಂತೆ ತಿಂದು ಎಲೆಯಲ್ಲಿ ಚಿಕ್ಕಾಸ್ತು ಉಳಿಯದಂತೆ

ಮಾಡಿದಮೇಲೆ ಬಾಯಿ ಚಪ್ಪರಿಸುತ್ತ "ಒಳ್ಳೇ ರುಚಿಯಾಗಿದೆಯೋ, ಯಾರ ಮನೆಯದೋ ?" ಎಂದನು ರಾಮಚಂದ್ರ.

"ಇದು ದೆವ್ವಕ್ಕೆ ಹಾಕಿದ ಅನ್ನ ಕಣೋ. ಎಂಕಜ್ಜಿ ತುಳಸೀಕಟ್ಟೆಯ ಹತ್ತಿರ ತಂದಿಟ್ಟು 'ಇನ್ನು ಕಾಡಬೇಡ, ತಿಂದುಕೊಂಡು ಹೋಗು' ಎಂದರು. ಅವರು ಇಟ್ಟರೋ ಇಲ್ಲವೋ ನಾನು ಅವರಿಗೆ ಕಾಣದಂತೆ ಎತ್ತಿಕೊಂಡು ಬಂದುಬಿಟ್ಟೆ" ಎಂದನು ಸೀತಾರಾಮು.

"ದಿನಾ ನಾಲ್ಕೈದು ಮನೆಗಳಲ್ಲಾದರೂ ದೆವ್ವಕ್ಕೆ ಅನ್ನ ಹಾಕಬೇಕಪ್ಪ. ಇಲ್ಲದಿದ್ದರೆ ಸುಖವಿಲ್ಲ" ಎಂದನು ರಾಮಚಂದ್ರ.

"ನಮಗೆ ಇಷ್ಟು ರುಚಿಯಾಗಿ ಒಂದುದಿನವಾದರೂ ಮನೆಯಲ್ಲಿ ಮಾಡಿ ಇಕ್ಕುವುದಿಲ್ಲ. ಇಲ್ಲದ ದೆವ್ವಕ್ಕೆ ಎಷ್ಟು ಉಪಚಾರ!" ಎಂದನು ಒಬ್ಬ ಹುಡುಗ.

ದೆವ್ವಕ್ಕೆಂದು ಹಾಕಿದ ಅನ್ನ ತಿಂದಮೇಲೆ ಹುಡುಗರು ಮನೆ ಮನೆಯಲ್ಲೂ ತಮ್ಮ ತಾಯಿಯರೊಂದಿಗೆ ದೆವ್ವದ ಮನೆ, ದೆವ್ವ—ಇವುಗಳ ವಿಚಾರವಾಗಿ ಹೆಚ್ಚು ಮಾತಾಡಲು ಮೊದಲುಮಾಡಿದರು. ತಾಯಿಯರೂ ದೆವ್ವದ ವಿಚಾರವಾಗಿ ಎಷ್ಟೋ ಕತೆಗಳನ್ನು ಹೇಳುವರು. ಹುಡುಗರು ಅವನ್ನೆಲ್ಲ ನಂಬಿದವರಂತೆಯೂ ದಿಗಿಲು ಬಿದ್ದವರಂತೆಯೂ ನಟಿಸುವರು. ಪ್ರತಿದಿನವೂ ಮೂರು ನಾಲ್ಕು ಮನೆಗಳ ಹುಡುಗರು ದೆವ್ವದ ಮನೆಯ ಹತ್ತಿರ ಹೆದರಿ ಹಾಸಿಗೆ ಹಿಡಿಯುವರು! ದೆವ್ವದ ಮನೆಯ ಮುಂದಿನ ತುಳಸೀಕಟ್ಟೆಯ ಹತ್ತಿರ ಅನ್ನ ಹಾಕಿದ ಮಾರನೇ ದಿನವೇ ರೋಗ ಗುಣವಾಗಿ ಬಿಡುತ್ತಿತ್ತು! ಅಂತೂ ದಿನಕ್ಕೆ ಎರಡು ಮೂರು ಮನೆಗಳಿಂದಾದರೂ ದೆವ್ವದ ಮನೆಗೆ ಅನ್ನ ತಪ್ಪದೆ ಬರುವಂತಾಯಿತು.

ಇಷ್ಟೇ ಅಲ್ಲದೆ, ಆಗಾಗ, ಮಟ ಮಟ ಮಧ್ಯಾಹ್ನದಲ್ಲಿ, ಮಬ್ಬು ಸಂಜೆಯಲ್ಲಿ ದೆವ್ವದ ಮನೆಯಲ್ಲಿ ಏನೇನೋ ಸದ್ದುಗಳನ್ನು, ಒಮ್ಮೊಮ್ಮೆ ನಗುವನ್ನೂ ಕಳಸಾಪುರದ ದೊಡ್ಡವರೂ ಕೇಳಿದಂತೆ ಭಾವಿಸುವರು. ಒಂದೊಂದು ರಾತ್ರಿ ಸ್ವಲ್ಪ ಹೊತ್ತಾದಮೇಲೆ, ಕೆಲವರು ದೆವ್ವದ ಮನೆಯಲ್ಲಿ ಬೆಳಕನ್ನೂ ಕಾಣುವರು. ದೆವ್ವದ ಮನೆಯಲ್ಲಿ ಊರಿನ ದೆವ್ವಗಳೆಲ್ಲಾ ಬಂದು ವಾಸಿಸುತ್ತಿರುವುವೆಂದು ಜನರು ಭಾವಿಸಿದರು. "ಅನ್ನ" ದೆವ್ವದ ಮನೆಗೆ ಬರುವುದು ಹೆಚ್ಚುತ್ತಿತ್ತು. ಸಂಜೆಗೆ ಮೊದಲೇ ಯಾರ ಯಾರ ಮನೆಗಳಿಂದ "ಅನ್ನ"

ಬರುವುದೆಂಬುದನ್ನು ಹುಡುಗರು ತಿಳಿದು ಅದನ್ನು ಸಾಗಿಸಲು ಸಿದ್ಧರಾಗಿರುತ್ತಿದ್ದರು.

ದಿನ ಕಳೆದಂತೆ ಕಳಸಾಪುರದಲ್ಲಿ ದೆವ್ವಗಳ ಗಲಾಟೆ ಅಸಾಧ್ಯವಾಯಿತು. ಮನೆಮನೆಯಲ್ಲೂ, ಅಗಾಗ್ಗೆ, ಅಡುಗೆ ಮನೆಯಲ್ಲಿ, ಅಟ್ಟದ ಮೇಲೆ ಯಾರೋ ನಡೆದಾಡಿದಂತಾಗುವುದು; ಮುಚ್ಚಿ ಇಟ್ಟಿದ್ದ ಕಡೆಯಲ್ಲೇ ಅಡುಗೆಯ ಸಾಮಾನುಗಳು ಕಡಿಮೆಯಾಗುವುದು; ಇದ್ದಕಿದ್ದಹಾಗೇ ಪಾತ್ರೆಗಳು ಒಂದೆರಡು ದಿನ ಕಾಣದೇ ಹೋಗುವುದು; ಸಾಧುವಾದ ಎಮ್ಮೆ ಹಸುಗಳ ಕೆಚ್ಚಲಲ್ಲಿ ಹಾಲೇ ಇಲ್ಲದಂತಾಗುವುದು—ಹೀಗೆಲ್ಲಾ ಆಗುತ್ತಿತ್ತು. ಇವಕ್ಕೆಲ್ಲ ದೆವ್ವಗಳೇ ಕಾರಣವೆಂದು ಎಲ್ಲರೂ ಯೋಚಿಸುವರು. ಮಂತ್ರವಾದಿಗಳಿಂದ ಏನೇನೋ ಕಟ್ಟುಕಟ್ಟಳೆ ಮಾಡಿಸುವರು. ಆದರೂ ದೆವ್ವಗಳ ಕಾಟ ಸ್ವಲ್ಪಮಾತ್ರ ಕಡಿಮೆಯಾಗುವ ಸೂಚನೆ ತೋರಲಿಲ್ಲ

ಹೀಗಿರಬೇಕಾದರೆ, ಒಂದು ಕೃಷ್ಣಪಕ್ಷದ ರಾತ್ರಿ, ಸುಮಾರು ಊಟ ಮಾಡುವ ಹೊತ್ತಿನಲ್ಲಿ ದಫೇದಾರ್ ಶಾಮಣ್ಣನವರು ಹೆಗಲಮೇಲೆ ತಮ್ಮ ಮುರಿದ ಬಂದೂಕವನ್ನಿಟ್ಟುಕೊಂಡು ದೆವ್ವದ ಮನೆಯ ಹತ್ತಿರ ಅಡ್ಡಾಡುತ್ತಿದ್ದರು. ಮೇಯಲು ಹೋಗಿದ್ದ ತುಂಬುಗಬ್ಬದ ಹಸು ಮನೆಗೆ ಬಂದಿರಲಿಲ್ಲ. ಅದನ್ನು ಹುಡುಕಿಕೊಂಡು ಅವರು ಅಲ್ಲಿಗೆ ಬಂದಿದ್ದರು. ಆಗ ಸ್ವಲ್ಪ ದೂರದಲ್ಲಿ ಏನೋ ಸದ್ದಾಗಲು ಹಸುವಿರಬಹುದೆಂದು ಸದ್ದುಬಂದ ಕಡೆ ಹೋಗಿ ನೋಡುತ್ತಾರೆ, ಎಂಟು ಹತ್ತು ಹುಡುಗರು ಮುರಿದಿದ್ದ ಗೋಡೆಯನ್ನು ಹತ್ತಿ ಮನೆಯೊಳಗೆ ಇಳಿಯುತ್ತಿದಾರೆ! ಅಸ್ಪಷ್ಟವಾಗಿ ಇದನ್ನು ನೋಡಿ ಅವರಿಗೆ ಬಹಳ ಆಶ್ಚರ್ಯವಾಯಿತು. ಅವರು ಯಾರು? ಏನು ಮಾಡುತ್ತಿದಾರೆ? ಎಂಬುದನ್ನು ತಿಳಿಯಬೇಕೆಂದು ಹತ್ತಿರ ಒಂದು ಕಡೆ ಅಡಿತುಕೊಂಡರು. ಕತ್ತಲೆಯಲ್ಲಿ ಆ ಹುಡುಗರು ಬಹಳ ಹೊತ್ತು ಮಾತಾಡಿಕೊಂಡರು. ಧ್ವನಿಯಿಂದ ಸೀತಾರಾಮು ರಾಮಚಂದ್ರ ಕಾಳ ಅಯ್ಯ ಮುಂತಾದ ಹುಡುಗರು ಅಲ್ಲಿರುವರೆಂದು ಶಾಮಣ್ಣನವರು ಗುರುತಿಸಿದರು.

ಮಾರನೆಯ ದಿನ ಹುಡುಗರ ಪೈಕಿ ಯಾರು "ದೆವ್ವಕ್ಕೆ ಹೆದರಿ" ಖಾಯಿಲೆ ಮಲಗಬೇಕೆಂದು ಅವರು ಮಾತಾಡುತ್ತಿದ್ದರು. ಮತ್ತು ತಮ್ಮ

ಉಪಾಯವು ಎಷ್ಟು ಜಯಪ್ರದವಾಗಿ ನಡೆಯುತ್ತಿದೆ ಎಂಬುದನ್ನು ಕುರಿತೂ ಒಬ್ಬರಿಗೊಬ್ಬರು ಹೇಳಿಕೊಂಡು ನಕ್ಕರು. ಶಾಮಣ್ಣನವರು ಎಲ್ಲ ಮಾತುಗಳನ್ನೂ ಕೇಳಿದರು. "ಎಲಾ ಹುಡುಗರಾ, ಬೆಳಗಾಗಲಿ" ಎಂದುಕೊಂಡು ಹೋದರು. ಮಾರನೆಯ ಬೆಳಿಗ್ಗೆ ಹುಡುಗರು ತೋಟಕ್ಕೆ ಹೋಗಿ ಬರುವುದರಲ್ಲಿ ದೆವ್ವದ ಮನೆಯ ಗುಟ್ಟು ಕಳಸಾಪುರದಲ್ಲೆಲ್ಲಾ ರಟ್ಟಾಗಿಹೋಗಿತ್ತು. ಏಟಿನ ಹೆದರಿಕೆಯನ್ನು ತೋರಿಸಲು ಹುಡುಗರೂ ನಿಜವನ್ನು ಹೇಳಿಬಿಟ್ಟರು. ಆಗ, ಅರ್ಧರಾತ್ರಿಯಲ್ಲಿ ಅಟ್ಟಿಅಡುಗೆ ಮನೆಗಳಲ್ಲಿ ಜನ ಓಡಾಡಿದಂತಾಗುತ್ತಿದ್ದುದಕ್ಕೂ, ಪಾತ್ರೆಗಳು ಒಂದೆರಡು ದಿನ ಮಾಯವಾಗುತ್ತಿದ್ದುದಕ್ಕೂ ಮನೆಯ ದೆವ್ವಗಳಲ್ಲದೆ ಬೇರೆ ಯಾವ ದೆವ್ವಗಳೂ ಬರುತ್ತಿರಲಿಲ್ಲವೆಂಬುದನ್ನು ಎಲ್ಲರೂ ಅರಿತರು. 'ಅನ್ನದ' ವಿಚಾರವನ್ನು ಕೇಳಿ ಜನ ಬಿದ್ದುಬಿದ್ದು ನಕ್ಕರು. ಕೆಲವರು 'ಹುಡುಗರ ಧೈರ್ಯವೇ ಧೈರ್ಯ' ಎಂದರು. ಹೆಂಗಸರು 'ಹೆದರಿ ಏನಾದರೂ ಆಗಿದ್ದರೆ ಏನು ಮಾಡಬೇಕಿತ್ತು?' ಎಂದು ಮಕ್ಕಳನ್ನು ಬೈದು ಕರಿಯಮ್ಮನಿಗೆ ಮೊಸರನ್ನ ತುಪ್ಪದ ದೀಪದ ಹರಕೆಗಳನ್ನು ಮಾಡಿಕೊಂಡರು.

ಒಂದೆರಡು ದಿನಗಳ ಮೇಲೆ, ಒಂದು ಸಂಜೆ, ತೋಟದ ದಾರಿಯಲ್ಲಿ ಶಾನುಭೋಗ್ ತಿಮ್ಮಪ್ಪಯ್ಯನವರು ರಾಮಚಂದ್ರ ಸೀತಾರಾಮು ಮೊದಲಾದ ಹುಡುಗರನ್ನು ಸಂಧಿಸಿ "ಆ ದೆವ್ವದ ಮನೆಯಲ್ಲಿರಲು ನಿಮಗೆ ಹೆದರಿಕೆಯಾಗಲಿಲ್ಲವೇನಿರೋ?" ಎಂದು ಕೇಳಿದರು.

"ದೆವ್ವ ಅನ್ನೋದು ಇದ್ದರೆ ತಾನೆ ಹೆದರಬೇಕಾದದ್ದು? ದೆವ್ವ ಇಲ್ಲವೂ ಇಲ್ಲ; ನಮಗೆ ಹೆದರಿಕೆಯೂ ಆಗಲಿಲ್ಲ" ಎಂದನು ರಾಮಚಂದ್ರ.

"ದೆವ್ವ ಇಲ್ಲ ಅಂತ ಹೇಗೆ ಗೊತ್ತುಮಾಡಿದೆ?" ಎಂದರು ತಿಮ್ಮಪ್ಪಯ್ಯನವರು.

"ಎಲ್ಲ ಕಡೆಯೂ ದೇವರು ಇದಾನೋ ಇಲ್ಲವೊ?" ಎಂದು ಕೇಳಿದ ಸೀತಾರಾಮು. ಇರುವನೆಂದು ತಿಮ್ಮಪ್ಪಯ್ಯನವರು ತಲೆಯಾಡಿಸಿದರು.

"ದೇವರು ಎಲ್ಲ ಕಡೆಯೂ ಇದ್ದಮೇಲೆ ಆ ಮನೇಲೂ ಇದಾನೆ. ದೇವರಿದ್ದ ಕಡೆ ದೆವ್ವ ಇರೋಕೆ ಹೇಗೆ ಸಾಧ್ಯ? ಅದರಿಂದ ದೆವ್ವ ಇಲ್ಲಾಂತ

ಗೊತ್ತುಮಾಡಿದೆವು" ಎಂದನು ರಾಮಚಂದ್ರ.

"ನೀವು ಹೇಳೋದು ನಿಜ. ಆದರೂ ಹಾವು ಹಲ್ಲೀ ಇದ್ದೀತು, ಕತ್ತಲೆಯಲ್ಲಿ ಅಲ್ಲೆಲ್ಲ ಹೋಗಬಾರದು, ಅಷ್ಟೆ" ಎಂದರು ತಿಮ್ಮಪ್ಪಯ್ಯನವರು. ಅವರು ಎಷ್ಟೋ ವೇಳೆ ಬೆಳವಾಡಿ ಚಾವಗಲ್‌ಗಳಲ್ಲಿ ದೇವರ ವಿಚಾರ ಚರ್ಚೆಗೆ ಬಂದಾಗ ನಂಬಿಕೆಯೇ ಮುಖ್ಯವೆಂದು ದೇವರನ್ನು ನಂಬಿ ದೆವ್ವದ ಮನೆಯಲ್ಲಿ ಸುರಕ್ಷಿತವಾಗಿದ್ದ ಈ ಹುಡುಗರ ಉದಾಹರಣೆಯನ್ನು ಹೇಳುತ್ತಿದ್ದರು.

ಅಂತೂ, ದೆವ್ವದ ಮನೆಯು ಗುಟ್ಟು ರಟ್ಟಾದ ಮೇಲೆ ಕಳಸಾಪುರದಲ್ಲಿ ದೆವ್ವಗಳ ಹಾವಳಿ ಬಲುಪಾಲು ಕಡಿಮೆಯಾಯಿತು. ದೆವ್ವದಮನೆಗೆ ಹೋಗುವುದನ್ನು ಹುಡುಗರೂ ಕಡಿಮೆ ಮಾಡಿದರು. ಏಕೆಂದರೆ, ಹುಡುಗರನ್ನು ಹುಡುಕಿಕೊಂಡು ದೊಡ್ಡವರು ಅಲ್ಲಿಗೇ ಬರುವುದು ಹೆಚ್ಚಾಯಿತು.

## — ಜೇನು ಅಳಿಸಿದುದು —

ರಂಗನಗಿರಿಯ ಉತ್ತರದಲ್ಲಿ 'ನಾಲಿಗೆಕಲ್ಲು' ಎಂಬುದೊಂದು ದೊಡ್ಡ ಬಂಡೆಯಿದೆ. ಅದು ಗುಡ್ಡದಿಂದ ನಾಲಿಗೆಯಂತೆ ಮುಂದಕ್ಕೆ ಚಾಚಿಕೊಂಡಿರುವುದರಿಂದ ಅದಕ್ಕೆ ಆ ಹೆಸರು ಬಂದಿದೆ. ಆ ನಾಲಿಗೆಕಲ್ಲಿನ ಕೆಳಗೆ ಒಂದು ದೊಡ್ಡ ಡೊಗರು ಇದ್ದು ಮಳೆಗಾಳಿಯ ತೊಂದರೆಯಿಲ್ಲದುದರಿಂದ ಅಲ್ಲಿ ಬೇಕಾದಷ್ಟು ಜೇನು ಗೂಡು ಕಟ್ಟಿಕೊಂಡಿರುತ್ತವೆ. ಡೊಗರಿನ ಸುತ್ತ ಬಂಡೆಗಳು ಬಹಳ ಕಡಿದಾಗಿರುವುದರಿಂದಲೂ ಮೇಲೆ ನಾಲಿಗೆಕಲ್ಲು ಚಾಚಿಕೊಂಡಿರುವುದರಿಂದಲೂ ಆ ಜೇನುಗಳನ್ನು ಅಳಿಸಿ ತುಪ್ಪ ತೆಗೆಯುವುದು ಬಹಳ ಕಷ್ಟವಾಗುತ್ತಿತ್ತು. ಜೊತೆಗೆ ಅವೆಲ್ಲ ಹೆಜ್ಜೇನುಗಳು. 'ಜೇನಿನ ಸೊಪ್ಪನ್ನು' ನೋಡಿದ್ದ ಕೆಲವು ರೈತರು ಮಾತ್ರ ವರ್ಷಕ್ಕೊಮ್ಮೆಯೋ ಆರು ತಿಂಗಳಿಗೊಮ್ಮೆಯೋ ಹೋಗಿ ಬಹಳ ಶ್ರಮಪಟ್ಟು ಅಲ್ಲಿಂದ ಜೇನುತುಪ್ಪ ತರುತ್ತಿದ್ದರು.

ಕಳಸಾಪುರದ ಹುಡುಗರು ಮನಸ್ಸು ತೃಪ್ತಿಯಾಗುವಂತೆ ಜೇನು ತಿನ್ನಬೇಕೆಂದು ಯೋಚಿಸಿ, ಒಂದು ಬೆಳದಿಂಗಳ ರಾತ್ರಿ ಜೇನು ಅಳಿಸಬೇಕೆಂದು

ನಿರ್ಧರಿಸಿದರು.

ನಾಲ್ಕು ದಿನ ಮುಂಚಿತವಾಗಿ ಅದಕ್ಕೆ ಬೇಕಾದ ಸಲಕರಣೆಗಳನ್ನೆಲ್ಲ ಸಿದ್ಧಮಾಡತೊಡಗಿದರು. ತೋಟಗಳಲ್ಲೆಲ್ಲ ಹುಡುಕಿ ನಾಲ್ಕು ರಸಬಾಳೆ ಗೊನೆಗಳನ್ನು ತಂದು ಹಣ್ಣುಮಾಡಿದರು. ಸೀಬೆ, ಮಾವಲ ಮೊದಲಾದ ಹಣ್ಣುಗಳನ್ನು ಬೇಕಾದಷ್ಟು ಕೂಡಿಸಿದರು. ಜೇನುತುಪ್ಪವನ್ನು ತುಂಬಲು ದೊಡ್ಡದೊಡ್ಡ ಅಡಕೆಯ ಹಾಳೆಗಳಿಂದ ಐದಾರು ದೊಡ್ಡದೊಡ್ಡ ದೊನೆಗಳನ್ನು ಹೊಲಿದರು.

ಹೆಜ್ಜೇನು ಅಳಿಸುವ ಕೈತರ ಪೈಕಿ ಅಪ್ಪುರುಡ ಎನ್ನುವವನೊಬ್ಬನಿದ್ದ. ಅವನಿಗೆ ಸುಮಾರು ಇಪ್ಪತ್ತುನಾಲ್ಕು ವರ್ಷ ವಯಸ್ಸು. ಅವನನ್ನು ಬಂದು ಜೇನು ಅಳಿಸಿಕೊಡಬೇಕೆಂದು ಸೀತಾರಾಮು ಮುಂತಾದ ಹುಡುಗರು ಕೇಳಿದರು. ಅವನು ಒಪ್ಪಿಕೊಂಡನು.

"ಒಂದು ಸೇದುವ ಹಗ್ಗ ಮತ್ತು ಒಂದು ಮಂಕರಿ ಬೇಕು" ಎಂದನು ಅಪ್ಪುರುಡ. ಹುಡುಗರು ತರುವುದಾಗಿ ಒಪ್ಪಿದರು. ಮತ್ತು ಜೇನು ಅಳಿಸಲು ಒಂದು ದಿನವನ್ನು ಗೊತ್ತುಮಾಡಿ ಆ ದಿನ ಸಂಜೆಗೇ ಹೊರಟು ಬೇಗ ಮನೆಗೆ ಬಂದು ಬಿಡಬೇಕೆಂದು ಅವರು ನಿರ್ಧರಿಸಿದರು.

ಗೊತ್ತಾದ ದಿನ ಹುಡುಗರೆಲ್ಲಾ ಸಿದ್ಧರಾಗಿ ನಾಲಿಗೇಕಲ್ಲಿಗೆ ಹೋಗುವ ಹೊತ್ತಿಗೆ ಆಗಲೇ ಸಂಜೆ ಮೀರಿಹೋಗಿತ್ತು. ಚೆನ್ನಾಗಿ ಬೆಳದಿಂಗಳು ಇದ್ದುದರಿಂದ ಅವರಿಗೆಲ್ಲ ತುಂಬಾ ಆನಂದವಾಗಿತ್ತು. ಕೂಗುತ್ತ ಕೆನೆಯುತ ಹಾರುತ್ತ ಕುಣಿಯುತ್ತ ಅವರು ಗುಡ್ಡವನ್ನು ಹತ್ತಿದರು. ಹತ್ತಿ, ನಾಲಿಗೇಕಲ್ಲಿನ ಮೇಲೆ ಕುಳಿತು, ಊರಿನಿಂದ ತಂದಿದ್ದ ಕೊಳ್ಳಿಯಿಂದ ತರಗು ಪುಳ್ಳೆಗಳನ್ನು ಹಾಕಿ ಚೆನ್ನಾಗಿ ಬೆಂಕಿ ಮಾಡಿದರು. ಅದರ ಸುತ್ತಲೂ ಕೆಲವು ಹುಡುಗರು ಕುಳಿತು ಹಲಸಿನ ತೊಳೆಯನ್ನು ಬಿಡಿಸಲೂ, ಬಾಳೇಹಣ್ಣನ್ನು ಸುಲಿಯಲೂ, ಮಾವಲ, ಸೀಬೆ ಮೊದಲಾದ ಹಣ್ಣುಗಳನ್ನು ಹೆಚ್ಚಲೂ ತೊಡಗಿದರು. ರಾಮಚಂದ್ರ ಸೀತಾರಾಮು ಕಾಳ ಅಯ್ಯ ಮುಂತಾದ ಐದಾರು ಜನ ಸ್ವಲ್ಪ ಬಲವಾಗಿದ್ದ ಹುಡುಗರು ಜೇನು ಅಳಿಸುವುದಕ್ಕೆ

ಅಪ್ಪುರುಡನಿಗೆ ಸಹಾಯಕರಾಗಿ ನಾಲಿಗೇಕಲ್ಲಿನ ಮೇಲೆ ಜೇನು ಇದ್ದ ಕಡೆ ಹೋಗಿ ಕುಳಿತರು.

"ಒಂದು ತಮಾಷೆ ತಂದಿದೇನೆ" ಎಂದನು ಅಯ್ಯ.

"ಏನದು ?" ಎಂದರು ಪಕ್ಕದ ಹುಡುಗರು.

"ಕುಂಪಣಿ ಕಸ್ತೂರಿ" ಎಂದನು ಸೀತಾರಾಮು.

"ಎಲ್ಲಿ, ನೋಡೋಣ ?" ಎಂದನು ರಾಮುಚಂದ್ರ.

ಸೀತಾರಾಮು ಒಂದು ವೀಳೆಯದೆಲೆ ಪೊಟ್ಟಣದಿಂದ ಒಂದು ಗಜ್ಜುಗದ ದಪ್ಪ ಮದ್ದು ನಶ್ಯವನ್ನೂ ಸುಣ್ಣವನ್ನೂ ಪಂಚೆಯ ಸೆರಗಿನಿಂದ ಬಿಚ್ಚಿ ತೋರಿಸಿದನು. ಮತ್ತು ಅರ್ಧಕ್ಕೆ ಸುಣ್ಣವನ್ನು ಹಾಕಿ ನಶ್ಯವನ್ನು ತಿಕ್ಕಿ ಪುಡಿಮಾಡಿ ಎಲ್ಲರಿಗೂ ಒಂದೊಂದು ಚುಟಿಕೆ ಕೊಟ್ಟನು. ಅಪ್ಪುರುಡನಿಗೆ ಎರಡು ಚುಟಿಕೆ ಹೆಚ್ಚಾಗಿ ಕೊಟ್ಟನು. ಎಲ್ಲರೂ ನಶ್ಯವನ್ನು ಮೂಗಿನ ಹತ್ತಿರ ಇಟ್ಟು ಕೊಂಡು ಉಸಿರನ್ನು ಚೆನ್ನಾಗಿ ಒಳಕ್ಕೆ ಎಳೆದುಕೊಂಡರು. ನಶ್ಯವು ಮೂಗಿನೊಳಕ್ಕೆ ಹೋದುದೇ ತಡ, ಮೂಗಿನಲ್ಲಿ ಬುಳುಬುಳುಗುಟ್ಟಿ ಕಣ್ಣುಗಳಲ್ಲಿ ನೀರು ತುಂಬಿಕೊಂಡು ಅಸಾಧ್ಯ ಫಜೀತಿ ಮಾಡಿಬಿಟ್ಟಿತು. ಮತ್ತು ಎಲ್ಲರೂ ಸ್ವಲ್ಪಹೊತ್ತು ಬಿಡುವಿಲ್ಲದೆ ಸೀನುವುದಕ್ಕೆ ತೊಡಗಿದರು.

ಪಕ್ಕ ಹುಡುಗರೆಲ್ಲಾ "ಏನಿರೋ ಅದು?" ಎಂದು ಕೂಗಿಕೊಂಡರು.

"ಏನೂ ಇಲ್ಲ. ನಿಮ್ಮ ಕೆಲಸ ನೀವು ಮಾಡಿ" ಎಂದನು ರಾಮುಚಂದ್ರ, ನಶ್ಯದ ಮತ್ತು ಇಳಿದಮೇಲೆ.

"ಬಲೀ ರಾಂಗ್ ಆಗಯ್ತೆ ಸ್ವಾಮಿ, ಕುಂಪಣಿ ಕಸ್ತೂರಿ" ಎಂದನು ಅಪ್ಪುರುಡ.

ಅಪ್ಪುರಡನು ತಂದಿದ್ದ ಈಚಲು ಮಂಕರಿಗೆ ಸೇದುವ ಹಗ್ಗವನ್ನು ಬಲವಾಗಿ ಕಟ್ಟಿ, ಅಡಕೆಯ ಹಾಳೆಯ ದೊನ್ನೆಗಳನ್ನಿಟ್ಟು, ಕೊಳ್ಳಿಯನ್ನು ತೆಗೆದುಕೊಂಡು ಮಂಕರಿಯೊಳಗೆ ಕುಳಿತು, ಹಗ್ಗವನ್ನು ಎಲ್ಲರೂ ಬಲವಾಗಿ ಹಿಡಿದುಕೊಂಡು, ಸೇದುವ ಬಾವಿಗೆ ತುಂಬಿದ ಕೊಡವನ್ನು ಬಿಡುವಂತೆ ನಿಧಾನವಾಗಿ ಬಿಡಬೇಕೆಂದು ತಿಳಿಸಿದನು. ಅದರಂತೆ ಹಗ್ಗವನ್ನು ಹುಡುಗರೆಲ್ಲ ಬಿಗಿಯಾಗಿ ಹಿಡಿದುಕೊಂಡು ಅಪ್ಪುರಡನು ಕುಳಿತಿದ್ದ ಮಂಕರಿಯನು

ನಾಲಿಗೆಕಲ್ಲಿನ ಮೇಲಿನಿಂದ ಕೆಳಕ್ಕೆ ಸ್ವಲ್ಪ ಸ್ವಲ್ಪವಾಗಿ ಬಿಡುತ್ತಿದ್ದರು.

ಜೇನಿನ ಸಮೀಪಕ್ಕೆ ಬಂದಮೇಲೆ ಅಪ್ಪುರಡನು "ಹಗ್ಗ ಬಿಡುವುದು ಸಾಕು" ಎಂದು ಕೂಗಿಕೊಂಡನು. ಹುಡುಗರು ಹಗ್ಗ ಬಿಡುವುದನ್ನು ನಿಲ್ಲಿಸಿ, ಬಲವಾಗಿ ಎಳೆದು ಹಿಡಿದುಕೊಂಡು ನಿಂತರು. ಅಷ್ಟುಹೊತ್ತಿಗೆ ಮೊದಲೇ ಏರ್ಪಾಡು ಮಾಡಿದ್ದಂತೆ ನಾಲ್ಕೈದು ಕಡೆಗಳಲ್ಲಿ ನಾಲಿಗೆಕಲ್ಲಿನ ಮೇಲೆ ಬೆಂಕಿ ಹಾಕಿ ಉರಿ ಎಬ್ಬಿಸಿದ್ದರು.

ಅಪ್ಪುರುಡನು ಎರಡು ದೊಡ್ಡ ಜೇನುಗೂಡುಗಳನ್ನು ಕೆದಕಿದನು. ಜೇನುಹುಳುಗಳು ಎದ್ದು ಮೊರೆಯುತೊಡಗಿದವು. ಹುಡುಗರು ಹೆದರಿ ಭೆಂಕಿಯನ್ನು ಆಶ್ರಯಿಸಿದರು. ಗೂಡುಗಳಲ್ಲಿ ತುಪ್ಪ ಬೇಕಾದ ಹಾಗಿತ್ತು. ಅಪ್ಪುರುಡನು ತುಪ್ಪದ ಅರಿಗಳನ್ನು ಕಿತ್ತು ದೊನ್ನೆಗಳಿಗೆ ತುಂಬುತ್ತಿದ್ದನು.

ಹತ್ತು ಹದಿನೈದು ನಿಮಿಷವಾಗಿರಬಹುದು ಸೀತಾರಾಮು ರಾಮು ಚಂದ್ರು ಮೊದಲಾದ ಹುಡುಗರು ಹಗ್ಗವನ್ನು ಹಿಡಿದುಕೊಂಡು ನಿಂತು, ಆಗ ಸೀತಾರಾಮು "ಒಂದು ಚೂರು ತುಪ್ಪ ಇದ್ದರೆ ಕೊಡೋ ಅಯ್ಯ" ಎಂದನು.

ಅಯ್ಯನಿಗೂ ಇನ್ನೊಂದು ಸಲ ನಶ್ಯ ಹಾಕಿಕೊಳ್ಳಬೇಕೆಂದು ಆಸೆ. ಅದರಿಂದ ಅವನು ಹಗ್ಗ ಹಿಡಿದುದನ್ನು ಬಿಟ್ಟು ನಶ್ಯ ಪುಡಿಮಾಡಲು ಕುಳಿತನು. ಸ್ವಲ್ಪಹೊತ್ತಿನಲ್ಲೇ ನಶ್ಯವು ಸಣ್ಣಗೆ ಪುಡಿಯಾಯಿತು. ಅಯ್ಯ ಉಳಿದವರ ಮುಂದೆ ನಶ್ಯದ ಕೈ ಹಿಡಿದನು. ಎಲ್ಲರೂ ಕುಳಿತು, ಹಗ್ಗವನ್ನು ಕಾಲಿನಲ್ಲೂ ಮೆಟ್ಟಿ, ಎಡಗೈಲೂ ಹಿಡಿದುಕೊಂಡು, ಬಲಗೈಲಿ ನಶ್ಯವನ್ನು ತೆಗೆದುಕೊಂಡರು. ಅಷ್ಟುಹೊತ್ತಿಗೆ ಅಪ್ಪುರುಡನು ಎರಡು ದೊನ್ನೆಗಳನ್ನೂ ಜೇನುತುಪ್ಪದಿಂದ ತುಂಬಿ, ಹಗ್ಗವನ್ನು ಅಲ್ಲಾಡಿಸಿ, "ಮೇಲಕ್ಕೆ ಎಳೆದುಕೊಳ್ಳಿ" ಎಂದು ಕೂಗಿದನು. ಆ ಕೂಗು ಕೇಳಿದಾಗ ಹುಡುಗರು ನಶ್ಯವನ್ನು ಮೂಗಿನ ಹತ್ತಿರ ತಂದಿದ್ದರು. ಅದರಿಂದ ಅದನ್ನು ಮೇಲಕ್ಕೆ ಬಲವಾಗಿ ಎಳೆದುಕೊಂಡರು. ನಶ್ಯವು ಮೂಗಿನೊಳಕ್ಕೆ ಹೋದುದೇ ತಡ ಬುಳು ಬುಳುಗುಟ್ಟಿ ಅಸಾಧ್ಯ ಫಜೀತಿ ಮಾಡಿಬಿಟ್ಟಿತು. ಕಣ್ಣಿನಲ್ಲಿ ನೀರು ತುಂಬಿತು. ಸೀನುಗಳು ಒಂದರಮೇಲೊಂದು ಬರಲಾರಂಭಿಸಿದವು. ಈ ಅವಾಂತರದಲ್ಲಿ ಕೈಕಾಲುಗಳ ಹಿಡಿತ ಸಡಲಿ, ಹಗ್ಗ ಸರ್ರನೆ ಜಾರಿ, ಮಂಕರಿ ಸಹಿತ ಅಪ್ಪುರುಡನು ಮೂರಾಳುದ್ದ ಕೆಳಕ್ಕೆ ಬಿದ್ದುಬಿಟ್ಟನು.

"ಅಯ್ಯೋ, ಅಪ್ಪುರುಡ ಬಿದ್ದುಬಿಟ್ಟ" ಎಂದು ಕಾಳ ಭಯದಿಂದ ಗಟ್ಟಿಯಾಗಿ ಕೂಗಿಕೊಂಡನು. ಹುಡುಗರೆಲ್ಲ ದಿಕ್ಕು ತೋಚದಂತೆ ನಿಂತುಕೊಂಡರು. ಆಗ ಕೆಳಗಿನಿಂದ ಅಪ್ಪುರುಡ "ಅಯ್ಯೋ, ಅಪ್ಪ, ಅಮ್ಮ" ಎಂದು ನರಳುವ ಶಬ್ದ ಕೇಳಿಬಂದಿತು.

ಹುಡುಗರೆಲ್ಲ ಹಣ್ಣುಗಳನ್ನು ತೆಗೆದುಕೊಂಡು ಕೆಳಕ್ಕೆ ಓಡಿಬಂದು ನೋಡುತ್ತಾರೆ, ಅಪ್ಪುರುಡನು ಏಳಲಾರದೆ ನೆಲದಮೇಲೆ ಬಿದ್ದು ನರಳುತ್ತಿದಾನೆ. ಜೇನುತುಪ್ಪವೆಲ್ಲ ಚೆಲ್ಲಿಹೋಗಿದೆ.

ಅಪ್ಪುರುಡನನ್ನು ತಂದು ಅವನ ಕಂಬಳಿಯ ಮೇಲೆ ಮಲಗಿಸಿದರು ಅವನ ಎಡಗೈ ಮುರಿದುಹೋಗಿತ್ತು. ಕಾಲುಗಳಿಗೂ ಪೆಟ್ಟುಬಿದ್ದು ಗಾಯಗಳಾಗಿದ್ದವು. ತಲೆಗೆ ಕಲ್ಲು ತಗಲಿ ರಕ್ತ ಸುರಿಯುತ್ತಿತ್ತು. ತೆಂಗಿನ ಕಾಯಿ ಒಡೆದು ಅವನಿಗೆ ನೀರು ಕುಡಿಸಿ ಗಾಳಿ ಬೀಸಿದರು.

"ಅಯ್ಯೋ ಅಪ್ಪುರುಡ, ಈಗೇನು ಮಾಡೋಣ?" ಎಂದರು ಹುಡುಗರು.

"ನನ್ನ ಮನೆಗೆ ಮುಟ್ಟಿಸಿಬಿಡಿ ಸ್ವಾಮಿ" ಎಂದನು ಅಪ್ಪುರುಡ.

ಕೆಲವು ಹುಡುಗರು ನೆಲದಮೇಲೆ ಚೆಲ್ಲಿದ್ದ ಜೇನುತುಪ್ಪದ ಅರಿಗಳನ್ನು ಆರಿಸಿಕೊಂಡು ಚೀಪುತ್ತಿದ್ದರು. ಅದನ್ನು ನೋಡಿ ಅಪ್ಪುರಡನು "ಕೈಗೆ ಬಂದ ತುತ್ತು ಬಾಯಿಗೆ ಇಲ್ಲ ಅನ್ನುವಂತಾಯ್ತು. ಕೈ ಸ್ವಲ್ಪ ಗುಣವಾದ ಮೇಲೆ ಬಂದು ಜೇನು ಅಳಿಸಿಕೊಡ್ತೀನಿ" ಎಂದನು.

ಎಲ್ಲರೂ ಕುಳಿತು ತಂದಿದ್ದ ಹಣ್ಣುಗಳನ್ನೆಲ್ಲ ತಿಂದು ಮುಗಿಸಿ, ಕಂಬಳಿಯಲ್ಲಿ ಅಪ್ಪುರುಡನನ್ನು ಮನೆಗೆ ಹೊತ್ತುಕೊಂಡು ಬಂದರು. ಅವರು ಊರಿಗೆ ಬಂದಾಗ ಆಗಲೇ ಉಂಡು ಮಲಗುವ ಹೊತ್ತಾಗಿತ್ತು. ಹುಡುಗರು ಬರಲಿಲ್ಲವೆಂದು ಜನ ಕೋಲು ಹಿಡಿದುಕೊಂಡು ಹುಡುಕುತ್ತಿದ್ದರು.

ಅಪ್ಪುರುಡನನ್ನು ಅವನ ಮನೆಗೆ ಹೊತ್ತುಕೊಂಡು ಬಂದು ಇಳಿಸಿದ ಕೂಡಲೇ ಅವನ ಮುದುಕಿಯಾದ ತಾಯಿ ಹುಡುಗಿಯಾದ ಹೆಂಡತಿ ಇಬ್ಬರೂ ಅಸಾಧ್ಯ ರೀತಿಯಲ್ಲಿ ಅಳಲು ಮೊದಲುಮಾಡಿ ಊರಿನವರೆಲ್ಲ ಅಲ್ಲಿ ಬಂದು ಸೇರುವಂತೆ ಮಾಡಿದರು.

ಹುಡುಗರಿಗೆಲ್ಲ ಮನೆಗಳಲ್ಲಿ ಚೆನ್ನಾಗಿ ಏಟುಗಳು ಬಿದ್ದವು. ಅಪ್ಪರುಣನು ಹಾಸಿಗೆ ಹಿಡಿದು ಮಲಗಿದವನು ಎದ್ದು ಓಡಾಡಲು ಎರಡು ತಿಂಗಳಾಯಿತು. ಆದರೂ ಅವನ ಕೈ ಸರಿಯಾಗಲಿಲ್ಲ; ಸ್ವಲ್ಪ ಡೊಂಕಾಯಿತು.

## —ಗುರುಗಳು—

ಹುಡುಗರನ್ನು ಅಂಕೆಯಲ್ಲಿಡದಿದ್ದರೆ ಯಾರ ಪ್ರಾಣಕ್ಕಾದರೂ ಸಂಚಕಾರ ತರುವರೆಂದು ಕಳಸಾಪುರದ ಹಿರಿಯರು ಮನಗಂಡರು. ಸರಿಯಾದ ಉಪಾಧ್ಯಾಯರನ್ನು ಕರೆತಂದರೆ ಅವರು ಹುಡುಗರನ್ನು ಅಂಕೆಯಲ್ಲಿಟ್ಟುಕೊಂಡಿರುವರೆಂದೂ ಮೇಲಾಗಿ ಹುಡುಗರಿಗೆ ವಿದ್ಯೆ ಕಲಿಸುವರೆಂದೂ ಯೋಚಿಸಿದರು.

ಹುಡುಗರಿಗೆ ವಿದ್ಯೆ ಕಲಿಸುವ ಮಾತು ಬಂದಾಗ ಸಂಸ್ಕೃತವನ್ನು ಕಲಿಸಿದರೆ ಉತ್ತಮವೆಂದು ಅನೇಕರು ಅಭಿಪ್ರಾಯಪಟ್ಟರು. ಮಕ್ಕಳಿಗೆ ಕನ್ನಡವನ್ನೂ ಚೆನ್ನಾಗಿ ಹೇಳಿಕೊಡಬೇಕೆಂದೂ, ಜೈಮಿನಿಯನ್ನಾದರೂ ಓದಿ ಅರ್ಥಮಾಡಿಕೊಳ್ಳುವಂತಾದರೂ ಆಗುವುದು ಅಗತ್ಯವೆಂದೂ ಕೆಲವರು ಅಭಿಪ್ರಾಯಪಟ್ಟರು. ಕಡೆಗೆ, ಕನ್ನಡ ಸಂಸ್ಕೃತಗಳೆರಡೂ ಅಗತ್ಯವೆಂದೂ ಇಬ್ಬರು ಗುರುಗಳನ್ನು ಕರೆತರಬೇಕೆಂದೂ, ಹಾಗೆ ಮಾಡುವುದರಿಂದ ಆ ಪಟಿಂಗರ ದಂಡನ್ನು ಹತೋಟಿಗೆ ತರಲು ಸುಲಭವಾಗುವುದೆಂದೂ ನಿರ್ಧರಿಸಿದರು. ಸರಿಯಾದ ಗುರುಗಳನ್ನು ಹುಡುಕಿ ಕರೆತರುವುದಕ್ಕೆಂದೇ ಜೋಯಿಸರ ರಾಮಭಟ್ಟರೂ ಮಠದ ಸುಬೇದಾರ್ ತಮ್ಮಯ್ಯನವರ ದೊಡ್ಡ ಮಗ ಹಿರಿಯಣ್ಣನೂ ಬೇಲೂರು ಕಡೆಗೆ ಹೊರಟರು.

ತಮ್ಮನ್ನು ಅಂಕೆಯಲ್ಲಿಡಲು ಇಬ್ಬರು ಗುರುಗಳನ್ನು ಕರೆತರುವರೆಂಬುದನ್ನು ಕೇಳಿ ಹುಡುಗರಿಗೆ ಬಹಳ ಯೋಚನೆಯಾಯಿತು. ಎಂತಹವರು ಬರುವರೋ, ತಮ್ಮನ್ನು ಅವರು ಎಷ್ಟು ಹೊಡೆಯುವರೋ ಎಂದು ಅವರು ಹೆದರುತ್ತಿದ್ದರು. ಮನೆಗಳಲ್ಲೇ ತಂದೆಯರು ಬಾಯಿಪಾಠ ಹೇಳಿಕೊಡುವಾಗ, ಇಂದ್ರಾಕ್ಷಿ ಶಿವಕವಚ ಮೊದಲಾದ ಮಂತ್ರಗಳನ್ನು ಹೇಳಿಕೊಡು

ವಾಗ, ತಮ್ಮನ್ನು ಎಷ್ಟು ಹೊಡೆಯುತ್ತಿದ್ದರೆನ್ನುವ ಅನುಭವ ಆ ಹುಡುಗ ರಲ್ಲಿ ಅನೇಕರಿಗೆ ಇತ್ತು. ಏಟು ತಿಂದು ತಿಂದು ಅವರ ಮೈ ಜಡ್ಡುಗಟ್ಟಿತ್ತು.

ಗುರುಗಳನ್ನು ಹುಡುಕಿಕೊಂಡು ಜನ ಹೊರಟಾಗಿನಿಂದಲೂ ಯಾರೂ ಗುರು ಸಿಕ್ಕದಿರಲಿ ಎಂದು ದೇವರಿಗೆಲ್ಲ ಕೈ ಮುಗಿದು ಪ್ರಾರ್ಥನೆ ಮಾಡಿ ಕೊಳ್ಳುವರು. ದಿನದಿನವೂ ಎಷ್ಟೆಷ್ಟೋ ಹರಿಕೆಗಳನ್ನು ಮಾಡಿಕೊಳ್ಳುವರು. ತೆಂಗಿನಕಾಯಿಗಳನ್ನು ತಂದು ಊರು ಮುಂದಿನ ಗಣೇಶನಿಗೆ ಒಡೆಯುವರು. ಒಂದು ತಿಂಗಳಾದರೂ ಯಾವ ಗುರುವೂ ಬರದೇ ಇರಲು ತಮ್ಮ ಪ್ರಾರ್ಥನೆ ದೇವರಿಗೆ ಮುಟ್ಟಿತೆಂದೂ, ಅದರಿಂದ ತಾವು ನಿಜವಾದ ಭಕ್ತರೆಂದೂ ಅವರು ಭಾವಿಸುವರು. ಇವರಂತೆಯೇ ಊರಿನ ಹೆಂಗಸರೂ ಗಂಡಸರೂ "ದೇವರೇ, ಈ ಹುಡುಗರನ್ನು ಅಂಕೆಯಲ್ಲಿಡಲು ಸರಿಯಾದ ಗುರುಗಳನ್ನು ಬೇಗ ಕಳು ಹಿಸು'' ಎಂದು ಬೇಡುವರು. ಗುರುಗಳು ಬೇಡ ಎನ್ನುವವರಿಗಿಂತ ಗುರು ಗಳು ಬೇಕು ಎನ್ನುವವರು ಹೆಚ್ಚಾಗಿದ್ದುದರಿಂದಲೋ ಏನೋ, ಒಂದು ದಿನ ಬೆಳಗ್ಗೆ ಹುಡುಗರು ತೋಟಕ್ಕೆ ಹೋಗಿ ಮಧ್ಯಾಹ್ನ ಊಟಕ್ಕೆ ಮನೆಗೆ ಬರುವ ಹೊತ್ತಿಗೇ ಊರಿಗೆ ಇಬ್ಬರು ಗುರುಗಳು ಬಂದಿದ್ದರು!

"............ಗಂಡರಿರ, ಇನ್ನುಮೇಲೆ ಮೈಗೆ ಎಣ್ಣೆ ಸವರಿಕೊಂಡಿರಿ. ಇಬ್ಬರು ಬಂದಿದಾರೆ ನಿಮ್ಮನ್ನು ಚಚ್ಚಿ ಹದ ಮಾಡೋಕೆ. ಹುಷಾರ್'' ಎಂದು ಮನೆಮನೆಯಲ್ಲೂ ತಂದೆಯುವರು ಮಕ್ಕಳಿಗೆ ಎಚ್ಚರಿಕೆ ಹೇಳಿದರು. ತಮ್ಮನ್ನು ಚಚ್ಚಿ ಹದಮಾಡಲು ಬಂದಿರುವವರು ಹೇಗಿರಬಹುದೆಂದು ಹುಡು ಗರು ಮನಸ್ಸಿನಲ್ಲೇ ಯೋಚಿಸಿ, ಹಿರಣ್ಯಕಶಿಪುವಿನಂಥ ಇಬ್ಬರು ರಾಕ್ಷಸರು ಬಂದಿರಬಹುದೆಂದು ಊಹಿಸಿ ನಡುಗಿದರು.

ಆ ದಿನ ಊಟವಾದ ಮೇಲೆ ಹುಡುಗರು ಕುಣಿಯಲು ಹೋಗಲಿಲ್ಲ. ಇದನ್ನು ನೋಡಿ ತಂದೆ ತಾಯಿಯರಿಗೆ ಸ್ವಲ್ಪ ಸಮಾಧಾನವಾಯಿತು. ಗುರು ಗಳನ್ನು ನೋಡುವುದಕ್ಕೆ ಮೊದಲೇ ಹುಡುಗರಲ್ಲಿ ಇಷ್ಟು ಗಂಭೀರ ಬಂದರೆ ಅವರ ಅಂಕೆಗೆ ಸಿಕ್ಕಿದಮೇಲೆ ಹುಡುಗರು ಸಭ್ಯರಾಗುವರೆಂದೇ ಅವರು ಯೋಚಿಸಿದರು. ಆದರೆ, ಹುಡುಗರು ಮನೆಯಲ್ಲಿ ಉಳಿದ ಕಾರಣವೇ ಬೇರೆ. ತಮ್ಮನ್ನು ಬಲಿಹಾಕಲು ಬಂದಿರುವವರನ್ನು ಹೋಗಿ ನೋಡಿಕೊಂಡು ಬರಬೇಕೆಂಬುದು ಅವರು ಮನೆಯಲ್ಲೇ ಉಳಿದುದರ ಉದ್ದೇಶ. ಆದರಿಂದ

ಊಟವಾದಮೇಲೆ ಒಬ್ಬೊಬ್ಬರಾಗಿ ಅಳುಕಿ ಅಳುಕಿ, ಬೆಕ್ಕುಗಳಿರುವ ಕಡೆ ಇಲಿಗಳು ಹೋಗುವಂತೆ ಗುರುಗಳು ಇಳಿದಿದ್ದ ಶಾನುಭೋಗರ ಮನೆಗೆ ಹೋಗಿ ಹೊಂಚು ಹಾಕಿ ಅವರನ್ನು ನೋಡಿಕೊಂಡು ಬಂದರು.

ಸಂಜೆ ಊರು ಮುಂದಿನ ತೋಪಿನಲ್ಲಿ ಹುಡುಗರೆಲ್ಲ ಸೇರಿದರು. ಮುಂದೆ ತಮಗೆ ಬೀಳಬಹುದಾದ 'ಕಡುಬು' ಗಳನ್ನೂ ದೊರೆಯಬಹುದಾದ 'ಒಳಸುಂಠಿ' ಗಳನ್ನೂ ನೆನೆದು ಅವರಿಗೆ ದಿಕ್ಕೇ ತೋಚದಂತಾಗಿತ್ತು.

"ಶಾಸ್ತ್ರಿಗಳು ಪರವಾಗಿಲ್ಲ ಅಂತ ಕಾಣುತ್ತೆ" ಎಂದನು ಒಬ್ಬ ಹುಡುಗ.

"ನೋಡುವುದಕ್ಕೇನೋ ಹಾಗಿದಾರೆ. ಆದರೆ ಎಂಥೆಂಥಾ ಬಾಣ ಇಟ್ಟಿದಾರೋ" ಎಂದನು ಸೀತಾರಾಮು.

"ಇನ್ನೊಬ್ಬರೊ?" ಎಂದನು ಕಾಳ.

"ಅವರ ಕಣ್ಣೇ ಸಾಕು. ಉರಿಯುವ ಕೆಂಡದ ಹಾಗಿದೆ" ಎಂದನು ಅಯ್ಯು.

"ಅವರ ಮೀಸೆಯೋ!" ಎಂದನು ಮುತ್ತಾರಿ.

"ಅಬ್ಬಾ, ಅದೇನು ಮೀಸೆಯಪ್ಪ. ನಮ್ಮೂರು ಜೋಮುನಿಗೂ ಅಂತಹ ಮೀಸೆಯಿಲ್ಲ" ಎಂದನು ಮತ್ತೊಬ್ಬ ಹುಡುಗ.

"ಅವರ ಹೆಸರೇನಂತೆ ?" ಎಂದನು ರಾಮಚಂದ್ರ.

"ಶಾಸ್ತ್ರಿಗಳ ಹೆಸರು ನಾರಾಯಣ ಶಾಸ್ತ್ರಿಗಳು. ಇನ್ನೊಬ್ಬರ ಹೆಸರು ಶಾಮಣ್ಣನವರು" ಎಂದನು ಕಾಳ.

ಆಗ, ಗುಂಪಿನ ಮಧ್ಯದಿಂದ ಒಬ್ಬ ಹುಡುಗನು ಮುಂದೆ ಬಂದು, ಎಲ್ಲರೂ ಸುಮ್ಮನಾಗುವಂತೆ ಸನ್ನೆಮಾಡಿ "ಕೇಳಿರೋ ಇಲ್ಲಿ. ಶಾಸ್ತ್ರಿಗಳ ಹತ್ತಿರ ಒಂದು ದೊಡ್ಡ ದೊಣ್ಣೆಯಿದೆ. ಇನ್ನೊಬ್ಬರ ಹತ್ತಿರ ಬೆಳ್ಳಿ ಕಟ್ಟು ಹಾಕಿರುವ ಒಂದು ಒತ್ತೋಳುದ್ದದ ಬೆತ್ತವಿದೆ. ಅವರು ಅದನ್ನೇ ಕುದುರೆ ಹೊಡೆಯುವುದಕ್ಕೂ ಹುಡುಗರನ್ನು ಹೊಡೆಯುವುದಕ್ಕೂ ಉಪಯೋಗಿಸುತ್ತಾರಂತೆ" ಎಂದು ಹೇಳಿದನು.

"ಹಾಗಾದರೆ ಆ ಬೆತ್ತ ಅವರ ಹತ್ತಿರ ಹೆಚ್ಚುದಿನ ಇರುವುದಿಲ್ಲ" ಎಂದನು ಮತ್ತೊಬ್ಬ ಹುಡುಗ.

"ರಾಮಚಂದ್ರ, ಏನಾದರೂ ಉಪಾಯಮಾಡಿ ಇವರಿಬ್ಬರೂ ಈ ಊರಿನಲ್ಲಿ ಉಳಿಯದ ಹಾಗೆ ಮಾಡಯ್ಯ. ಇಲ್ಲದೇ ಇದ್ದರೆ ನಮ್ಮ ಪಾಡು ಏನೇನಾಗುತ್ತದೋ?" ಎಂದನು ಕಾಳ.

"ನಾನೂ ಎಷ್ಟೋ ಯೋಚನೆ ಮಾಡಿದೆ; ಒಂದೂ ಬಗೆಹರಿಯಲಿಲ್ಲ" ಎಂದು ರಾಮಚಂದ್ರ ಹೇಳಿದ. ಅವನ ಮಾತನ್ನು ಕೇಳಿ, ಬಂದುದನ್ನೆಲ್ಲ ಅನುಭವಿಸುವುದೊಂದಲ್ಲದೆ ಬೇರೆ ಮಾರ್ಗವೇ ಇಲ್ಲವೆಂದು ಹುಡುಗರು ನಿಟ್ಟುಸಿರುಬಿಟ್ಟರು.

ಹುಡುಗರಿಗೆ ಮಂತ್ರಗಳನ್ನೂ ಸಂಸ್ಕೃತವನ್ನೂ ಹೇಳಿಕೊಡಲು ನಾರಾಯಣ ಶಾಸ್ತ್ರಿಗಳನ್ನೂ, ಕನ್ನಡವನ್ನು ಹೇಳಿಕೊಡಲು ಶಾಮಣ್ಣನವರನ್ನೂ ಕರೆದುಕೊಂಡು ಬಂದಿದ್ದರು. ಶಾಸ್ತ್ರಿಗಳಿಗೆ ಸುಮಾರು ಐವತ್ತು ಐವತ್ತೈದು ವರ್ಷ ವಯಸ್ಸು. ಸಂಸ್ಕೃತದಲ್ಲಿ ಚೆನ್ನಾಗಿ ಪರಿಚಯವಿತ್ತು. ಅವರಿಗೆ ಯಾರೂ ದಿಕ್ಕಿಲ್ಲ. ಸರಿಯಾದ ಒಂದು ಕಡೆ ನಿಂತು, ತಾವು ಕಲಿತ ವಿದ್ಯವನ್ನು ನಾಲ್ಕು ಜನಕ್ಕೆ ಹೇಳಿಕೊಟ್ಟು ತಮ್ಮ ಕಡೆಗಾಲವನ್ನು ಕಳೆಯಬೇಕೆಂದು ಅವರು ಯೋಚಿಸುತ್ತಿರುವಾಗ, ಗುರುಗಳನ್ನು ಹುಡುಕ ಹೊರಟ ಕಳಸಾಪುರದ ಮಹನೀಯರು ಅವರನ್ನು ಕರೆದುಕೊಂಡು ಬಂದಿದ್ದರು.

ಶಾಮಣ್ಣನವರ ವಯಸ್ಸು ನಲವತ್ತೋ ನಲವತ್ತೈದೋ ಇರಬಹುದು. ಎತ್ತರವಾದ ಬಲಿಷ್ಠವಾದ ದೇಹ. ಅಗಲವಾದ ತುಂಬುಮುಖ. ದೊಡ್ಡದೊಡ್ಡ ಕೆಂಡದಂತಹ ಕೆಂಪಾದ ಕಣ್ಣುಗಳು. ದಪ್ಪಮೂಗು. ಇದೆಲ್ಲಕ್ಕೂ ಹೆಚ್ಚಾಗಿ ತುಟಿ ಬಾಯಿ ಕೆನ್ನೆಗಳೆಲ್ಲವನ್ನೂ ಮುಚ್ಚಿದ್ದ ದಪ್ಪಮೀಸೆ. ಗುಡುಗಿನಂತಹ ಧ್ವನಿ. ಒಟ್ಟಿನಲ್ಲಿ ಹುಡುಗರು ಹೇಳಿದಂತೆ ಅವರನ್ನು ನೋಡಿದರೇ ಹೆದರಿಕೆಯಾಗುತ್ತಿತ್ತು. ಅವರು ಜೈಮಿನಿ, ರಾಜಶೇಖರ ವಿಳಾಸ, ಭಾರತ ಮುಂತಾದ ಕನ್ನಡ ಗ್ರಂಥಗಳನ್ನು ಬಹಳ ಚೆನ್ನಾಗಿ ಓದುತ್ತಿದ್ದರು. ಕನ್ನಡ ಸಾಹಿತ್ಯದಲ್ಲಿ ತಕ್ಕಮಟ್ಟಿಗೆ ಪರಿಶ್ರಮವಿತ್ತು. ಅವರು ಮೊದಲು ಮಲೆನಾಡಿನ ಒಬ್ಬರು ದೊಡ್ಡ ಗೌಡರ ಆಶ್ರಯದಲ್ಲಿದ್ದರು. ಹಿಂದಿನ ಕಾಲದಲ್ಲಿ ವಿದ್ವಾಂಸರುಗಳಿಗೆ ಆಶ್ರಯಕೊಟ್ಟು ತಮ್ಮಲ್ಲಿ ಇರಿಸಿಕೊಳ್ಳುವುದು ತಮಗೊಂದು ದೊಡ್ಡ ಗೌರವವೆಂದು ಐಶ್ವರ್ಯವಂತರು ಭಾವಿಸಿದ್ದರು. ಬಹುಕಾಲ ತಮ್ಮನ್ನು ಮರ್ಯಾದಿಸಿದ ಗೌಡರು ಕಾಲವಾಗಿ,

ಆ ಮನೆಯಲ್ಲಿ ಆಸ್ತಿಗೆ ಜಗಳ ಮೊದಲಾಗಲು ಇನ್ನು ಅಲ್ಲಿ ಇರುವುದು ಸರಿಯಲ್ಲವೆಂದು ಶಾಮಣ್ಣನವರು ಸಂಸಾರವನ್ನು ತೌರುಮನೆಗೆ ಕಳುಹಿಸಿ ಬೇರೆ ಆಶ್ರಯವನ್ನು ಹುಡುಕುತ್ತಿದ್ದಾಗ ಕಳಸಾಪುರದ ಮಹನೀಯರ ಭೇಟಿಯಾಗಿ ಕಳಸಾಪುರಕ್ಕೆ ಬಂದರು. ಅವರ ಆಕಾರವನ್ನು ನೋಡಿಯೇ ಕಳಸಾಪುರದವರೆಲ್ಲ ತಮ್ಮ ಹುಡುಗರಿಗೆ ಸರಿಯಾದ ಗುರುಗಳು ಸಿಕ್ಕಿದರೆಂದು ಮನಸ್ಸಿಗೆ ಎಷ್ಟೋ ನೆಮ್ಮದಿಯನ್ನು ತಂದುಕೊಂಡರು.

## — ಶಿಕ್ಷಣ-ಶಿಕ್ಷೆ —

ವಿದ್ಯಾಭ್ಯಾಸವನ್ನು ಮೊದಲು ಮಾಡಲು ಒಂದು ದಿನವನ್ನು ಗೊತ್ತು ಮಾಡಲಾಯಿತು. ಅಂದು ಹಿರಿಯರೆಲ್ಲ ಮನೆಯಲ್ಲೇ ನಿಂತು ತಮ್ಮ ಹುಡುಗರಿಗೆ ಕಾವಲಿದ್ದು, ಅವರು ತಪ್ಪಿಸಿಕೊಂಡು ಹೋಗದಂತೆ ನೋಡಿಕೊಂಡರು. ಮತ್ತು ಗೊತ್ತಾದ ಕಾಲಕ್ಕೆ ಸರಿಯಾಗಿ ತಮ್ಮ ಮಕ್ಕಳನು ಮುಂದುಮಾಡಿಕೊಂಡು ಪಾಠ ಹೇಳಿಕೊಡಲು ಏರ್ಪಾಡಾಗಿದ್ದ ಶಾನುಭೋಗರ ಮನೆಯ ಹಜಾರಕ್ಕೆ ಬಂದು ಸೇರಿದರು. ಹಜಾರದಲ್ಲೊಂದು ಕಡೆ ನಾರಾಯಣಶಾಸ್ತ್ರಿಗಳು ಒಂದು ಕೃಷ್ಣಾಜಿನದ ಮೇಲೆ ಕುಳಿತಿದ್ದರು ಶಾಮಣ್ಣನವರು ಒಂದು ಚಾಪೆಯ ಮೇಲೆ ತಮ್ಮ ಬೆತ್ತದೊಡನೆ ಮಂಡಿಸಿದ್ದರು.

ಹಿರಿಯರು ಹುಡುಗರನ್ನೆಲ್ಲ ಗುರುಗಳ ಎದುರಿಗೆ ಚೆನ್ನಾಗಿ ಬಯ್ದು, ಅಂದೂ ಆಡಿ ಬುದ್ಧಿ ಹೇಳಿ, ಹೇಳಿದಂತೆ ಕೇಳದೇ ಇದ್ದರೆ, ಹೇಳಿಕೊಟ್ಟದನ್ನು ಕಲಿಯದೇ ಇದ್ದರೆ ಚೆನ್ನಾಗಿ ಬಿಗಿಯಬೇಕೆಂದೂ, ಏಟಿಲ್ಲದೆ ಹುಡುಗರು ಬಗ್ಗುವುದಿಲ್ಲವೆಂದೂ ಗುರುಗಳಿಗೆ ಹುಡುಗರ ವಿಚಾರದಲ್ಲಿ ಸಂಪೂರ್ಣ ಸ್ವತಂತ್ರ ಕೊಟ್ಟು, ಹುಡುಗರ ಹಿಂದಿನ ಚೇಷ್ಟೆಗಳನ್ನೆಲ್ಲ ವರ್ಣಿಸಿ ಹೇಳಿದರು. ಹುಡುಗರು ತಮ್ಮ ಜೀವವನ್ನು ಎಡಗೈಲಿ ಹಿಡಿದುಕೊಂಡು ನಿಂತಿದ್ದರು.

“ಹೀಗೇನು? ಹುಡುಗರು ಕಳಿಂಗರು” ಎಂದರು ಶಾಸ್ತ್ರಿಗಳು.

“ಆಗಲಿ, ಆಗಲಿ. ಇವರನ್ನೆಲ್ಲ ಒಂದು ದಿನದಲ್ಲಿ ಹತೋಟಿಗೆ ತಂದು ಬಿಡುತ್ತೇನೆ” ಎಂದು ಶಾಮಣ್ಣನವರು ಹೇಳುತ್ತ, ಹದ್ದು ಕೋಳಿ ಪಿಳ್ಳೆಗಳನ್ನು ನೋಡುವಂತೆ ಹುಡುಗರನ್ನೆಲ್ಲ ನೋಡಿ, ಬೆತ್ತದಿಂದ ಕುಳಿತಿದ್ದ ಚಾಪೆಯ ಮೇಲೆ ಒಂದೇಟು ಹೊಡೆದು, ಎದುರಿಗಿದ್ದ ಮುತ್ತಾರಿಯನ್ನು “ಇದೇನು ಗೊತ್ತೋ?” ಎಂದು ಕೇಳಿದರು. ಹುಡುಗರೆಲ್ಲ ನರಿಯ ನಗುವನ್ನು ನಕ್ಕು ಕತ್ತು ಬಗ್ಗಿಸಿದರು.

“ಬಾಯಿ ಬಿಡು” ಎಂದು ಮುತ್ತಾರಿಯ ತಂದೆ ಗದರಿಸಿದರು. ಶಾಮಣ್ಣನವರು ಮುತ್ತಾರಿಗೆ ಮತ್ತೆ ಅದೇ ಪ್ರಶ್ನೆ ಹಾಕಿದರು. ಮುತ್ತಾರಿ ಮೆಲ್ಲಗೆ “ಅದು ಬೆತ್ತ” ಎಂದನು.

“ಇದು ಯಾತಕ್ಕೆ ಬರುತ್ತೆ?” ಎಂದು ಶಾಮಣ್ಣನವರು ಮತ್ತೆ ಕೇಳಿದರು.

ಗುಂಪಿನ ಮಧ್ಯದಿಂದ ಒಬ್ಬ ಹುಡುಗ “ಕುದುರೆ ಹೊಡೆಯುವುದಕ್ಕೆ” ಎಂದು ಗಟ್ಟಿಯಾಗಿ ಹೇಳಿದನು. ಹುಡುಗರೆಲ್ಲ ನಕ್ಕರು. ಕೆಲವರು ದೊಡ್ಡವರೂ ನಕ್ಕರು.

“ನಿಮ್ಮಂಥ ಕತ್ತೆಗಳನ್ನೂ ಹೊಡೆಯುವುದಕ್ಕೆ ಬರುತ್ತದೆ” ಎಂದರು ಮಠದ ತಮ್ಮಯ್ಯನವರು. ಹುಡುಗರು ತಣ್ಣಗಾದರು.

ಗೊತ್ತಾದ ಹೊತ್ತಿಗೆ ಸರಿಯಾಗಿ, ಸರಸ್ವತಿಯ ಪೂಜೆಯನ್ನು ಮಾಡಿಸಿ, ಪ್ರಾರ್ಥನಾರೂಪವಾದ ಕೆಲವು ಸಂಸ್ಕೃತ ಶ್ಲೋಕಗಳನ್ನು ಹೇಳಿಕೊಟ್ಟು ಶಾಸ್ತ್ರಿಗಳು ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು. ಮತ್ತು ಗುರುಗಳಿಂದ ಹಿತೋಪದೇಶವನ್ನು ಕೇಳಿ, ಅವರಿಗೆ ನಮಸ್ಕರಿಸಿ ಆಶೀರ್ವಾದ ಪಡೆದು ಹುಡುಗರು ಮನೆಗಳಿಗೆ ಹೋದರು.

ನಾರಾಯಣ ಶಾಸ್ತ್ರಿಗಳು ಕೇಶವ ದೇವಾಲಯದಲ್ಲೇ ಹುಡುಗರಿಗೆ ಪಾಠ ಹೇಳಿಕೊಡಬೇಕೆಂದೂ ಮಠಕ್ಕೆ ಒಂದು ಮನೆ ಕಟ್ಟುವವರೆಗೆ ಶಾಮಣ್ಣನವರು ಶಾನುಭೋಗರ ಮನೆಯ ತೊಟ್ಟಿಯಲ್ಲೇ ಪಾಠ ಹೇಳಿಕೊಡುವುದೆಂದೂ ಏರ್ಪಾಡಾಯಿತು.

ಹುಡುಗರು ಶಾಸ್ತ್ರಿಗಳೊಂದಿಗೆ ದೇವಸ್ಥಾನದಲ್ಲೇ ಮಲಗಬೇಕು. ಬೆಳಗಿನ ಝಾವ ಅವರಿಂದ ಮಂತ್ರಗಳನ್ನು ಹೇಳಿಸಿಕೊಳ್ಳಬೇಕು. ಸೂರ್ಯೋದಯಕ್ಕೆ ಸರಿಯಾಗಿ ಸ್ನಾನ ಸಂಧ್ಯಾವಂದನೆ ಮಾಡಬೇಕು. ಆಮೇಲೆ ಸಂಸ್ಕೃತ ಅಭ್ಯಾಸ. ಒಂಬತ್ತು ಘಂಟೆಯ ಹೊತ್ತಿಗೆ ಮನೆಗೆ ಬಂದು ತಿಂಡಿಯನ್ನು ತಿಂದು ಶಾಮಣ್ಣನವರ ಮಠಕ್ಕೆ ಹೋಗಿ ಊಟದ ಹೊತ್ತಿನವರೆಗೆ ಪಾಠ ಹೇಳಿಸಿಕೊಳ್ಳಬೇಕು. ಮಧ್ಯಾಹ್ನ ಮನೆಗೆ ಬಂದು ಮಾಧ್ಯಾಹ್ನಿಕ ಮಾಡಿ ಊಟವಾದ ಮೇಲೆ ಸ್ವಲ್ಪ ವಿಶ್ರಮಿಸಿಕೊಂಡಿದ್ದು ಮತ್ತೆ ಮಠಕ್ಕೆ ಹೋಗಬೇಕು. ಸಂಜೆಯವರೆಗೂ ಮಠದಲ್ಲಿದ್ದು ಮನೆಗೆ ಬಂದು ಸೂರ್ಯ ಮುಳುಗುವ ಕಾಲಕ್ಕೆ ಸರಿಯಾಗಿ ಸಂಧ್ಯಾವಂದನೆ ಮಾಡಿ, ದೇವರಿಗೆ ಅಡ್ಡಬಿದ್ದು, ಪಾಠಗಳನ್ನು ಹೇಳಿಸಿಕೊಳ್ಳಲು ದೇವಸ್ಥಾನಕ್ಕೆ ಹೋಗಬೇಕು. ರಾತ್ರಿ ಊಟಕ್ಕೆ ಕರೆಯುವವರೆಗೂ ಹೀಗೆ ದೇವಸ್ಥಾನದಲ್ಲಿ ಸ್ತೋತ್ರ ಪಾಠ ಮಂತ್ರ ಮೊದಲಾದವುಗಳನ್ನು ಹೇಳಿಸಿಕೊಂಡು ಮನೆಗೆ ಹೋಗಿ ಊಟ ಮಾಡಿ ದೇವಸ್ಥಾನಕ್ಕೆ ಹೋಗಿ ಅಲ್ಲಿಯೇ ಓದಿ ಮಲಗಬೇಕು. ಮತ್ತೆ ಬೆಳಗಿನ ಝಾವ ಎದ್ದು ಮಂತ್ರಗಳನ್ನು ಹೇಳಿಸಿಕೊಳ್ಳಬೇಕು.

ಈ ಏರ್ಪಾಡನ್ನು ಕೇಳಿಯೇ ಹುಡುಗರು ಬೆಚ್ಚಿಬಿದ್ದರು. ಆಟಕ್ಕೆ ಒಂದು ಸಲ ಹೋಗುವುದಕ್ಕೂ ಅವಕಾಶವಿಲ್ಲವಲ್ಲ ಎಂದು ಅತ್ತರು. ಆದರೆ ಮಾಡುವುದೇನು ? ವಿದ್ಯಾಭ್ಯಾಸಕ್ಕೆ ಮೊದಲಾಯಿತು. ದುಃಖದಿಂದ ಗಂಟಲು ಕಟ್ಟಿ ಶಾಸ್ತ್ರಿಗಳು ಹೇಳಿಕೊಟ್ಟ ಮಂತ್ರಗಳು ಬಾಯಿಂದ ಹೊರಡಲೇ ಒಲ್ಲವು ! ಅಂತೂ ಇಂತೂ ಮೊದಲನೆಯ ದಿನ ಮಂತ್ರ ಹೇಳಿಸಿಕೊಂಡು ಸಂಸ್ಕೃತ ಅಕ್ಷರಗಳನ್ನು ಮರಳಿನ ಮೇಲೆ ತಿದ್ದಿ, ಶಾಸ್ತ್ರಿಗಳಿಂದ ಬಿಡುಗಡೆ ಹೊಂದಿದರು. ಮನೆಗೆ ಬರುವ ಹೊತ್ತಿಗೆ ತಿಂಡಿ ಸಿದ್ಧವಾಗಿತ್ತು. ಓದುವ ಹುಡುಗರೆಂದು ಹೆಂಗಸರು ಬಹಳ ಉಪಚಾರಮಾಡಿ ದಿನ ದಿನಕ್ಕಿಂತ ಹೆಚ್ಚಾಗಿ ತುಪ್ಪ ಮೊಸರು ಹಾಕಿದರು. ಆದರೆ ಹುಡುಗರಿಗೆ ತಿಂಡಿ ಬೇಕಾಗಿರಲಿಲ್ಲ. ಶಾಮಣ್ಣನವರ ಚಿತ್ರವನ್ನು ನೆನೆದು ಅವರ ಹೊಟ್ಟೆಯೊಳಗೆಲ್ಲ ನಡುಗುತ್ತಿತ್ತು. ಹೇಗೋ ತಿಂಡಿ ತಿಂದ ಶಾಸ್ತ್ರಮಾಡಿ ಕಾವಲಿದ್ದ ಹಿರಿಯರೊಡನೆ ಶಾಮಣ್ಣನವರ ಮಠಕ್ಕೆ ಹೋದರು. ತಮ್ಮ ಮಕ್ಕಳು ವಿದ್ಯೆ ಕಲಿಯುವುದನ್ನು ನೋಡಬೇಕೆಂದು ಸಂಭ್ರಮಪಟ್ಟುಕೊಂಡು ಹಿರಿಯರೂ

ಅಲ್ಲೇ ಕುಳಿತರು. ಶಾಮಣ್ಣನವರು ಜೈಮಿನಿ ಭಾರತದಿಂದ ಪಾಠವನ್ನು ಪ್ರಾರಂಭಿಸಿದರು.

ಶ್ರೀ ವಧುವಿನಂಬಕ ಚಕೋರಕಂ ಪ್ರೀತಿಯಿಂ । ಭಕ್ತಾವಳಿಯ ಹೃತ್ಕು
ಮುದ ಕೋರಕಂ ಬಿರಿಯೆ । ಜಗತೀವಲಯದನುಪಮ ಸೌಭಾಗ್ಯರತ್ನಾ
ಕರಂ ಪೆರ್ಚೆನಿಂ ಮೀರಿವರಿಯೆ ॥

ಎಂದು ಶಾಮಣ್ಣನವರು ಹೇಳಿಕೊಟ್ಟರು.

ಕೆಲವು ಹುಡುಗರು ಮಾತ್ರ ಶಾಮಣ್ಣನವರು ಇದನ್ನು ಹೇಳಲು ತೆಗೆದುಕೊಂಡಷ್ಟೇ ಹೊತ್ತು ಗೊಣಗಿದರು. ಉಳಿದವರೆಲ್ಲ ಒಂದೆರಡು ಪ್ರಾರಂಭದ ಶಬ್ದಗಳನ್ನು ಹೇಳಿ ಸುಮ್ಮನಾದರು. ಶಾಮಣ್ಣನವರು ಮತ್ತೆ ಮತ್ತೆ ಹೇಳಿಕೊಟ್ಟರೂ ಹುಡುಗರು ಸರಿಯಾಗಿ ಹೇಳಲೇ ಇಲ್ಲ. ಶುದ್ಧ ಅಪದ್ಧ ವನ್ನು ಹೇಳುತ್ತಿದ್ದರು.

"ಹತ್ತಾಳುದ್ದ ತೆಂಗಿನಮರ ಹತ್ತುತೀರಲ್ಲ. ಈಗ ಎಲ್ಲಿ ನಿಮ್ಮ ಪೌರುಷ ? ನೆಟ್ಟಗೆ ಬಗುಳಿ" ಎಂದರು ಮಠದ ತಮ್ಮಯ್ಯನವರು.

ತೆಂಗಿನಮರ ಹತ್ತುವುದಕ್ಕೂ ಜೈಮಿನಿ ಹೇಳುವುದಕ್ಕೂ ಏನು ಸಂಬಂಧ ಎಂದುಕೊಂಡರು ಹುಡುಗರು ಮನಸ್ಸಿನಲ್ಲೇ !

"ನಾಲ್ಕು ಬಿಗಿಯಬೇಕು. ಹೀಗೆ ಹೇಳಿಕೊಟ್ಟರೆ ಸ್ವಲ್ಪವೂ ಪ್ರಯೋಜನವಿಲ್ಲ" ಎಂದರು ಪಟೇಲ್ ಅಚ್ಚಣ್ಣನವರು.

"ನಿಜ. ಆದರೆ ಮೊದಲನೆಯ ದಿನವೇ ಏಕೆ ಹೊಡೆಯುವುದು ಅಂತ. ಅದರಿಂದ ಇವತ್ತು ನಾಳೆ ಏಟಿಲ್ಲ" ಎಂದರು ಶಾಮಣ್ಣನವರು

ಹುಡುಗರು ಸ್ವಲ್ಪ ಉಸಿರಾಡಿದರು.

ಒಂದು ದಿನ ಕಳೆಯಿತು. ಎರಡು ದಿನ ಕಳೆಯಿತು. ಹುಡುಗರಿಗೆ ಎರಡು ಯುಗ ಕಳೆದಂತಾಯಿತು. ಶಾಸ್ತ್ರಿಗಳು ಹುಡುಗರನ್ನು ತುಂಬ ವಿಶ್ವಾಸದಿಂದ ಮಾತಾಡಿಸುವರು ಎಷ್ಟೇ ತಪ್ಪಲಿ ಬೈಯದೆ ಬೇಸರಪಡದೆ ಹೇಳಿಕೊಡುವರು. ಆದರೆ ಒಂದು ಕಡೆ ಕುಳಿತಿರುವುದೇ ಕಳಸಾಪುರದ ಹುಡುಗರಿಗೆ ಸಹಿಸಲಸಾಧ್ಯವಾದ ಹಿಂಸೆಯಾಗಿತ್ತು. ಶಾಮಣ್ಣನವರು

ಶಾಸ್ತ್ರಿಗಳಂತಲ್ಲ. ಅವರಿಗೆ ಬೇಗ ಕೋಪ ಬರುತ್ತಿತ್ತು. ಹೇಳಿಕೊಟ್ಟುದನ್ನು ತಪ್ಪಿದರೆ ಚೆನ್ನಾಗಿ ಬಯ್ಯುತ್ತಿದ್ದರು. ಮೊದಲೆರಡು ದಿನ ಏಟು ಬೀಳಲಿಲ್ಲ. ಆ ಎರಡು ದಿನದ ಏಟುಗಳೆಲ್ಲ ಮೂರನೆಯ ದಿನ ತಮಗೆ ಒಟ್ಟಿಗೇ ಬೀಳುವು ವೆಂದು ಹುಡುಗರು ಹೆದರಿದ್ದರು. ಆದುದರಿಂದ ಆ ದಿನ ಶಾಮಣ್ಣನವರ ಮಠಕ್ಕೆ ಹೋಗುವಾಗ ಅವರಿಗೆ ಕಾಲೇ ಬರದೇಹೋಯಿತು. ದೊಡ್ಡವರ ಕಾವಲಿದ್ದುದರಿಂದ ಮಠಕ್ಕೆ ಹೋಗಲೇಬೇಕಾಯಿತು. ಏಟು ಬೀಳುವು ದೆಂದು ಹೆದರಿದ್ದುದರಿಂದ ಅವರು ದಿನ ದಿನಕ್ಕಿಂತ ಹೆಚ್ಚು ತಪ್ಪು ಮಾಡಿ ದರು. ಶಾಮಣ್ಣನವರು ಹುಡುಗರಿಗೆಲ್ಲ ನಾಲ್ಕು ನಾಲ್ಕು ಬಿಗಿದು ತಮ್ಮ ಬೆತ್ತದ ಮಹತ್ತನ್ನು ತೋರಿಸಿದರು. ಏಟು ತಿಂದಮೇಲಂತೂ ಹುಡುಗರು ಇನ್ನೂ ದಿಗಿಲುಬಿದ್ದರು ತಪ್ಪು ಇನ್ನೂ ಹೆಚ್ಚಾಯಿತು. ತಪ್ಪು ಹೆಚ್ಚಿದಂತೆ ಶಿಕ್ಷೆಯೂ ಹೆಚ್ಚಿತು. ಒಳತುಂಠಿಯ ರುಚಿಯನ್ನು ತೋರಿಸಿದರು, ಕುರ್ಚಿ ಕೂರಿಸಿದರು, ಕಿವಿ ಹಿಂಡಿಸಿದರು. ಹುಡುಗರೆಲ್ಲರೂ ಸದ್ದಿಲ್ಲದೆ ಅಳಲು ಮೊದಲು ಮಾಡಿದರು.

ಆಗ ಮಠದ ತಮ್ಮಯ್ಯನವರು ಬಂದು ನೋಡಿ "ಇದೀಗ ಸರಿಯಾದ ರೀತಿ, ಎರಡು ದಿನ ಹೀಗೆ ಕಿವಿ ಹಿಡಿಸಿ ಕುರ್ಚಿ ಕೂರಿಸಿದರೆ ಮೂರನೇ ದಿನ ದಿಂದ ನಾಯಿಮರಿಗಳಾಗುತ್ತಾರೆ" ಎಂದು ತಮ್ಮ ಸಂತೋಷವನ್ನು ವ್ಯಕ್ತ ಪಡಿಸಿದರು.

ತಮ್ಮಯ್ಯನವರ ಈ ಪ್ರೋತ್ಸಾಹದ ಮಾತುಗಳಿಂದ ಉತ್ತೇಜಿತರಾದ ಶಾಮಣ್ಣನವರು ಅಳುತ್ತ ನಿಂತಿದ್ದ ಆ ಹುಡುಗರಿಗೆಲ್ಲ ಬೆತ್ತದಿಂದ ಮತ್ತೆ ಒಂದೊಂದು ಏಟುಕೊಟ್ಟು "ಹೇಳಿಕೊಟ್ಟುದನ್ನು ಶ್ರದ್ಧೆಯಿಂದ ಕಲಿಯದೇ ಇದ್ದರೆ ಕೋದಂಡ ಹಾಕ್ತೀನಿ, ಗೊತ್ತಾಯ್ತೆ ?" ಎಂದರು.

ಗೊತ್ತಾಯ್ತೆ? ಎಂದು ಕೇಳಿದ ಪ್ರಶ್ನೆಗೆ ಉತ್ತರ ಹೇಳದಿದ್ದರೆ ಮತ್ತೆಲ್ಲಿ ಏಟುಬೀಳುವುದೋ ಎಂದು ಹುಡುಗರೆಲ್ಲ "ಹೂ. ಗೊತ್ತಾಯ್ತು" ಎಂದರು.

"ಆಹಾ! ಗಿಳಿರಾಮಗಳು ಹೇಗೆ ಬಾಯಿಬಿಡುತ್ತವೆ ನೋಡಿ" ಎಂದು ತಮ್ಮಯ್ಯನವರು ಹುಡುಗರನ್ನು ಮೂದಲಿಸಿ, "ಕೋದಂಡ ಹಾಕಿದಮೇಲೆ ಗೊತ್ತಾದೀತೇ ಹೊರತು ಈಗ್ಲೇ ಎಲ್ಲಿ ಗೊತ್ತಾಗುತ್ತವೆ" ಎಂದು ಅಬ್ಬರಿಸಿ ದರು.

ಆ ದಿನ ಮಧ್ಯಾಹ್ನ ಹುಡುಗರು ಊಟಕ್ಕೆ ಹೋದಾಗ ಮನೆಯಲ್ಲಿ ಕುಳಿತು ಅತ್ತರು. ಹೆಂಗಸರು ನೋಡಿ ಸ್ವಲ್ಪ ಮರುಗಿದರು. ಗಂಡಸರು "ಇನ್ನೂ ಈಗಲೇ ಏನು ಕಂಡಿರಿ. ನಿಮಗೆ ಚೆನ್ನಾಗಿ ಬೀಳಬೇಕು" ಎಂದು ಮೂದಲಿಸಿದರು. ಮಧ್ಯಾಹ್ನ ಹಿರಿಯರು ಕಾವಲಿಲ್ಲದ ಹುಡುಗರೆಲ್ಲ ಮಠಕ್ಕೆ ತಪ್ಪಿಸಿಕೊಂಡು ಕಬ್ಬಿನ ಗದ್ದೆಗಳಲ್ಲಿ ಅವಿತುಕೊಂಡರು. ಹಾಗೆ ತಪ್ಪಿಸಿಕೊಂಡವರ ಪಾಲಿನ ಏಟುಗಳನ್ನೂ ಉಳಿದ ಹುಡುಗರೇ ತಿಂದರು. ಕಬ್ಬಿನ ಗದ್ದೆಗಳಲ್ಲಿ ಅಡಗಿದ್ದ ಹುಡುಗರು ಸ್ವಲ್ಪ ಕತ್ತಲೆಯಾಗುವವರೆಗೂ ಅಲ್ಲಿದ್ದು ಆಮೇಲೆ ಮನೆಗೆ ಬಂದರು. ಮಠಕ್ಕೆ ತಪ್ಪಿಸಿಕೊಂಡುದಕ್ಕೆ ಮನೆಯಲ್ಲಿ ಚೆನ್ನಾಗಿ ಹೊಡೆತಗಳು ಬಿದ್ದವು.

ಹುಡುಗರು ಮಠಕ್ಕೆ ಹೋದರೆ ಅಲ್ಲಿ ಏಟು; ಹೋಗದಿದ್ದರೆ ಮನೆಯಲ್ಲಿ ಏಟು! ಹತ್ತಿಪ್ಪತ್ತು ದಿನ ಎನ್ನುವುದರೊಳಗೇ ಹುಡುಗರಿಗೆ ಸಾಕುಸಾಕಾಯಿತು. ತಿಂಡಿ ತೀರ್ಥಗಳೂ ಅವರಿಗೆ ಬೇಡವಾಯಿತು. ತಿಂಗಳುಗಟ್ಟಲೆ ಕಾಯಿಲೆ ಮಲಗಿದವರಂತೆ ಬಡವಾದರು. ತಾಯಿಯರೊಡನೆ ತಮ್ಮ ದುಃಖವನ್ನು ಹೇಳಿಕೊಂಡು ಅತ್ತರು. ಶಾಮಣ್ಣನವರು ಹುಡುಗರನ್ನು ಹಾಗೆ ಹೊಡೆಯುವ ವಿಚಾರದಲ್ಲಿ ಹೆಂಗಸರು ಗಂಡಸರೊಡನೆ ನಾಲ್ಕು ಮಾತು ಗಟ್ಟಿಯಾಗಿ ಆಡಿದರು. "ಏಟು ಇಲ್ಲದಿದ್ದರೆ ಹುಡುಗರು ಕೆಟ್ಟುಹೋಗುತ್ತಾರೆ. ಬುದ್ಧಿವಂತರಾದರೆ ಏಕೆ ಏಟು ಬೀಳುತ್ತದೆ" ಎಂದು ಗಂಡಸರು ಹೆಂಗಸರ ಮಾತನ್ನು ಅಷ್ಟಕ್ಕೇ ನಿಲ್ಲಿಸಿಬಿಟ್ಟರು.

ಒಂದು ತಿಂಗಳಾದರೂ ಹುಡುಗರಿಗೆ ಏನೂ ಬರಲಿಲ್ಲ. ಶಾಮಣ್ಣನವರಿಗೆ ಏನೂ ಮರೆಯಲಿಲ್ಲ. ಶಾಮಣ್ಣನವರ ಬೆತ್ತಗಳನ್ನೆಲ್ಲ ಹುಡುಗರು ಹಾರಿಸಿಬಿಡುತ್ತಿದ್ದರು. ಆದರೂ ಅವರಿಗೆ ಏಟುಗಳು ಕಡಿಮೆಯಾಗಲಿಲ್ಲ, ಮಠದ ಸುಬೇದಾರ್ ತಮ್ಮಯ್ಯನವರು ಶಾಮಣ್ಣನವರಿಗೆ ಒಂದು ಬೆತ್ತದ ಕಂತೆಯನ್ನೇ ಒದಗಿಸಿದ್ದರು! ಈ ಏಟುಗಳಿಂದ ತಮಗೆ ಉಳಿಗಾಲವೇ ಇಲ್ಲವೆಂದು ಹುಡುಗರು ಮನಗಂಡು ದಿಕ್ಕುಕಾಣದಾದರು.

## — ಬಿಡುಗಡೆ —

ಮುತ್ತಾರಿಗೆ ಒಂದು ದಿನ ಬಹಳ ಏಟು ಬಿದ್ದಿತು. ಮನೆಗೆ ಬಂದವನು ತಾಯಿಯ ಎದುರಿಗೆ ಗೋಳೋ ಎಂದು ಅತ್ತನು. ಮಗನ ಕೈ ಊದಿದ್ದುದನ್ನು ನೋಡಿ ಮುತ್ತಾರಿಯ ತಾಯಿಗೂ ಮೇಷ್ಟರ ಮೇಲೆ ಸ್ವಲ್ಪ ಕೋಪ ಬಂತು. "ಇದೇನಪ್ಪ ಈ ಹೊಡೆಯಾಟ? ಶಿಕ್ಷೆ ಮಾಡುವುದಕ್ಕೂ ಒಂದು ಇತಿಮಿತಿ ಬೇಡವೆ?'' ಎಂದು, ಗಂಡಸರು ಮನೆಗೆ ಬಂದಮೇಲೆ ಚೆನ್ನಾಗಿ ಹೇಳುವುದಾಗಿ ಮುತ್ತಾರಿಯನ್ನು ಸಮಾಧಾನಪಡಿಸಿದರು.

ಮುತ್ತಾರಿ ಮಧ್ಯಾಹ್ನ ಮಠಕ್ಕೂ ಹೋಗಲಿಲ್ಲ; ರಾತ್ರಿ ಮನೆಗೂ ಬರಲಿಲ್ಲ. ಇದರಿಂದ ಮನೆಯಲ್ಲಿ ಎಲ್ಲರಿಗೂ ಗಾಬರಿಯಾಯಿತು. "ಏಟು ತಡೆಯಲಾರದೆ ಎಲ್ಲೋ ತೋಟಕ್ಕೆ ಹೋಗಿ ಅವಿತುಕೊಂಡಿದ್ದಾನೆ. ಹೊತ್ತಾದಮೇಲೆ ಬರುತ್ತಾನೆ'' ಎಂದರು ಮುತ್ತಾರಿಯ ತಂದೆ, ರಾತ್ರಿ ಊಟ ಮಾಡುತ್ತ. ಮುತ್ತಾರಿಯ ತಾಯಿ ನಡುರಾತ್ರಿಯವರೆಗೂ ಕಾದು ನೋಡಿದರು. ಅಷ್ಟು ಹೊತ್ತಾದರೂ ಮಗ ಬರದೇ ಇರಲು "ಯಾವ ಹುಡುಗರನ್ನಾದರೂ ವಿಚಾರಿಸಿ ನೋಡಬಾರದೆ?'' ಎಂದರು. ಅವರೂ ಹೋಗಿ ಮನೆಯ ಹತ್ತಿರದಲ್ಲಿನ ಕೆಲವು ಹುಡುಗರನ್ನು ವಿಚಾರಿಸಿದರು. ಯಾರಿಗೂ ಮುತ್ತಾರಿಯ ಸುದ್ದಿ ತಿಳಿಯದು ಆತಂಕದಿಂದ ರಾತ್ರಿಯನ್ನು ಕಳೆದರು. ಬೆಳಗಾದಮೇಲೆ ಎಲ್ಲ ಹುಡುಗರನ್ನೂ ವಿಚಾರಿಸಿದರು. "ನಿನ್ನೆ ಬೆಳಿಗ್ಗೆ ಮಠದಲ್ಲೇ ಅವನನ್ನು ನೋಡಿದ್ದು. ಆಮೇಲೆ ಅವನನ್ನು ನಾವು ನೋಡಲೇ ಇಲ್ಲ" ಎಂದು ಅವರು ಹೇಳಿದರು. "ಮಧ್ಯಾಹ್ನದ ಹೊತ್ತಿಗೆ ಹಾಜರಾಗುತ್ತಾನೆ, ನೋಡುತ್ತ ಇರು" ಎಂದು ಮುತ್ತಾರಿಯ ತಂದೆ ಹೆಂಡತಿಗೆ ಸಮಾಧಾನ ಹೇಳಿ ತೋಟಕ್ಕೆ ಹೋದರು. ಆದಿನ ಮಠಕ್ಕೆ ಯಾವಹುಡುಗನೂ ತಪ್ಪಿಸಿಕೊಳ್ಳಲಿಲ್ಲ. ಹಿಂದಿನ ದಿನ ಮಧ್ಯಾಹ್ನ ಮುತ್ತಾರಿ ತಪ್ಪಿಸಿಕೊಂಡುದು ಶಾಮಣ್ಣನವರಿಗೆ ಸಿಟ್ಟುಬರುವಂತೆ ಮಾಡಿತ್ತು. ಆದರೆ ತಾವು ಅವನನ್ನು ಸ್ವಲ್ಪಹೆಚ್ಚಾಗಿಯೇ ಹೊಡೆದೆವೆನ್ನುವ ಭಾವನೆ ಅವರಿಗೂ ಬಂದು ಮನಸ್ಸಿಗೆ ದಿಗಿಲಾಗಿತ್ತು; ಹಾಗೆ ಹೊಡೆಯಬಾರದಾಗಿತ್ತು ಎನ್ನಿಸಿತು. ಮುತ್ತಾರಿಯ ತಂದೆ ಬಂದು ರಾತ್ರಿ ಮುತ್ತಾರಿ ಮನೆಗೇ ಬರಲಿಲ್ಲವೆಂದು ತಿಳಿಸಿದಮೇಲಂತೂ ಅವರಿಗೆ ಗಾಬರಿಯಾಯಿತು. ಆದರಿಂದ ಆ ದಿನ ಅವರು ಯಾವ ಹುಡುಗರನ್ನೂ ಹೊಡೆಯಲಿಲ್ಲ. ತಪ್ಪಿದ

ಹುಡುಗರನ್ನು ಕುರ್ಚಿ ಕೂರಿಸಿ ಕಿವಿ ಹಿಡಿಸುವುದರಲ್ಲೇ ಅವರು ಸಮಾಧಾನ ಪಟ್ಟುಕೊಳ್ಳಬೇಕಾಯಿತು.

ಮಧ್ಯಾಹ್ನದ ಊಟದ ಹೊತ್ತಿಗೂ ಮುತ್ತಾರಿಯ ಮುಖ ಕಾಣಲಿಲ್ಲ. ಮುತ್ತಾರಿಯ ತಾಯಿ ಮಗನೆಲ್ಲಿ ಹೋದನೋ ಎಂದು ಅತ್ತರು. ಅದನ್ನು ನೋಡಿ ಮುತ್ತಾರಿಯ ತಂದೆ "ಎಲ್ಲಿ ಹೋಗ್ತಾನೆ. ಬೆಳವಾಡಿಗೋ ಜಾವಗಲ್ಲಿಗೋ ಹೋಗಿದ್ದಾನು. ಸಂಜೆಯ ಹೊತ್ತಿಗೆ ಬರುತ್ತಾನೆ" ಎಂದು ಹೆಂಡತಿಗೆ ಸಮಾಧಾನ ಹೇಳಿದರೂ ತಾವೂ ಆತಂಕಪಟ್ಟುಕೊಂಡು ಅವನನ್ನು ನೋಡಿಕೊಂಡು ಬರಲು ಜನರನ್ನು ಬೆಳವಾಡಿಗೆ ಕಳುಹಿಸಿದರು.

ಅಂದು ಸಾಯಂಕಾಲ ಪಾತು ಒಬ್ಬಳೇ ಮನೆಯ ಮುಂದೆ ಪಡಸಾಲೆಯ ಮೇಲೆ ಕವಡೆ ಆಡುತ್ತ ಕುಳಿತಿದ್ದಳು. ಆಗ ಕಿಟ್ಟಿ ಅಲ್ಲಿ ಬಂದವನೇ "ಪಾತು, ಮನೆಯಲ್ಲಿ ಯಾರಿದಾರೆ?" ಎಂದು ಕೇಳಿದನು.

"ಯಾರೂ ಇಲ್ಲ. ನಾನೊಬ್ಬಳೇ. ಅಮ್ಮ ನೀರಿಗೆ ಹೋಗಿದಾಳೆ. ಅಣ್ಣ ತೋಟಕ್ಕೆ ಹೋಗಿದಾರೆ" ಎಂದಳು ಪಾತು.

"ನೋಡು ಪಾತು; ಒಂದು ಗುಟ್ಟಿನ ಸಮಾಚಾರ ಹೇಳ್ತೀನಿ, ನೀನು ಯಾರಿಗೂ ಹೇಳಬಾರದು ಕಂಡೆಯಾ" ಎಂದನು ಕಿಟ್ಟಿ, ಅವಳ ಹತ್ತಿರ ಬಂದು ಕುಳಿತು.

"ಯಾರಿಗೂ ಹೇಳೋಲ್ಲ" ಎಂದು ಪಾತು ಹತ್ತಿರ ಬಂದಳು.

"ನೋಡು, ನಿನ್ನೆಯ ದಿನ ಮೇಷ್ಟ್ರು ಮುತ್ತಾರೀನ ದನ ಚಚ್ಚುವ ಹಾಗೆ ಚಚ್ಚಿಬಿಟ್ಟರು" ಎಂದನು ಕಿಟ್ಟಿ.

"ಅದೆಂಥ ಮೇಷ್ಟ್ರೋ ಕಿಟ್ಟಿ! ಹೊಡೆಯೋದು ಅಂದ್ರೆ ಹಾಗೇನೋ? ಅವರು ಮುತ್ತಾರೀನ ಹಾಗೆ ಹೊಡೀತ ಇದ್ರೆ ನೀವು ನೋಡ್ತ ಸುಮ್ಮನೆ ಇದ್ದಿರ?" ಎಂದು ಅವಳು ಮಾತಿಗೆ ಮೊದಲು ಮಾಡಿದಳು.

ಕಿಟ್ಟಿ ಅವಳನ್ನು ಅಷ್ಟಕ್ಕೇ ತಡೆದು "ಸುಮ್ಮನಿರಮ್ಮ, ಪಾತು. ನಾನು ಹೇಳೋ ಸಮಾಚಾರ ಕೇಳಿ ಆಮೇಲೆ ಮಾತಾಡುವೆಯಂತೆ" ಎಂದು ಗುಟ್ಟಾಗಿ ಅವಳ ಕಿವಿಯಲ್ಲಿ—

"ನೋಡು ಪಾತು, ಸಿನ್ನಿ ಮೇಷ್ಟ್ರು ಮುತ್ತಾರೀನ ದನ ಚಚ್ಚಿದಹಾಗೆ ಚಚ್ಚಿದರು. ಮತ ಬಿಟ್ಟಮೇಲೆ ಮುತ್ತಾರಿ ನನ್ನ ಕೈಲಿ 'ನೋಡು ಕಿಟ್ಟು, ನನ್ನ ಕೈಲಿ ಈ ಏಟು ತಡೆಯೋಕೆ ಸಾಧ್ಯವಿಲ್ಲ. ಹೋಗಿ ಯಾವುದಾದರೂ ಕೆರೆಗೋ ಭಾವಿಗೋ ಬಿದ್ದುಬಿಡ್ತೀನಿ' ಅಂದ. ನಾನು ಆಗ, ತಮಾಷೆಗೆ ಹೇಳ್ತಾ ಇದಾನೇಂತಿದ್ದೆ. ಆದರೆ ಸಿನ್ನಿಯಿಂದ ಅವನು ಇಲ್ಲದೇ ಇರೋದ ನೋಡಿದರೆ ಅವನು ಯಾವುದೋ ಕೆರೆಗೋ ಭಾವಿಗೋ ಬಿದ್ದುಬಿಟ್ಟಿದಾನೇಂತ ಕಾಣುತ್ತೆ" ಎಂದು ಹೇಳಿದನು.

ಕಿಟ್ಟು ಇನ್ನೂ ಏನೇನು ಹೇಳುತ್ತಿದ್ದನೋ! ಅಷ್ಟರಲ್ಲೇ ಪಾತು ಮೇಷ್ಟರನ್ನು ಮನಬಂದಂತೆ ನಿಷ್ಠೂರಮಾಡುತ್ತ ಅಳುತ್ತ ಕೆರೆಯ ಕಡೆಗೆ ಓಡಿದಳು. ಸ್ವಲ್ಪ ದೂರದಲ್ಲೇ ಬರುತ್ತಿದ್ದ ತಾಯಿಯನ್ನು ಕಂಡು ಅವಳ ಅಳು ಮಾತು ಎರಡೂ ಜೋರಾದವು.

"ಏಕೆ ಪಾತು?" ಎಂದರು ಅವರ ಅಮ್ಮ.

"ಅಯ್ಯೋ, ಅಮ್ಮ; ಯಾಕೆ ಅಂತ ಕೇಳ್ತೀಯಲ್ಲೇ? ಆ ಹಾಳು ಮೇಷ್ಟ್ರು ಬಂದು ತಗಂಡ್ರಲ್ಲಮ್ಮ ಈ ಊರನ್ನೇ" ಎಂದಳು ಪಾತು.

"ಏನಾಯ್ತೆ?" ಎಂದರು ಪಾತುವಿನ ತಾಯಿ, ಮಗಳ ಮಾತು ಅರ್ಥವಾಗದೆ.

"ಅಯ್ಯೋ, ಮುತ್ತಾರಿ ನೀರಿನ ಪಾಲಾದನಮ್ಮಾ" ಎಂದಳು ಪಾತು ಅಳುತ್ತಲೇ.

ಇದನ್ನು ಕೇಳುತ್ತಲೇ ಮುತ್ತಾರಿಯ ತಾಯಿ ಹೊತ್ತಿದ್ದ ಕೊಡವನ್ನು ಎತ್ತಿಹಾಕಿಕೊಂಡು "ಅಯ್ಯೋ ದೇವರೇ" ಎಂದು ಬಿದ್ದುಬಿಟ್ಟರು. ಜೊತೆಯಲ್ಲಿ ಬರುತ್ತಿದ್ದ ಹೆಂಗಸರು ಅವರನ್ನು ಎತ್ತಿ ಕೂರಿಸಿಕೊಂಡು, ನೆತ್ತಿಗೆ ನೀರು ತಟ್ಟಿ, ಉಪಚರಿಸಿ ಅವರಿಗೆ ಪ್ರಜ್ಞೆಬರುವಂತೆ ಮಾಡಿದರು. ಮುತ್ತಾರಿಯ ತಾಯಿ ಹುಚ್ಚುಹಿಡಿದವರಂತೆ ಆಡುತ್ತ ಅಳುತ್ತ ಹಾಗೂ ಹೀಗೂ ತೂರಾಡಿಕೊಂಡು ಮನೆಗೆ ಬಂದರು. ಊರಿನ ಜನವೆಲ್ಲ ಅವರ ಮನೆಯಲ್ಲಿ ನೆರೆಯಿತು.

ಅಷ್ಟು ಹೊತ್ತಿಗೆ ಮುತ್ತಾರಿಯ ತಂದೆ ಮನೆಗೆ ಬಂದರು. ದೂರದಿಂದಲೇ ಮನೆಯ ಮುಂದೆ ಜನ ಸೇರಿರುವುದನ್ನು ನೋಡಿ, ಬರುತ್ತಿದ್ದ ಅಳುವನ್ನು ಕೇಳಿ, ಏನೋ ಆಗಬಾರದ್ದು ಆಗಿ ಹೋಗಿದೆಯೆಂದು ಅವರು ಹೆದರಿದರು. ಅವರು ಮನೆಗೆ ಬಂದವರೇ ಹೆಂಡತಿಯನ್ನು 'ಏನಾಯ್ತು' ಎಂದು ಕೇಳಿದರು.

"ಅಯ್ಯೋ, ಮುತ್ತಾರಿ" ಎಂದು ಅತ್ತರು ಮುತ್ತಾರಿಯ ತಾಯಿ. ಮುತ್ತಾರಿಯ ತಂದೆಗೆ ತಲೆ ತಿರುಗಿದಂತಾಯಿತು. ಒಂದು ಕ್ಷಣ ಅವರಿಗೆ ಏನೂ ಕಾಣಿಸದಂತಾಯಿತು. "ಮುತ್ತಾರಿ........ಮುತ್ತಾರಿ....?" ಎಂದು ನಡುಗುವ ದನಿಯಲ್ಲಿ ಪ್ರಶ್ನಿಸಮಾಡಿದರು.

"ಅಣ್ಣಾ, ಮುತ್ತಾರಿ ನೀರಿನ ಪಾಲಾದ" ಎಂದಳು ಅಳುತ್ತಿದ್ದ ಪಾತು.

"ಎಲ್ಲಿ? ಯಾವಾಗ? ಸ್ವಲ್ಪ ವಿವರವಾಗಿ ಹೇಳಿ. ನನಗೆ ಒಂದೂ ತೋಚೋ ಹಾಗಿಲ್ಲ" ಎಂದು ಹೆಂಡತಿಯನ್ನು ಕೇಳಿದರು ಮುತ್ತಾರಿಯ ತಂದೆ.

ವಿಚಾರಣೆಗೆ ಮೊದಲಾಯಿತು. ಮುತ್ತಾರಿ ಎಲ್ಲಿ, ಯಾವಾಗ ನೀರಿನ ಪಾಲಾದ ಅನ್ನುವುದು ಯಾರಿಗೂ ತಿಳಿಯದು. ಮುತ್ತಾರಿಯ ತಂದೆಗೆ ಸ್ವಲ್ಪ ಧೈರ್ಯವಾಯಿತು. ಕಿಟ್ಟನನ್ನು ಕರೆಸಿ ವಿಚಾರಿಸಿದರು. ಅವನು ಪಾತುವಿಗೆ ಹೇಳಿದಂತೆಯೇ ಹೇಳಿದ. "ನಿನ್ನೆ ಮಧ್ಯಾಹ್ನ ಊಟವಾದ ಮೇಲೆ ನನಗೆ ಬೀದಿಯಲ್ಲಿ ಸಿಕ್ಕಿದ. ಮೇಷ್ಟರ ಕೈಲಿ ಆ ಏಟು ತಿನ್ನಲಾರೆ. ಯಾವುದಾದರೂ ಕೆರೆಗೋ ಭಾವಿಗೋ ಹೋಗಿ ಬೀಳ್ತೀನೆ ಎಂದ. ಅದನ್ನ ನಾನು ತಮಾಷೆ ಅಂತ ಮಾಡಿಕೊಂಡಿದ್ದೆ. ಆದರೆ ಅವನು ಇದುವರೆಗೂ ಪತ್ತೆಯಿಲ್ಲದಿರುವುದರಿಂದ, ತಾನು ಹೇಳಿದ ಹಾಗೆ ಎಲ್ಲಿ ಮಾಡಿದಾನೋ ಅಂತ ದಿಗಿಲಾಗಿ ಪಾತೂ ಕೈಲಿ ತಿಳಿಸಿದೆ. ಇನ್ನು ಹೆಚ್ಚು ಸಮಾಚಾರ ನನಗೆ ತಿಳಿಯದು" ಎಂದನು ಕಿಟ್ಟ.

ಊರಿನ ಭಾವಿಗಳನ್ನೆಲ್ಲಾ ಹುಡುಕಿದ್ದಾಯಿತು. ಕೆರೆಯನ್ನೆಲ್ಲ ಶೋಧಿಸಿದ್ದಾಯಿತು. ಏನೂ ಫಲವಾಗಲಿಲ್ಲ.

"ತೋಟದ ಭಾವಿಗಳನ್ನೂ ಹುಡುಕಬೇಕಾಗಿತ್ತು" ಎಂದನು ಅಯ್ಯ.

ಸರಿ. ಎಲ್ಲ ತೋಟಗಳಲ್ಲೂ ಭಾವಿಗಳನ್ನೆಲ್ಲ ಹುಡುಕಿದರು. ಏನೂ ಸಾರ್ಥಕ ವಾಗಲಿಲ್ಲ.

ಹೆಂಗಸರೆಲ್ಲರೂ ಶಾಮಣ್ಣನವರನ್ನು ದೂರುವವರೇ. ಗಂಡಸರೂ ಒಬ್ಬಿಬ್ಬರು "ಶಾಮಣ್ಣನವರೇ, ನೀವು ಹುಡುಗರನ್ನು ಅಷ್ಟು ಹೊಡೆಯ ಬಹುದೇ?" ಎಂದು ನಿಧಾನವಾಗಿಯೇ ಕೇಳಿದರು. ಶಾಮಣ್ಣನವರಿಗೆ ಪ್ರಾಣ ವೇಕಿತ್ತು ಬಂದಂತಾಯಿತು. ಹೀಗಾಗುವುದೆಂದು ಅವರು ಕನಸಿನಲ್ಲೂ ಎಣಿಸಿರಲಿಲ್ಲ. ಅವರಿಗೆ ಕಳಸಾಪುರಕ್ಕೆ ಏಕೆ ಬಂದೆನೋ ಎನಿಸಿತ್ತು. "ಮುತ್ತಾರಿಯೊಬ್ಬ ಸುಖವಾಗಿ ಸಿಕ್ಕಿಬಿಟ್ಟರೆ ಸಾಕು" ಎಂದುಕೊಂಡರು. ಹುಡುಗರನ್ನು ಹೊಡೆಯುವುದನ್ನು ಬಿಟ್ಟುಬಿಟ್ಟರು.

ಬೆಳವಾಡಿ ಜಾವಗಲ್ ಕಡೆಗೆ ಹೋಗಿದ್ದವರೂ ವಾಪಸು ಬಂದರು. ಮುತ್ತಾರಿಯ ಸಮಾಚಾರವೇನೂ ತರಲೂ ಅವರಿಗೆ ಸಾಧ್ಯವಾಗಲಿಲ್ಲ. ಊರಿನವರಿಗೆಲ್ಲ ಮುತ್ತಾರಿ ಏನಾದನೆಂಬುದೇ ಒಂದು ದೊಡ್ಡ ಯೋಚನೆ ಯಾಯಿತು.

ಮುತ್ತಾರಿ ಕಣ್ಮರೆಯಾಗಿ ಒಂದು ವಾರ ಕಳೆಯಿತು. ಇನ್ನೂ ಅವನ ಸುದ್ದಿ ಏನೂ ತಿಳಿಯದು. ತಮ್ಮ ಸಂಬಂಧ ಇರುವ ಊರುಗಳಿಗೆಲ್ಲ ಮುತ್ತಾರಿಯ ತಂದೆ ಜನರನ್ನು ಕಳಿಸಿದ್ದರು. ಅವರೆಲ್ಲಾ ಹೋದಂತೆಯೇ ವಾಪಸು ಬಂದರು. ಮುತ್ತಾರಿಯ ತಾಯಿ ಅಳುವುದು ನಿಲ್ಲಲೇ ಇಲ್ಲ.

ಮುತ್ತಾರಿ ಕಣ್ಮರೆಯಾದಮೇಲೆ ಹುಡುಗರೆಲ್ಲ ಒಂದು ದಿನವೂ ತಪ್ಪಿಸಿಕೊಳ್ಳದೆ ಮಠಕ್ಕೆ ಹಾಜರಾಗುವರು. ಪಾಠವನ್ನು ತಪ್ಪಿದರೂ ಶಾಮಣ್ಣ ನವರು ಅವರನ್ನು ಹೊಡೆಯುತ್ತಿರಲಿಲ್ಲ; ಕುರ್ಚಿ ಕೂರಿಸುತ್ತಿರಲಿಲ್ಲ; ಕಿವಿ ಹಿಡಿಸುತ್ತಿರಲಿಲ್ಲ.

ಪಾತುವಿನ ಬಾಯಿಯಿಂದ ತಪ್ಪಿಸಿಕೊಳ್ಳುವುದು ಶಾಮಣ್ಣನವರಿಗೆ ಅಸಾಧ್ಯವಾಯಿತು. ಕಂಡಕಂಡಲ್ಲಿ ಅವಳು ಅವರನ್ನು ಬಾಯಿಗೆ ಬಂದಂತೆ ನಿಷ್ಠೂರ ಮಾಡುವಳು. "ಮೇಷ್ಟ್ರೆ, ನಿಮಗೆ ಇನ್ನು ಸಮಾಧಾನವಾಯಿತೆ? ನಿಮ್ಮ ಬೆತ್ತಕ್ಕೆ ಬಲಿ ಕೊಟ್ಟಾಯ್ತಲ್ಲ" ಎನ್ನುವಳು. "ನಿಮ್ಮ ಹೊಟ್ಟೇಲಿ ಮಕ್ಕಳಿದ್ದರೆ ನೀವು ಹೀಗೆ ಮಾಡ್ತಾ ಇದ್ರಾ?" ನಂದಗೋಕುಲದಂಥ ಈ

ಊರಿಗೆ ಕಂಸನ ಹಾಗೆ ಬಂದಿರಿ" ಎನ್ನುವಳು. ಅವಳು ಆಡುತ್ತಿದ್ದ ನಿಷ್ಠೂರದ ಮಾತುಗಳಿಗೆ ಕೊನೆಮೊದಲೇ ಇರಲಿಲ್ಲ. "ಹಾಗೆಲ್ಲ ಆಡಬಾರದಮ್ಮಾ" ಎಂದರು ಅವಳ ತಂದೆ. "ಮುತ್ತಾರೀನ ಕರಕೊಂಡು ಬರಲಿ; ನಾನು ಆಡಿದ್ದೆಲ್ಲಾ ತಪ್ಪು ಅಂತ ಅವರಿಗೆ ಅಡ್ಡಬೀಳ್ತೀನಿ" ಎಂದಳು ಪಾತು.

"ಮುತ್ತಾರೀನ ಜೀವಸಹಿತ ನೋಡಿದರೆ ಸಾಕು. ಅನಂತರ ಈ ಊರಲ್ಲಿ ಒಂದು ಗಳಿಗೆಯೂ ಇರುವುದಿಲ್ಲ" ಎಂದುಕೊಂಡರು ಶಾಮಣ್ಣನವರು.

ಹತ್ತು ಹನ್ನೆರಡು ದಿವಸವಾದರೂ ಮುತ್ತಾರಿಯ ಸಮಾಚಾರವೇ ತಿಳಿಯಲಿಲ್ಲ.

"ಮೇಷ್ಟ್ರೆ, ಮುತ್ತಾರಿ ಮರೆಯಾಗುವುದರಲ್ಲಿ ಹುಡುಗರ ಕಿತಾಪತಿಯೇನೋ ಇರಬೇಕು" ಎಂದರು ದಫೇದಾರ್ ಶಾಮಣ್ಣನವರು. ಮೇಷ್ಟರು ಶಾಮಣ್ಣನವರಿಗೂ ಅದೇ ಅನುಮಾನವಿತ್ತು. ಮುತ್ತಾರಿಯನ್ನು ಹೋಗಿ ಹುಡುಕಿಕೊಂಡು ಬರುವುದಾದರೆ ನಾಲ್ಕು ದಿನ ರಜ ಕೊಡುವುದಾಗಿ ಅವರು ಆ ದಿನ ಮಧ್ಯಾಹ್ನ ಮಠದಲ್ಲಿ ಹೇಳಿದಾಗ, ಹುಡುಗರೆಲ್ಲ ಅದಕ್ಕೆ ಸಂತೋಷದಿಂದ ಒಪ್ಪಿಕೊಂಡರು. ಮುತ್ತಾರಿ ಸಿಕ್ಕಿದ ಕೂಡಲೇ ಶಾಮಣ್ಣನವರು ಕಳಸಾಪುರದಿಂದ ಹೊರಟು ಹೋಗುವುದಾಗಿ ನಿರ್ಧರಿಸಿದ್ದುದು ಹುಡುಗರಿಗೆ ತಿಳಿದಿತ್ತು!

ಮುತ್ತಾರಿಯನ್ನು ಹುಡುಕಲು ಗುಂಪುಗುಂಪಾಗಿ ಹುಡುಗರು ಎಲ್ಲ ಕಡೆಗಳಿಗೂ ಹೊರಟರು. ಬೆಳವಾಡಿ, ಜಾವಗಲ್, ನೇರಲಿಗೆ, ಮತಿಘಟ್ಟ, ಅರಕೆರೆ, ಬಾಣಾವರ, ಹಾರನಹಳ್ಳಿ, ಹಳೇಬೀಡು, ಮರ್ಲೆ, ಚಿಕ್ಕಮಗಳೂರು ಮೊದಲಾದ ಸುತ್ತುಮುತ್ತಿನ ಊರುಗಳಿಗೆಲ್ಲ ಹೊರಟರು. ಹುಡುಗರು ಹೀಗೆ ಹೊರಟುದನ್ನು ನೋಡಿ ಊರಿನವರಿಗೆ ಏನೋ ಒಂದು ತರಹ ಧೈರ್ಯ ಬಂದಿತು.

ನಾಲ್ಕುದಿನದ ಮೇಲೆ ಚಿಕ್ಕಮಗಳೂರು ಕಡೆ ಹೋಗಿದ್ದ ರಾಮಚಂದ್ರ, ಸೀತಾರಾಮು, ಅಯ್ಯು, ಕಾಳ ಮೊದಲಾದ ಹುಡುಗರ ಪೈಕಿ ಇಬ್ಬರು ಕಳಸಾಪುರಕ್ಕೆ ಬಂದು, ಮುತ್ತಾರಿ ಚಿಕ್ಕಮಗಳೂರಿನ ಹತ್ತಿರದ ಒಂದು ಹಳ್ಳಿಯಲ್ಲಿ

ರುವನೆಂದೂ ಅವನನ್ನು ಕರೆದುಕೊಂಡು ಬರಲು ರಾಮಚಂದ್ರ ಮೊದಲಾದವರು ಹೋಗಿರುವರೆಂದೂ ಒಂದೆರಡು ದಿನದಲ್ಲೇ ಅವರು ಬರುವರೆಂದೂ ತಿಳಿಸಿದರು. ಮುತ್ತಾರಿಯು ನೀರು ಪಾಲಾಗಿಲ್ಲವೆಂಬುದನ್ನು ಕೇಳಿ ಊರಿನಲ್ಲಿ ಎಲ್ಲರಿಗೂ ಆದ ಸಂತೋಷ ಅಷ್ಟಿಷ್ಟಲ್ಲ. ಇದಾದ ಮೂರು ದಿನದ ಮೇಲೆ ಮುತ್ತಾರಿಯನ್ನು ಕರೆದುಕೊಂಡು ರಾಮಚಂದ್ರ ಮುಂತಾದ ಹುಡುಗರು ಕಳಸಾಪುರಕ್ಕೆ ಬಂದರು.

"ಮುತ್ತಾರಿ ದೇಶಾಂತರ ಹೊರಟಿದ್ದ. 'ಊರಿಗೆ ಬಂದರೆ ಮತ್ತೆ ಹೊಡೆಯುತ್ತಾರೆ; ನಾನು ಬರುವುದಿಲ್ಲ' ಅಂತ ಕೂತಿದ್ದ. ನಾವೆಲ್ಲ ಏಟು ಹೊಡೆಸುವುದಿಲ್ಲ ಅಂತ ಧೈರ್ಯಹೇಳಿ ಕರಕೊಂಡು ಬಂದೆವು" ಎಂದನು ರಾಮಚಂದ್ರ.

ಮುತ್ತಾರಿಯನ್ನು ಯಾರೂ ಹೊಡೆಯಲಿಲ್ಲ; ಬೈಯಲಿಲ್ಲ. ಆದರೆ ಅವನು ಬಂದ ಕೆಲವು ದಿನಗಳಲ್ಲೇ ಮಠಕ್ಕೆ ಹೋಗುವ ಕಷ್ಟ ಹುಡುಗರಿಗೆ ತಪ್ಪಿಹೋಯಿತು! ಶಾಮಣ್ಣನವರು ತಮ್ಮ ಊರಿಗೆ ಹೊರಟುಹೋದರು.

ಮುತ್ತಾರಿಯನ್ನು ಪುಚ್ಚಿಟ್ಟು ಹುಡುಗರು ಮೇಷ್ಟ್ರಿಂದ ಬಿಡುಗಡೆ ಹೊಂದಿದ್ದರು!

## — ಸ್ವರ್ಗಸ್ಥ ಸೀತಾರಾಮು —

ಶಾಮಣ್ಣನವರಿಂದ ಬಿಡುಗಡೆ ಹೊಂದಿದಮೇಲೆ ಕಳಸಾಪುರದ ಹುಡುಗರಿಗೆ ಕೈಕಾಲು ಆಡಿಸಲು ಮತ್ತೆ ಅವಕಾಶ ದೊರಕಿತು. ಶಾಸ್ತ್ರಿಗಳೊಡನೆ ಮಂತ್ರ ಹೇಳಿಸಿಕೊಳ್ಳುವುದಕ್ಕೆ ಮಾತ್ರ ಅವರು ತಪ್ಪಿಸಿಕೊಳ್ಳುತ್ತಿರಲಿಲ್ಲ. ಕಾರಣ, ಶಾಸ್ತ್ರಿಗಳಿಗೆ ಹುಡುಗರಲ್ಲಿ ಬಹಳ ವಾತ್ಸಲ್ಯ. ಹುಡುಗರನ್ನು ಅವರು ಒಂದು ಬಾರಿಯಾದರೂ ಗಟ್ಟಿಯಾಗಿ ಗದರಿಸಿದವರಲ್ಲ. ಹುಡುಗರೂ ಅವರೊಡನೆ ಭಯ ಭಕ್ತಿಗಳಿಂದಲೇ ನಡೆದುಕೊಳ್ಳುತ್ತಿದ್ದರು. ಅವರು ಹೇಳಿಕೊಟ್ಟುದನ್ನು ಮನಸ್ಸಿಟ್ಟು ಕಲಿಯುತ್ತಿದ್ದರು. ದಿನದಿನಕ್ಕೂ ಹುಡುಗರು ಬುದ್ಧಿವಂತರಾಗುತ್ತಿದ್ದುದನ್ನು ಕಂಡು ಹಿರಿಯರೂ ಸಂತೋಷಪಡುತ್ತಿದ್ದರು.

ಕಳಸಾಪುರದ ಹುಡುಗರ ಉತ್ಸಾಹಕ್ಕೆ ಇದ್ದಕ್ಕಿದ್ದ ಹಾಗೆಯೇ ಒಂದು ಬಲವಾದ ಪೆಟ್ಟು ಬಿದ್ದಿತು. ಆ ಪೆಟ್ಟಿನಿಂದ ಕಳಸಾಪುರದ ಹುಡುಗರು ಪುನಃ ಚೇತರಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ.

ಒಂದು ದಿನ ಕೆರೆಯಲ್ಲಿ ಕಳಸಾಪುರದ ಹುಡುಗರು ಮನಸೋ ಇಚ್ಛೆ ಈಜಾಡಿಕೊಂಡು ಬಂದರು. ಆ ರಾತ್ರಿ ಸೀತಾರಾಮುವಿಗೆ ಇದ್ದಕ್ಕಿದ್ದ ಹಾಗೆಯೇ ವಿಪರೀತ ಜ್ವರ ಬಂದು ಅವನು ಹಾಸಿಗೆ ಹಿಡಿದು ಮಲಗಿದನು. ಮೂರು ನಾಲ್ಕು ದಿನವಾದರೂ ಬಂದ ಜ್ವರ ಆರಲೇ ಇಲ್ಲ. ಹುಡುಗರೆಲ್ಲ ಬಹಳ ದಿಗಿಲು ಬಿದ್ದರು. ಅವರು ತಮ್ಮ ಆಟಪಾಟಗಳನ್ನೆಲ್ಲ ಬಿಟ್ಟು ಸೀತಾರಾಮುವಿನ ಶುಶ್ರೂಷೆಗೆ ತೊಡಗಿದರು. ಊರಿನ ದೊಡ್ಡವರೆಲ್ಲ ಬಂದು ನೋಡಿ ಸೀತಾರಾಮುವಿಗೆ ಕಂಡಕಂಡ ಔಷಧೋಪಚಾರಗಳನ್ನೆಲ್ಲ ಮಾಡಿಸಿದರು. ಆದರೂ ಸೀತಾರಾಮುವಿಗೆ ಗುಣಮುಖವಾಗಲಿಲ್ಲ. ಜ್ವರ ದಿನ ದಿನಕ್ಕೂ ಹೆಚ್ಚಾಗುತ್ತಿತ್ತು. ಎಲ್ಲರಿಗೂ ಬಹಳ ಯೋಚನೆಗಿಟ್ಟುಕೊಂಡಿತು.

ಸೀತಾರಾಮುವು ಹಾಸಿಗೆ ಹಿಡಿದಂದಿನಿಂದ ರಾಮಚಂದ್ರನು ಅವನ ಪಕ್ಕದಿಂದ ಅಲುಗಲಿಲ್ಲ. ಹಗಲು ರಾತ್ರಿಯೆನ್ನದೆ ಹತ್ತಿರವೇ ಕುಳಿತಿರುವನು. ಅವನಿಗೆ ಗುಣವಾಗಲೆಂದು ಊರಿನ ದೇವರುಗಳಿಗೆಲ್ಲಾ ದಿನದಿನವೂ ನೂರಾರು ಹರಕೆ ಹೊರುವನು. ಎಂಟು ದಿನವಾದರೂ ಸೀತಾರಾಮುವಿಗೆ ಜ್ವರ ಇಳಿಮುಖವಾಗುವ ಸೂಚನೆ ಕಂಡುಬರಲಿಲ್ಲ. ಅವನು ಬದುಕುವನೆಂಬ ಆಸೆ ದಿನದಿನಕ್ಕೂ ದೂರವಾಗುತ್ತಿತ್ತು.

ಸೀತಾರಾಮುವು ಹಾಸಿಗೆ ಹಿಡಿದು ಮಲಗಿದ ಒಂಬತ್ತನೆಯ ರಾತ್ರಿ, ಊಟದ ಸಮಯದಲ್ಲಿ, ಸೀತಾರಾಮು ರಾಮಚಂದ್ರನನ್ನು ಹತ್ತಿರ ಕರೆದನು. ರಾಮಚಂದ್ರನು ಬಂದು ಹಾಸಿಗೆಯ ಪಕ್ಕದಲ್ಲಿ ಕುಳಿತುಕೊಂಡನು ಸೀತಾರಾಮುವು ಅವನನ್ನು ಇನ್ನೂ ಹತ್ತಿರ ಬರುವಂತೆ ಹೇಳಿದನು. ರಾಮಚಂದ್ರನು ಹಾಸಿಗೆಯ ಮೇಲೆ ಕುಳಿತು ಅವನ ತಲೆಯನ್ನು ತೆಗೆದು ತನ್ನ ತೊಡೆಯ ಮೇಲೆ ಇಟ್ಟುಕೊಂಡನು. ತಲೆ ಕೆಂಡದಂತೆ ಸುಡುತ್ತಿತ್ತು.

ಸೀತಾರಾಮು ರಾಮಚಂದ್ರನ ಕೈ ತೆಗೆದುಕೊಂಡು ತನ್ನ ಹಣೆಯ ಮೇಲಿಟ್ಟುಕೊಂಡನು.

"ಏನಾಗುತ್ತದೆ ?" ಎಂದು ರಾಮಚಂದ್ರನು ಮೆಲ್ಲಗೆ ಕೇಳಿದನು.

ಸೀತಾರಾಮುವು ಒಂದು ಸಲ ದೀರ್ಘವಾಗಿ ಉಸಿರುಬಿಟ್ಟು "ನೀರು" ಎಂದನು. ರಾಮಚಂದ್ರ ಒಂದು ತೊಟ್ಟು ನೀರು ಕುಡಿಸಿದನು.

ಸೀತಾರಾಮುವು ಎದ್ದು ಕುಳಿತುಕೊಳ್ಳಲು ಪ್ರಯತ್ನಪಟ್ಟನು. ರಾಮಚಂದ್ರನು ಅವನನ್ನು ಎದೆಗೆ ಒರಗಿಸಿ ಕೂರಿಸಿಕೊಂಡನು.

"ರಾಮಚಂದ್ರ"

"ಏನು ?"

ಸೀತಾರಾಮು ಸ್ವಲ್ಪಹೊತ್ತು ಮೌನವಾಗಿದ್ದನು.

"ಸೀತಾರಾಮು, ಏನಾಗುತ್ತದೆ ?" ಎಂದು ಮತ್ತೆ ರಾಮಚಂದ್ರನು ಕೇಳಿದನು.

"ರಾಮಚಂದ್ರ, ಲಕ್ಷ್ಮಿ........" ಸೀತಾರಾಮು ಸುಮ್ಮನಾದನು. ದುಃಖದಿಂದ ಮುಂದಕ್ಕೆ ಮಾತು ಹೊರಡದೇ ಹೋಯಿತು. ರಾಮಚಂದ್ರನಿಗೆ ಏನೋ ಭೀತಿಯಾಯಿತು. ಮೈ ನಡುಗಿತು. ಆದರೂ ಧೈರ್ಯಮಾಡಿಕೊಂಡು ಸೀತಾರಾಮುವಿಗೂ ಧೈರ್ಯ ಹೇಳಿದನು.

"ಪಂಡಿತರು ಹೇಳಿದಾರೆ. ನಾಳೆಯಿಂದ ನಿನಗೆ ಗುಣವಾಗುತ್ತದೆಯಂತೆ. ಅಧೈರ್ಯಪಡಬೇಡ" ಎಂದನು ರಾಮಚಂದ್ರ. ಆ ಮಾತನ್ನು ಕೇಳಿ ಸೀತಾರಾಮುವು ಸಣ್ಣಗೆ ನಕ್ಕನು. ರಾಮಚಂದ್ರ ಮತ್ತೆ ನಡುಗಿದನು.

ಸೀತಾರಾಮುವು ರಾಮಚಂದ್ರನ ಕೈಯನ್ನು ಸ್ವಲ್ಪ ಬಲವಾಗಿ ಹಿಡಿದುಕೊಂಡು "ತಬ್ಬಲಿ ಹುಡುಗಿ. ಕೈ ಬಿಡಬೇಡ" ಎಂದನು.

"ಹುಚ್ಚುಹುಚ್ಚಾಗಿ ಮಾತಾಡಬೇಡ" ಎಂದನು ರಾಮಚಂದ್ರ. ಮುಂದಕ್ಕೆ ಮಾತು ಹೊರಡಲಿಲ್ಲ. ದುಃಖದಿಂದ ಅವನಿಗೆ ಗಂಟಲು ಕಟ್ಟಿದಂತಾಯಿತು.

ಸೀತಾರಾಮು ಮತ್ತೆ ಸ್ವಲ್ಪಹೊತ್ತು ಸುಮ್ಮನಿದ್ದನು. ಇದ್ದಕ್ಕಿದ್ದ ಹಾಗೇ "ಇಲ್ಲ, ರಾಮಚಂದ್ರ. ನನಗಾಗಿ ನೀನು ಲಕ್ಷ್ಮಿಯ ಕೈಬಿಡಬೇಡ" ಎಂದನು.

"ಹೆಚ್ಚು ಮಾತಾಡಬೇಡ, ಆಯಾಸವಾಗುತ್ತದೆ. ಸುಮ್ಮನೆ ಮಲಗಿಕೋ" ಎಂದನು ರಾಮಚಂದ್ರ.

"ಲಕ್ಷ್ಮೀ, ಲಕ್ಷ್ಮೀ" ಎಂದು ಸೀತಾರಾಮು ಮೆಲ್ಲಗೆ ಹೇಳಿಕೊಂಡನು. ಅವನ ಕಣ್ಣುಗಳಲ್ಲಿ ಮತ್ತೆ ನೀರು ತುಂಬಿತು. ರಾಮಚಂದ್ರನ ಕಣ್ಣಿನಲ್ಲೂ ನೀರು ತುಂಬಿತು.

"ಸೀತಾರಾಮು, ನಾನು ಏನು ಮಾಡಲಿ ಹೇಳು?" ಎಂದನು ರಾಮಚಂದ್ರ.

"ಲಕ್ಷ್ಮಿಯ ಕೈ ಬಿಡಬೇಡ."

"ಇಲ್ಲ" ರಾಮಚಂದ್ರ ಹೇಳಿದನು.

ಸೀತಾರಾಮುವು ಒಂದು ಸಲ ಸಣ್ಣಗೆ ನಕ್ಕು "ಲಕ್ಷ್ಮಿ ಎಲ್ಲಿ?" ಎಂದು ಕೇಳಿದನು.

ಲಕ್ಷ್ಮಿ ಹೊರಗೆ ಹೋಗಿದ್ದವಳು ಬಂದಳು, ಸೀತಾರಾಮುವು ಅವಳನ್ನು ಹತ್ತಿರ ಕರೆದು ಕೂರಿಸಿಕೊಂಡು, ಸ್ನೇಹದಿಂದ ಮುಂಗುರುಳನ್ನು ನೇವರಿಸಿ ಕೆನ್ನೆಯನ್ನು ಸವರಿದ. ಅವಳ ಕೈಹಿಡಿದುಕೊಂಡು ರಾಮಚಂದ್ರನ ಕೈಲಿಟ್ಟು—

"ರಾಮಚಂದ್ರ, ಲಕ್ಷ್ಮಿಯನ್ನು ಚೆನ್ನಾಗಿ ನೋಡಿಕೊ. ತಬ್ಬಲಿ ಹುಡುಗಿ" ಎಂದನು. ಅಣ್ಣನ ಮಾತನ್ನು ಕೇಳಿ ಲಕ್ಷ್ಮಿಯು ಗಟ್ಟಿಯಾಗಿ ಅತ್ತಳು. ಅಳಬೇಡವೆಂದು ಸೀತಾರಾಮುವೇ ಅವಳನ್ನು ಸಮಾಧಾನ ಮಾಡಿದನು.

ಆ ರಾತ್ರಿ ಸೀತಾರಾಮುವಿಗೆ ಜ್ವರ ಸ್ವಲ್ಪ ಇಳಿದಂತಾಯಿತು. ಅದರಿಂದ ಎಲ್ಲರಿಗೂ ಸ್ವಲ್ಪ ಆಸೆ ಮೂಡಿತು. ಜ್ವರ ಇಳಿದಾಗ ಸೀತಾರಾಮು ಎಲ್ಲರೊಡನೆಯೂ ಚೆನ್ನಾಗಿ ಮಾತಾಡಿದನು. ದೀಪ ಆರುವ ಮೊದಲು ಹೆಚ್ಚು ಪ್ರಕಾಶ ಬೀರುವಂತೆ ಸೀತಾರಾಮುವಿನ ಮುಖದಲ್ಲಿ ಒಂದು ರೀತಿಯ ಕಳೆ ಬೆಳಗುತ್ತಿತ್ತು.

ಬೆಳಗಿನ ಝಾವ ಸೀತಾರಾಮು ಗಟ್ಟಿಯಾಗಿ ನರಳಿದನು. ರಾಮಚಂದ್ರನಿಗೆ ಅದೇ ತಾನೇ ನಿದ್ದೆ ಹತ್ತುತ್ತಿತ್ತು. ರಾತ್ರಿಯೆಲ್ಲ ಅವನು ಎಚ್ಚರ

ವಾಗಿಯೇ ಕುಳಿತಿದ್ದನು. ಸೀತಾರಾಮುವು ನರಳಿದುದನ್ನು ಕೇಳಿ ರಾಮಚಂದ್ರನು ಎದ್ದು ಹಣತೆಯ ದೀಪವನ್ನು ದೊಡ್ಡದು ಮಾಡಿ, ಸೀತಾರಾಮುವನ್ನು ನೋಡಿದನು. ಸೀತಾರಾಮುವಿಗೆ ಉಸಿರು ಹತ್ತಿ ಬರುತ್ತಿತ್ತು. ಅವನ ದೃಷ್ಟಿ ಅಸ್ಥಿರವಾಗಿತ್ತು. ಮುಖಭಾವ ಒಂದು ರೀತಿಯ ಹೆದರಿಕೆಯನ್ನುಂಟು ಮಾಡುತ್ತಿತ್ತು.

ರಾಮಚಂದ್ರನು ಅವನನ್ನು ಮುಟ್ಟಿ ಅಲುಗಾಡಿಸಿದನು. ಸೀತಾರಾಮುವು ಎಲ್ಲಿಯೋ ನೋಡುವವನಂತೆ ಅವನನ್ನು ನೋಡಿದನು. ರಾಮಚಂದ್ರನು "ಸೀತಾರಾಮು, ಸೀತಾರಾಮು" ಎಂದು ಮೆಲ್ಲಗೆ ಮಾತಾಡಿಸಿದನು. ರಾಮಚಂದ್ರನ ಗುರುತು ಹಿಡಿಯಲು ಸೀತಾರಾಮುವಿಗೆ ಸ್ವಲ್ಪ ಹೊತ್ತು ಹಿಡಿಯಿತು. ಕಡೆಗೆ 'ರಾಮಚಂದ್ರ' ಎಂದನು. ಮಾತು ತೊದಲುತ್ತಿತ್ತು.

"ದೇವರೇ, ನನ್ನ ಪ್ರಾಣವನ್ನು ತೆಗೆದುಕೊಂಡು ಸೀತರಾಮುವನ್ನು ಬದುಕಿಸಲಾರೆಯಾ" ಎಂದು ರಾಮಚಂದ್ರ ಮನಸ್ಸಿನಲ್ಲೇ ಮೊರೆಯಿಟ್ಟನು.

ನಡುಗುವ ಕೈಗಳಿಂದ ಸೀತಾರಾಮುವು ರಾಮಚಂದ್ರನ ಕೈಹಿಡಿದುಕೊಂಡು "ಲಕ್ಷ್ಮಿ....ಮರೆಯ....ಬೇಡ" ಎಂದನು.

"ಇಲ್ಲ, ಮರೆಯುವುದಿಲ್ಲ" ಎಂದನು ರಾಮಚಂದ್ರ. ರಾಮಚಂದ್ರ ಅಳುತ್ತಿದ್ದನು. ಸೀತಾರಾಮುವೂ ಅಳುತ್ತಿದ್ದನು. ಈ ಅಳುವ ಶಬ್ದವನ್ನು ಕೇಳಿ ಎಲ್ಲರಿಗೂ ಎಚ್ಚರವಾಯಿತು. ಬಂದು ನೋಡುತ್ತಾರೆ, ಸೀತಾರಾಮುವಿಗೆ ಮಾತು ನಿಂತುಹೋಗಿತ್ತು. ಸಮಾಚಾರ ತಿಳಿದು ದೊಡ್ಡವರೂ ಹುಡುಗರೂ ಅಲ್ಲಿ ಬಂದು ಸೇರಿದರು.

ಸ್ವಲ್ಪಹೊತ್ತಿನಲ್ಲೇ ಕಳಸಾಪುರಕ್ಕೆ ಕಳಸಾಪುರವೇ ರೋದನದಲ್ಲಿ ಮುಳುಗಿತು. ಆ ದಿನದ ಸೂರ್ಯೋದಯದ ಸಮಯದಲ್ಲಿ, ಹರೆಯದ ಹೊಸಿಲಿನಲ್ಲಿ ಕಾಲಿಡುತ್ತಿದ್ದ ಸೀತಾರಾಮುವಿನ ಬಾಳಿಗೆ ಉದಯವೇ ಇಲ್ಲದ ಕತ್ತಲು ಕವಿಯಿತು.

ಸೀತಾರಾಮುವಿನ ಅಗಲಿಕೆಯ ನೋವನ್ನು ಸಹಿಸುವುದು ಹುಡುಗರಿಗೆ ಶಕ್ಯವಾಗಲಿಲ್ಲ. ಸೀತಾರಾಮುವು ಸ್ವರ್ಗಸ್ಥನಾಗಿ ತಿಂಗಳಾದರೂ ಆ ಹುಡುಗರ ಕಣ್ಣೀರು ಆರಲಿಲ್ಲ. ಕೋಟೆ ಮನೆ ಎಲ್ಲಿಯೇ ಇದ್ದರೂ, ಸೀತಾರಾಮುವಿನ ನೆನಪು ತರುತ್ತಿದ್ದ ದೃಶ್ಯಗಳೇ ಅವರಿಗೆ ಕಾಣುವುವು. ಅವರು ಆಟಕ್ಕೆ ಸಹ ಹೋಗದೆ ಮನೆಯಲ್ಲೇ ಇರುವರು. ಚೇಷ್ಟೆಯನ್ನಂತೂ ಸಂಪೂರ್ಣವಾಗಿ ಬಿಟ್ಟುಬಿಟ್ಟರು. ನೋವಿನಿಂದ ತುಂಬಿದ ಹುಡುಗರ ಈ ಗಾಂಭೀರ್ಯವನ್ನು ನೋಡಿ ದೊಡ್ಡವರಿಗೆ ಬಹಳ ದುಃಖವಾಗುತ್ತಿತ್ತು.

ಈ ದುಃಖದ ಮಧ್ಯೆ ಆ ಹುಡುಗರಿಗೆ ಇದ್ದ ಸಮಾಧಾನ ಒಂದೇ :--- ಸೀತಾರಾಮುವಿನ ಅಗಲಿಕೆಯಿಂದ ಅನ್ನ ನೀರು ಬಿಟ್ಟು ಕೊರಗುತ್ತಿರುವ ಲಕ್ಷ್ಮಿಯನ್ನು ಸಮಾಧಾನ ಮಾಡುವುದು. ಲಕ್ಷ್ಮಿಯನ್ನು ತಾವು ಸಮಾಧಾನಮಾಡಿ ಅವಳನ್ನು ಚೆನ್ನಾಗಿ ನೋಡಿಕೊಳ್ಳದಿದ್ದರೆ ಸೀತಾರಾಮುವು ತಮ್ಮಲ್ಲಿ ಇಟ್ಟಿದ್ದ ಸ್ನೇಹಕ್ಕೆ ತಾವೇನು ಕೊಟ್ಟಂತಾಯಿತು? ಈ ರೀತಿ ಯೋಚಿಸಿ, ಹುಡುಗರು ಲಕ್ಷ್ಮಿಯನ್ನು ಸಂತೈಸುವರು. ಅವಳನ್ನು ಸಂತೈಸುವ ಭರದಲ್ಲಿ ತಾವೂ ಸ್ವಲ್ಪ ಸ್ವಲ್ಪವಾಗಿ ಸಮಾಧಾನಮಾಡಿಕೊಳ್ಳುವರು.

## ರಾಮಚಂದ್ರನ ಮದುವೆ

ಸೀತಾರಾಮುವಿನ ಅಗಲಿಕೆಯಿಂದ ರಾಮಚಂದ್ರನಿಗೆ ಕಳಸಾಪುರ ಶೂನ್ಯವಾಗಿ ಕಂಡಿತು. ಸೀತಾರಾಮುವಿಲ್ಲದೆ ಅವನು ಆ ಊರಿನಲ್ಲಿ ಒಂದು ದಿನವೂ ಇರಲಾರ. ಸ್ನೇಹಿತನ ಮಾತಿನಂತೆ ಲಕ್ಷ್ಮಿಯನ್ನು ಸಮಾಧಾನ ಮಾಡುವುದರಲ್ಲಿ ಮನಸ್ಸಿಗೆ ಶಾಂತಿಯನ್ನು ತಂದುಕೊಳ್ಳುವನು. ಯಾವಾಗಲೂ ಅವಳೊಡನೆಯೇ ಇದ್ದು ಅವಳನ್ನು ಸಂತೋಷವಾಗಿಟ್ಟಿರಲು ಪ್ರಯತ್ನಿಸುವನು.

ಹೀಗೆ ಒಂದೆರಡು ತಿಂಗಳು ಕಳೆಯುವುದರಲ್ಲಿ ಕೃಷ್ಣಶಾಸ್ತ್ರಿಗಳು ಕಾಶಿಯಾತ್ರೆ ಮಾಡಿಕೊಂಡು ಕಳಸಾಪುರಕ್ಕೆ ಬಂದರು. ಅಜ್ಜನನ್ನು ನೋಡಿ ರಾಮಚಂದ್ರನಿಗೆ ಸ್ವಲ್ಪ ಸಮಾಧಾನವಾಯಿತು.

ಕೃಷ್ಣಶಾಸ್ತ್ರಿಗಳು ರಾಮಚಂದ್ರನನ್ನು ಮೈಸೂರಿಗೆ ಕರೆದುಕೊಂಡು ಹೋಗುವುದಾಗಿ ಹೇಳಿದಾಗ ಕಳಸಾಪುರದ ಹುಡುಗರಿಗೆ ಸಿಡಿಲು ಬಡಿದಂತಾಯಿತು. ಸೀತಾರಾಮು ಸ್ವರ್ಗಸ್ಥನಾದ; ರಾಮಚಂದ್ರನೂ ಮೈಸೂರಿಗೆ ಹೋದರೆ ತಾವು ಕಳಸಾಪುರದಲ್ಲಿ ಇರುವುದು ಅಸಾಧ್ಯವಾಗುವುದೆಂದು ಹುಡುಗರು ದುಃಖಪಟ್ಟರು. "ರಾಮಚಂದ್ರ, ನಮ್ಮನ್ನು ಬಿಟ್ಟು ಹೋಗಬೇಡ" ಎಂದು ಅತ್ತರು.

"ಇಲ್ಲೇ ಇದ್ದುಬಿಡಿ" ಎಂದು ಕಳಸಾಪುರದ ಹಿರಿಯರೆಲ್ಲ ಕೃಷ್ಣಶಾಸ್ತ್ರಿಗಳಿಗೆ ಹೇಳಿದರು. ಆದರೆ ಶಾಸ್ತ್ರಿಗಳು ನಿಲ್ಲುವಂತಿರಲಿಲ್ಲ. ಮೈಸೂರಿನಲ್ಲಿ ಒಬ್ಬರು ಅರಸುಗಳಿಗೂ ಶಾಸ್ತ್ರಿಗಳಿಗೂ ಸ್ನೇಹವಿತ್ತು. ಶಾಸ್ತ್ರಿಗಳು ಮೈಸೂರಿಗೆ ಬರಬೇಕೆಂದು ಅವರು ಹಟ ಹಿಡಿದಿದ್ದರು. ಬರುವುದಾಗಿ ಶಾಸ್ತ್ರಿಗಳೂ ಅವರಿಗೆ ಮಾತು ಕೊಟ್ಟಿದ್ದರು.

ಶಾಸ್ತ್ರಿಗಳು ಮೈಸೂರಿಗೆ ಹೊರಡುವ ಮೊದಲು ರಾಮಚಂದ್ರನಿಗೆ ಮದುವೆ ಮಾಡಿದರು. ವಧು ಅನಾಥೆಯಾದ ಲಕ್ಷ್ಮಿ. ಸ್ನೇಹಿತನಿಗೆ ಕೊಟ್ಟ ಮಾತಿನಂತೆ ರಾಮಚಂದ್ರನು ನಡೆದುಕೊಂಡನು. ಊರಿನವರೆಲ್ಲ ಸೇರಿ ಈ ಮದುವೆಯನ್ನು ಬಹಳ ಅದ್ದೂರಿಯಿಂದ ಮಾಡಿದರು. ರಾಮಚಂದ್ರನನ್ನೂ ಲಕ್ಷ್ಮಿಯನ್ನೂ ಹಸೆಯ ಮೇಲೆ ನೋಡಿ ಹುಡುಗರಿಗಾದ ಆನಂದ ಅಷ್ಟಿಷ್ಟಲ್ಲ. ರಾಮಚಂದ್ರನ ಮದುವೆಯ ದಿನ ಕಳಸಾಪುರದ ಹುಡುಗರು ಮತ್ತೆ ನಕ್ಕು ನಲಿದರು. ಎಲ್ಲ ಕೆಲಸಗಳಿಗೂ ಮುಂದಾಗಿ ಓಡಾಡಿದರು.

ಶಾಸ್ತ್ರಿಗಳು ನೂತನ ದಂಪತಿಗಳೊಡನೆ ಚಿಕ್ಕಮಗಳೂರಿಗೆ ಹೊರಟರು. ಎಲ್ಲರೂ ಊರುಬಾಗಿಲವರೆಗೆ ಬಂದು ದುಃಖದಿಂದ ಲಕ್ಷ್ಮಿಯನ್ನೂ ರಾಮಚಂದ್ರನನ್ನೂ ಬೀಳ್ಕೊಟ್ಟರು. ತಮ್ಮೂರಿನ ಭಾಗ್ಯವೇ ಆ ಹುಡುಗರ ರೂಪದಲ್ಲಿ ಹೊರಟು ಹೋಗುತ್ತಿರುವಂತೆ ಅವರಿಗೆ ಕಂಡಿತು. ಹುಡುಗರು ಕಣಿವೆಯವರೆಗೂ ಅವರ ಜೊತೆಯಲ್ಲೇ ಹೋಗಿ ಅವರನ್ನು ಕಳುಹಿಸಿದರು. ಅವರು ತಿರುಗಿ ಬಂದಾಗ ಅತ್ತು ಅತ್ತು ಅವರ ಕಣ್ಣುಗಳು ಊದಿಕೊಂಡಿದ್ದವು. ನಿವಾರಿಸಲಾಗದ ಮಂಕು ಕಳಸಾಪುರವನ್ನು ಕವಿದಂತೆ ಅವರಿಗೆ ತೋರಿತು.

## — ಕಳಸಾಪುರದ ಕಥೆ —

ಬಾಬಾಬುಡನ್ ಗಿರಿಯ ಶಾಖೆಯಂತಿರುವ ರಂಗನಗಿರಿಯ ಬುಡದಲ್ಲಿ, ಚಿಕ್ಕಮಗಳೂರಿನ ಆಗ್ನೇಯಕ್ಕೆ ಹದಿನಾಲ್ಕು ಮೈಲಿ ದೂರದಲ್ಲಿ ಕಳಸಾಪುರ ಇದೆ. ಹೊಯ್ಸಳ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಳೆಯಬೀಡು ಈ ಊರಿನ ಆಗ್ನೇಯದಲ್ಲಿ ಸುಮಾರು ಎಂಟು ಹತ್ತು ಮೈಲಿ ಅಂತರದಲ್ಲಿದೆ.

ಹಿಂದೆ, ಒಂದು ಕಾಲದಲ್ಲಿ ಕಳಸಾಪುರವು ಒಂದು ಬಲವಾದ ಕೋಟೆಯಾಗಿತ್ತೆಂಬುದಕ್ಕೆ ಅನೇಕ ಕುರುಹುಗಳಿವೆ. ಹೊಯ್ಸಳರು ಕಟ್ಟಿಸಿದ ಒಂದು ಈಶ್ವರ ದೇವಸ್ಥಾನ ಇಲ್ಲಿದೆ. "ಅಡಾವುಡಿ"ಯ ಕಾಲದಲ್ಲಿ, ಅಂದರೆ, ೧೭೬೫---೭೦ರ ಸಮಯದಲ್ಲಿ ಕಳಸಾಪುರವು ತರೀಕೆರೆಯ ನಾಯಕರಿಗೆ ಸೇರಿದ್ದಿತೆಂದೂ ರಂಗಪ್ಪನಾಯಕರು ಆಗಾಗ್ಗೆ ಕಳಸಾಪುರಕ್ಕೆ ಬಂದಿರುತ್ತಿದ್ದರೆಂದೂ ಹೇಳುತ್ತಾರೆ. ಅವರು ತಮ್ಮ ವಾಸಕ್ಕೆಂದು ಕಟ್ಟಿಸಿದ ಮನೆಯ ಅವಶೇಷವನ್ನು ಈಗಲೂ ಅಲ್ಲಿ ತೋರಿಸುತ್ತಾರೆ.

ಕಳಸಾಪುರವು ಮಲೆನಾಡು ಬಯಲು ಸೀಮೆ ಸಂಧಿಸುವ ಜಾಗದಲ್ಲಿದೆ. ಆದರಿಂದ ಅಲ್ಲಿ ಅತಿವೃಷ್ಟಿ ಅನಾವೃಷ್ಟಿಗಳ ಭೀತಿಯಿಲ್ಲ.

ನೆಲವೋ ಫಲವತ್ತಾದ ಕಪ್ಪು ಭೂಮಿ. ಅಡಿಕೆ ತೆಂಗು ಬಾಳೆ ವೀಳೆಯದೆಲೆಯ ಹಂಬು—ಇವುಗಳಿಗೆ ಕಳಸಾಪುರದ ತೋಟದ ಬೈಲು ಹೆಸರಾದುದು. ಗದ್ದೆಗಳಲ್ಲಿ ಕಬ್ಬು ಕಡಲೆ ಗೋಧಿ ಹೆಸರು ಉದ್ದು ಮೆಂತ್ಯ ಕೊತ್ತುಂಬರಿ ನೀರುಳ್ಳಿ ಬೆಳ್ಳುಳ್ಳಿ—ಮೊದಲಾದುವನ್ನು ಬೆಳೆಯುವರು. ರಾಗಿ ಜೋಳ ಹತ್ತಿ ಹರಳು ಎಳ್ಳು ನವಣೆ ಸಾಸೆ ಅವರೆ ತೊಗರಿ ಹುರುಳಿ—ಈ ದವಸಗಳು ಹೊಲಗಳಲ್ಲಿ ಬೆಳೆಯುತ್ತಿದ್ದುವು.

ಕಳಸಾಪುರವು ನೂರ ನಲವತ್ತಯ್ದು ಮನೆಗಳ ಗ್ರಾಮ. ನಲವತ್ತು ಒಕ್ಕಲು ಬ್ರಾಹ್ಮಣರು. ಬ್ರಾಹ್ಮಣರು ತೋಟಗಳನ್ನು ಸ್ವಂತವಾಗಿ ಸಾಗುವಳಿ ಮಾಡುತ್ತ ಹೊಲಗದ್ದೆಗಳನ್ನು ವಾರಕ್ಕೋ ಗುತ್ತಿಗೆಗೋ ಕೊಡುತ್ತಿದ್ದರು. ಸ್ವಲ್ಪವೂ ಜಮೀನು ಇಲ್ಲದ ರೈತರು ಹೆಚ್ಚು ಜಮೀನು ಇದ್ದವರಿಂದ ಹೊಲಗದ್ದೆಗಳನ್ನು ವಾರ ಗುತ್ತಿಗೆಗೆ ಪಡೆದು ವ್ಯವಸಾಯ ಮಾಡು

ವರು. ವರ್ಷಕ್ಕೆ ಸಾಕಾಗುವಷ್ಟು ದವಸ ಧಾನ್ಯಗಳನ್ನು ಬೆಳೆದುಕೊಳ್ಳುವರು.

ಕೈಕಸುಬುಗಳಿಂದ ಜೀವಿಸುತ್ತಿದ್ದ ಕೆಲವು ಒಕ್ಕಲುಗಳೂ ಕಳಸಾಪುರದಲ್ಲಿದ್ದವು. ಅಗಸ, ಅಕ್ಕಸಾಲೆ, ಕಮ್ಮಾರ, ನೇಗಾರ, ಚಮ್ಮಾರ, ಬಡಗಿ, ನಾಯಿಂದ—ಇವರುಗಳು ತಮ್ಮ ತಮ್ಮ ಕಸುಬುಗಳಿಂದಲೇ ಜೀವನಾಧಾರಕ್ಕೆ ಬೇಕಾಗುವಷ್ಟು ದವಸ ಧಾನ್ಯ ಪಡೆಯುತ್ತಿದ್ದರು. ಅವರಿಗೆ ಪ್ರತಿ ಮನೆಯಲ್ಲೂ ವರ್ಷಕ್ಕೆ ಒಂದು ಗೊತ್ತಾದ ಪ್ರಮಾಣದಲ್ಲಿ ಮಿರಾಸೆ ಕೊಡುತ್ತಿದ್ದರು. ಜೊತೆಗೆ ಅವರು ಅಲ್ಪಸ್ವಲ್ಪ ವ್ಯವಸಾಯವನ್ನೂ ಮಾಡುತ್ತಿದ್ದರು.

ಕಳಸಾಪುರ ಸ್ವಯಂಪೂರ್ಣವಾಗಿತ್ತು. ಮಾನವನ ಬದುಕಿಗೆ ಅತ್ಯಗತ್ಯವಾದ ಎಲ್ಲ ವಸ್ತುಗಳೂ ಕಳಸಾಪುರದಲ್ಲೇ ಒದಗುತ್ತಿದ್ದವು. ಮನೆ ಮನೆಯಲ್ಲೂ ರಾಟೆಗಳಿಂದ ನೂಲು ತೆಗೆದು, ಮಗ್ಗಕ್ಕೆ ಕೊಟ್ಟು ನೇಯಿಸಿಕೊಳ್ಳುವರು. ಹೇರಳವಾಗಿ ಎಣ್ಣೆಯ ಬೀಜಗಳನ್ನು ಬೆಳೆಯುತ್ತಿದ್ದುದರಿಂದ ದೀಪಕ್ಕೆ ಎಣ್ಣೆಯ ಕೊರತೆ ಯಾವಾಗಲೂ ಉಂಟಾಗುತ್ತಿರಲಿಲ್ಲ. ರಾತ್ರಿಯ ವೇಳೆ ಪ್ರಯಾಣ ಮಾಡಬೇಕಾದರೆ ಬೆಳಕಿಗೆ ಗೊರವಿಯ ಕೊಳ್ಳಿಗಳನ್ನು ಬಳಸುವರು; ಚಕಮುಕಿಯಿಂದ ಬೆಂಕಿ ಮಾಡುವರು. ಚೌಳು ನೆಲದಲ್ಲಿ ಉಪ್ಪು ತಯಾರಿಸಿಕೊಳ್ಳುವರು. ಜೀವನಕ್ಕೆ ಬೇಕಾಗುವ ಆಹಾರ ಪದಾರ್ಥಗಳನ್ನೆಲ್ಲಾ ಬೆಳೆದುಕೊಳ್ಳುವರು. ತಾವು ಬೆಳೆದ ಪದಾರ್ಥಗಳನ್ನು ಇತರರಿಗೆ ಕೊಟ್ಟು ತಮ್ಮಲ್ಲಿಲ್ಲದ ಪದಾರ್ಥಗಳನ್ನು ಬದಲು ತೆಗೆದುಕೊಳ್ಳುವರು.

ಜನವೋ ಪಾಪಭೀರುಗಳು. ದೇವರಲ್ಲಿ ಅಚಲವಾದ ನಂಬುಗೆ ಉಳ್ಳವರು. ಯಾರಿಗಾದರೂ ಸಾಲ ಕೊಡಬೇಕಾದಾಗ ಆ ವ್ಯವಹಾರಕ್ಕೆ ಸೂರ್ಯ ಚಂದ್ರರೇ ಸಾಕ್ಷಿಗಳು. ಆದರೂ ಜನರು ಮೋಸವನ್ನು ಮನಸ್ಸಿನಲ್ಲೂ ಯೋಚಿಸುತ್ತಿರಲಿಲ್ಲ. ಎಲ್ಲರೂ ತಮ್ಮ ತಮ್ಮ ಕಸುಬುಗಳಲ್ಲಿ ನಿರತರಾಗಿ ಒಬ್ಬರೊಡನೊಬ್ಬರು ವಿಶ್ವಾಸದಿಂದ ಇರುವರು. ಎಲ್ಲರೂ ಕಷ್ಟಪಟ್ಟು ಕೆಲಸಮಾಡುತ್ತಿದ್ದುದರಿಂದ ಅವರಿಗೆ ಅನ್ನಕ್ಕೆ ಕೊರತೆಯಿಲ್ಲ. ತಾವು ಬೆಳೆದುದರಲ್ಲಿ ನಾಲ್ಕು ಜನಕ್ಕೆ ಕೊಟ್ಟು ಊಟ ಮಾಡಬೇಕೆಂಬ ಧರ್ಮಬುದ್ಧಿ, ವಿವಿಧ ಪಂಗಡಗಳವರಲ್ಲಿ ಪರಸ್ಪರ ಅಭಿಮಾನ, ವಿಶ್ವಾಸ, ಊರಿನ ಹಿರಿಯರಲ್ಲಿ ಗೌರವ, ಈ ಗುಣಗಳು ಕಳಸಾಪುರದ ಜನರಲ್ಲಿ ತುಂಬಿತ್ತು. ಏನಾದರೂ ವ್ಯವಹಾರ ಬಂದರೆ ಎಲ್ಲ ಪಂಗಡಗಳ ಹಿರಿಯರೂ ಪಂಚಾಯಿತಿ

ನೀರು ತೀರ್ಪುಕೊಟ್ಟು ಅದನ್ನು ಬಗೆಹರಿಸುವರು. ಆ ತೀರ್ಪಿನ ಮೇಲೆ ಯಾರೂ ಆಕ್ಷೇಪಿಸುವುದಿಲ್ಲ. ಏಕೆಂದರೆ, ಪಂಚಾಯಿತರ ತೀರ್ಮಾನಗಳು ನಿಷ್ಪಕ್ಷಪಾತವಾಗಿರುತ್ತಿದ್ದವು.

ಕಳಸಾಪುರವು ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಉತ್ತಮ ಸ್ಥಿತಿಯಲ್ಲಿದ್ದರೂ ಆತ್ಮತೃಪ್ತಿಯ ಮುಸುಕಿನಲ್ಲಿ ಅವರ ಮುಂದಿನ ದೃಷ್ಟಿಗೆ ಮಬ್ಬು ಕವಿದಿತ್ತು. ತನ್ನ ಸುತ್ತಣ ಪ್ರಪಂಚದಲ್ಲಿ ಏನು ಬದಲಾವಣೆಯಾಗುತ್ತಿದೆ ಎಂಬುದರ ಅರಿವು ಅದಕ್ಕಿಲ್ಲದೇ ಹೋಯಿತು ; ಭಾರತವನ್ನೆಲ್ಲ ಕೊಚ್ಚಿಕೊಂಡು ಬರುತ್ತಿದ್ದ ಪಾಶ್ಚಿಮಾತ್ಯ ಸಂಸ್ಕೃತಿಯ ಪೆರ್ದೆರೆಗಳು ತನ್ನ ಹತ್ತಿರ ಹತ್ತಿರ ಬರುತ್ತಿವೆ ಎಂಬುದು ತಿಳಿಯದೇ ಹೋಯಿತು. ಆದರಿಂದ, ಅಂತಹ ಪರಿಸ್ಥಿತಿಯೊದಗಿದಾಗ ಅದನ್ನು ಇದಿರಿಸಿ ನಿಲ್ಲುವ ಸಿದ್ಧತೆಯನ್ನು ಕಳಸಾಪುರದ ಹಿರಿಯರು ಮಾಡಿಕೊಳ್ಳಲಿಲ್ಲ.

ಕಳಸಾಪುರದ ಹಿರಿಯರು ತಮ್ಮ ಮುಂದಿನ ಪೀಳಿಗೆಗಳನ್ನು ವಿಧಿಯ ಕೈಗೊಂಬೆಗಳಾಗಿ ಬಿಟ್ಟುಬಿಟ್ಟರು!

## — ಬದಲಾವಣೆ —

ಶಾನುಭೋಗ್ ತಿಮ್ಮಪ್ಪಯ್ಯನವರು ಮಧ್ಯಾಹ್ನದ ಊಟವನ್ನು ಮುಗಿಸಿಕೊಂಡು ಹಜಾರದಲ್ಲಿ ಮೂರು ವರ್ಷದ ತಮ್ಮ ಮರಿಮಗನೊಡನೆ ಆಟವಾಡುತ್ತ ಕುಳಿತಿದ್ದಾಗ ಊರಿನ ಮುಖಂಡರಲ್ಲೊಬ್ಬರಾದ ರಾಮೇಗೌಡರು ಅಲ್ಲಿಗೆ ಬಂದರು.

"ಬನ್ನಿ ಗೌಡರೆ" ಎಂದು ಶಾನುಭೋಗರು ಅವರನ್ನು ಸ್ವಾಗತಿಸಿದರು. ರಾಮೇಗೌಡರು ಬಂದು ಹಜಾರದ ಒಂದು ಕಂಭವನ್ನು ಒರಗಿಕೊಂಡು ಶಾನುಭೋಗರಿಗೆ ಇದಿರಾಗಿ ಕುಳಿತುಕೊಂಡರು.

'ಇದೇನು ; ಇಷ್ಟು ದೂರ ಬಂದಿರಿ ?' ಎಂದು ತಿಮ್ಮಪ್ಪಯ್ಯನವರು ಕೇಳಿದರು.

ರಾಮೇಗೌಡರು ಒಂದು ಸಲ ನಿಟ್ಟುಸಿರು ಬಿಟ್ಟು 'ಇನ್ನೇನು ಇಲ್ಲ ; ಕೊಪ್ಪಲ ಗೌಡ್ರಮನೆ ಸಂಗತಿ. ನಿಮಗೂ ತಿಳಿದಿರಬಹುದು' ಎಂದರು.

'ಅವರ ಮನೆಯ ವ್ಯಾಜ್ಯ ತೀರ್ಮಾನಮಾಡಿ ಇನ್ನೂ ಒಂದು ವಾರ ಸಹ ಆಗಿಲ್ಲ. ಮತ್ತೇನು ಪುಕಾರು?' ಎಂದು ಶಾನುಭೋಗರು ಪ್ರಶ್ನಿಸಿದರು.

'ನಾವು ಹೋಗಿ ಪಂಚಾಯ್ತಿಮಾಡಿ ಯಾರಿಗೂ ಅನ್ಯಾಯ ಆಗದ ಹಂಗೆ ಆ ವ್ಯಾಜ್ಯ ಬಗೆಹರಿಸಿ ಬಂದೆವಲ್ಲ; ಅಲ್ಲೀಗ ಮುಂದ್ಕೆ ಭಾರಿ ಭಾರಿ ಒಳಸಂಚು ನಡೀತಾ ಇರೋಹಂಗೆ ತಿಳಿದುಬಂತು.'

'ಹಾಗೇನು? ನನಗೆ ಗೊತ್ತೇ ಇಲ್ಲವಲ್ಲ ಮತ್ತೆ?'

'ಗೌಡ್ರ ಕಿರಿಯ ಮಗ ಮಾಮಲೇದಾರ್ರವರೆಗೂ ದೂರು ತಗಂಡು ಹೋಗವ್ನಂತೆ, ತನಗೆ ಪಾಲು ಕೊಡಿಸಬೇಕು ಅಂತ.....ಅಂತೂ ಆ ಮನೇನ ನೆಟ್ಟಗೆ ನಿಲ್ಲಿಸಬೇಕು ಅಂತ ನಾವು ಮಾಡಿದ ಯತ್ನವೆಲ್ಲ ಫಲವಿಲ್ಲದೆ ಹೋಗೋ ಹಂಗಾಯ್ತು.'

ಹೇಳುತ್ತ ರಾಮೇಗೌಡರ ಧ್ವನಿ ಭಾರವಾಯಿತು. ಕಣ್ಣಿನಲ್ಲಿ ನೀರು ತುಂಬಿತು. ವಿಚಾರವನ್ನು ಕೇಳಿ ಶಾನುಭೋಗರಿಗೂ ದುಃಖವಾಯಿತು. ಅವರಿಗೆ ಬುದ್ಧಿಯ ಗುರುತು ಹತ್ತಿದಂದಿನಿಂದ ಸುತ್ತ ಹತ್ತು ಹಳ್ಳಿಯಲ್ಲಿ ಯಾರೂ ಪಂಚಾಯಿತರ ತೀರ್ಮಾನವನ್ನು ಮೀರಿ ಅದುವರೆಗೆ. ಸರ್ಕಾರಕ್ಕೆ ದೂರು ತೆಗೆದುಕೊಂಡು ಹೋಗಿರಲಿಲ್ಲ. ತಮ್ಮ ಊರಿನವನೊಬ್ಬ ಮಾಮಲೇದಾರರ ವರೆಗೆ ದೂರು ತೆಗೆದುಕೊಂಡು ಹೋದಮೇಲೆ ತಾವು ಅಷ್ಟು ದಿನ ಬದುಕಿದುದಕ್ಕಾದರೂ ಸಾರ್ಥಕವೇನು? ಎಂದು ಅವರು ಚಿಂತಿಸಿದರು.

'ಕೊಪ್ಪಲಗೌಡರ ಕಿರಿಯಮಗ, ರುದ್ರೇಗೌಡ ಹೀಗೆ ದಾರಿತಪ್ಪಿ ಹೋಗುವ ಹುಡುಗನಲ್ಲ.... ಬಹುಶಃ ಯಾರೋ ಅವನಿಗೆ ದುರಾಲೋಚನೆ ಹೇಳಿರಬಹುದು. ಸಂಜೆಗೆ ಕರೆಸಿ ಬುದ್ಧಿ ಹೇಳುತ್ತೇನೆ' ಎಂದರು ಶಾನುಭೋಗರು.

'ಏನಾದರೂ ಮಾಡಿ ಆ ಮನೇನ ನಿಲ್ಲಿಸಬೇಕು. ಏನೋ ಎಲ್ಲಾ ಒಟ್ಟಾಗಿ ಇರೋ ಹೊತ್ತಿಗೆ ಅವರೂ ಒಸಿ ಗಣ್ಯವಾಗಿದಾರೆ. ಪಾಲು ಆಯ್ತೋ-ಮೂರನೇ ದಿನವೇ ಅವರನ್ನು ಯಾರೂ ಕೇಳುವುದಿಲ್ಲ' ಎಂದರು ರಾಮೇಗೌಡರು.

ಕಳಸಾಪುರದ ನೆರೆಯಲ್ಲಿ ದಾಸೇಗೌಡನ ಕೊಪ್ಪಲು ಎಂಬ ಒಂದು ಹಳ್ಳಿ ಇತ್ತು. ಅದನ್ನು ಒಂದು ಹಳ್ಳಿ ಎಂದು ಹೇಳುವುದಕ್ಕಿಂತ ಒಂದು

ಮನೆ ಎಂದು ಹೇಳುವುದೇ ನ್ಯಾಯುವಾದುದು. ಏಕೆಂದರೆ ಆ ಹಳ್ಳಿಯಲ್ಲಿದ್ದವರೆಲ್ಲರೂ ಒಂದೇ ಮನೆಯವರು. ಅವರಿಗೆಲ್ಲರಿಗೂ ಒಬ್ಬನೇ ಯಜಮಾನ; ಒಂದೇ ವಹಿವಾಟು. ಎಲರಿಗೂ ಒಂದೇ ಕಡೆಯಲ್ಲಿ ಊಟೋಪಚಾರ; ಹಿರಿಯ ಗೌಡನ ಮಾತಿನಂತೆ ಎಲ್ಲರೂ ಮರುಮಾತಾಡದೆ ನಡೆದುಕೊಳ್ಳುವರು. ಒಮ್ಮನದಿಂದ ಎಲ್ಲರೂ ಕೆಲಸಮಾಡುತ್ತಿದ್ದುದರಿಂದ ಸಮೃದ್ಧಿಯಾಗಿ ಬೆಳೆದು ಹತ್ತಾರು ಸಂಸಾರಗಳಿಗೆ ಆಶ್ರಯ ನೀಡಿದ್ದರು. ಗದ್ದೆ ತೋಟ, ದನಕರು ಆಳುಕಾಳುಗಳಲ್ಲಿ ಅವರನ್ನು ಸರಿದೂಗುವವರು ಸುತ್ತ ಹತ್ತು ಹಳ್ಳಿಯಲ್ಲಿ ಯಾರೂ ಇರಲಿಲ್ಲ. ರಂಗಪ್ಪನಾಯ್ಕರ 'ಅಡಾವುಡಿ'ಯ ಸಮಯದಲ್ಲಿ ಸಿಕ್ಕಿದ ಕೊಪ್ಪರಿಗೆ ನಿಧಿ ಅವರಲ್ಲಿ ಇರುವುದೆಂದು ಜನ ಆಡಿಕೊಳ್ಳುತ್ತಿದ್ದರು. ಅಂತಹ ಸಂಸಾರದಲ್ಲಿ ಅಣ್ಣತಮ್ಮಂದಿರಿಗೆ ಕಲಹ ಮೊದಲಾಗಿದ್ದುದನ್ನು ಶಾನುಭೋಗ್ ತಿಮ್ಮಪ್ಪಯ್ಯನವರೂ ರಾಮೇಗೌಡರೂ ಬಹಳ ಪ್ರಯತ್ನಪಟ್ಟು ಸಮಾಧಾನ ಮಾಡಿದ್ದರು. ಆದರೆ ಸ್ವಾರ್ಥಿಗಳು ಕೆಲವರು ಅವರ ಪ್ರಯತ್ನವು ವಿಫಲವಾಗುವಂತೆ ಮಾಡಿದ್ದರು.

ಈ ವಿಚಾರರವನ್ನು ಅವರಿಬ್ಬರೂ ಸ್ವಲ್ಪಹೊತ್ತು ಮಾತಾಡುತ್ತ ಇದ್ದರು. ಕಡೆಗೆ 'ದೇವರ ಇಚ್ಛೆ ಹೇಗೆ ಇದೆಯೋ ಹಾಗೇ ಆಗುತ್ತದೆ' ಎಂದರು ಶಾನುಭೋಗರು.

ರಾಮೇಗೌಡರು 'ಆತನ ಇಚ್ಛೆಗೆ ಯಾರು ಎದುರು' ಎಂದು ತಿಮ್ಮಪ್ಪಯ್ಯನವರ ತೀರ್ಮಾನಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟರು.

ಅಷ್ಟರಲ್ಲಿ ಮಾಮಲೇದಾರರ ಕಛೇರಿಯ ಗುಮಾಸ್ತರಾದ ನಾರಾಯಣಾಚಾರ್ಯರು ಒಳಗೆ ಬಂದರು. ಅವರನ್ನು ಕಂಡು ಶಾನುಭೋಗರೂ ರಾಮೇಗೌಡರೂ ಎದ್ದು ಕೈಮುಗಿದು ಸ್ವಾಗತಿಸಿದರು.

ನಾರಾಯಣಾಚಾರ್ಯರು ಕೈಕಾಲು ತೊಳೆದುಕೊಂಡು ಚಾಪೆಯ ಮೇಲೆ ಕುಳಿತುಕೊಳ್ಳುವ ಹೊತ್ತಿಗೆ ಒಳಗಿನಿಂದ ಒಂದು ತಂಬಿಗೆಯಲ್ಲಿ ಸಿಹಿನೀರು, ಒಂದು ತಾಮ್ರದ ಪಂಚಪಾತ್ರೆ ಮತ್ತು ಬೆಲ್ಲ ಸಿದ್ಧವಾಗಿತ್ತು. ಅವರು ನೀರುಬೆಲ್ಲದ ಸೇವನೆಯಿಂದ ಬಾಯಾರಿಕೆಯನ್ನು ನಿವಾರಿಸಿಕೊಂಡರು. ಆಚಾರ್ಯರ ಹೆಣೆಯ ಮೇಲಿನ ಲಾಂಛನದಿಂದ ಅವರಿಗೆ ಊಟವಾಗಿರುವು

ದೇಬುದನ್ನು ತಿಳಿದು 'ಈಗ ತಾವು ಎಲ್ಲಿಂದ ಬರೋಣವಾಯಿತು?' ಎಂದರು ತಿಮ್ಮಪ್ಪಯ್ಯನವರು.

'ನಿನ್ನೆಯ ಸಂಜೆ ಮರಲೆಗೆ ಬಂದಿದ್ದೆ, ಅಲ್ಲಿಂದ ಊಟ ಮುಗಿಸಿಕೊಂಡ ವನೇ ನೇರವಾಗಿ ಇಲ್ಲಿಗೆ ಬಂದೆ' ಎಂದರು ಆಚಾರ್ಯರು. ಲೋಕಾಭಿರಾಮ ವಾದ ನಾಲ್ಕುಮಾತು ನಡೆದಮೇಲೆ ಆಚಾರ್ಯರು ತಾವು ತಂದಿದ್ದ ಕಟ್ಟಿನಿಂದ ಒಂದು ಕಾಗದವನ್ನು ತೆಗೆದು ತಿಮ್ಮಪ್ಪಯ್ಯನವರಿಗೆ ಕೊಟ್ಟರು.

ಕಾಗದವನ್ನು ಓದುತ್ತ ಓದುತ್ತ ಶಾನುಭೋಗರ ಮನಸ್ಸಿನಲ್ಲಿ ಹುಟ್ಟಿದ ಉದ್ವೇಗ ಮುಖದಲ್ಲಿ ತೋರಲು ಮೊದಲಿಟ್ಟಿತು. ಅವರು ಕಾಗದವನ್ನು ಪೂರ್ಣವಾಗಿ ಓದಿದಮೇಲೆ 'ನೋಡಿ, ರಾಮೇಗೌಡ್ರೆ; ಜನ ಉಪ್ಪು ತಯಾರು ಮಾಡಬಾರದಂತೆ ಇನ್ನು ಮೇಲೆ. ಹಾಗಂತ ಮಾಮಲೇದಾರರ ಹುಕುಂ ಬಂದಿದೆ' ಎಂದರು.

'ಹಂಗಾದರೆ ಉಪ್ಪು ಇಲ್ಲದೆ ಊಟಮಾಡಿ ಅಂತ ಹೇಳ್ತರಾ ಧಣಿ ಗಳು?' ಎಂದು ರಾಮೇಗೌಡರು ಆಶ್ಚರ್ಯದಿಂದ ಪ್ರಶ್ನೆಮಾಡಿದರು.

'ಹಾಗೇನುಇಲ್ಲ. ಚೌಳಿನಿಂದ ಹಳ್ಳಿಗಳಲ್ಲಿ ತಯಾರಾಗುತ್ತಿರುವ ಉಪ್ಪು ಅಷ್ಟು ಚೆನ್ನಾಗಿರುವುದಿಲ್ಲ. ಅಲ್ಲದೇ ಹಾಗೆ ತಯಾರುಮಾಡುವುದೂ ಕಷ್ಟ. ಅದರಿಂದ ಸಮುದ್ರದ ಹತ್ತಿರ ತಯಾರುಮಾಡಿದ ಉಪ್ಪನ್ನು ತಂದುಕೊಡು ವುದಕ್ಕೆ ಏರ್ಪಾಡು ನಡೀತಾ ಇದೆ' ಎಂದು ಮಾಮಲೇದಾರರ ಗುಮಾಸ್ತರು ಸಮಾಧಾನ ಹೇಳಿದರು.

'ಹಂಗಾದರೆ ಒಂದು ರೀತಿ ಮಾಡಬಹುದಲ್ಲ? ಯಾರಿಗೆ ಸಮುದ್ರದ ಉಪ್ಪು ಬೇಕೋ ಅವರು ಅದನ್ನು ಕೊಳ್ಳಲಿ. ಬೇಡದವರು ಚೌಳಿನಿಂದ ಉಪ್ಪು ಮಾಡಿಕೊಳ್ಳಲಿ!' ಎಂದರು ರಾಮೇಗೌಡರು.

'ಯಾರೂ ಚೌಳಿನಿಂದ ಉಪ್ಪು ತಯಾರು ಮಾಡಲೇಕೂಡದು. ಹೀಗಂತ ಸರ್ಕಾರದ ಹುಕ್ಕುಂ ಆಗಿದೆ. ಇದು ಕುಂಪಣೀ ಜನದ ಸರ್ಕಾರ. ನಮ್ಮ ಮಹಾರಾಜರ ಸರ್ಕಾರವಾದರೂ ಆಗಿದ್ರೆ ಇದು ಕಷ್ಟ, ಇದು ಸುಖ ಅಂತ ಹೇಳಿಕೊಳ್ಳಬಹುದಾಗಿತ್ತು' ಎಂದರು ಆಚಾರ್ಯರು.

ಮಹಾರಾಜರ ಮಾತು ಬಂದುದರಿಂದ ಮಾತು ಆಕಡೆಗೆ ಹರಿಯಿತು.

'ಬುದ್ಧೀ, ಮಹಾರಾಜರಿಗೆ ತಿರುಗಿ ರಾಜ್ಯಕೊಡೋ ಮಾತು ಎಲ್ಲೀ ವರೆಗೆ ಬಂತು ?' ಎಂದರು ರಾಮೇಗೌಡರು.

'ನಮ್ಮ ಮಹಾರಾಜರಿಗೆ ರಾಜ್ಯ ಪುನಃ ಬಂದ ಸಮಾಚಾರ ಕೇಳಿ ಪ್ರಾಣ ಬಿಡಬೇಕು ಅಂತ ಇದೀನಿ. ಈ ನನ್ನ ಆಸೆ ಪೂರ್ಣವಾಗುತ್ತದೋ ಇಲ್ಲವೊ, ಕಾಣೆ' ಎಂದರು ತಿಮ್ಮಪ್ಪಯ್ಯನವರು ಭಾರವಾದ ಹೃದಯದಿಂದ.

'ನಾಲ್ಕೈದು ವರ್ಷದಿಂದ ಈಗ ಕೊಟ್ಟಿವು ಆಗ ಕೊಟ್ಟಿವು ಅಂತ ಕಾಲ ನೂಕುತ್ತಾ ಇದಾರೆ. ಈಸಲ ಸೀಮೆಯವರೆಗೂ ಹೋಗಿದೆ ಈ ವಿಚಾರ. ಮಹಾರಾಜರಿಗೆ ಅನುಕೂಲವಾಗಿ ತೀರ್ಮಾನವಾಗಬಹುದು ಅಂತ ಎಲ್ಲಾ ಆಸೆ ಇಟ್ಟುಕೊಂಡಿದಾರೆ' ಎಂದರು ನಾರಾಯಣಾಚಾರ್ಯರು.

'ಚಾಮುಂಡಾಂಬಿಕೆ ಕೃಪೆ ಮಾಡಬೇಕು' ಎಂದರು ತಿಮ್ಮಪ್ಪಯ್ಯ ನವರು.

'ಆ ಮಹಾತಾಯಿ ನಮ್ಮ ಮಹಾರಾಜರ ಮನೆತನವನ್ನು ತಣ್ಣಗೆ ಇಟ್ಟಿರಲಿ' ಎಂದರು ರಾಮೇಗೌಡರು.

'ಶಾನುಭೋಗರೇ, ನಿಮಗೆ ಒಂದು ಅಪರೂಪದ ವಸ್ತುವನ್ನು ತಂದಿ ದೇನೆ' ಎಂದು ಹೇಳಿ ಆಚಾರ್ಯರು ತಾವು ತೊಟ್ಟುಕೊಂಡಿದ್ದ ಅಂಗಿಯ ಕಿಸೆಯಿಂದ ಎರಡು ಸಣ್ಣ ಸಣ್ಣ ಪೆಟ್ಟಿಗೆಗಳನ್ನು ಹೊರಗೆ ತೆಗೆದಿಟ್ಟರು. ಶಾನು ಭೋಗರು ಅದನ್ನು ಕೈಗೆ ತೆಗೆದುಕೊಂಡು ತಿರುಗಿಸಿ ತಿರುಗಿಸಿ ನೋಡಿದರೂ ಅವು ಏನೆಂದು ಮಾತ್ರ ಗೊತ್ತಾಗಲಿಲ್ಲ.

'ತನ್ನಿ. ಹಾಗಲ್ಲ ಅದನ್ನು ನೋಡುವುದು' ಎಂದು ಹೇಳಿ ಆಚಾ ರ್ಯರು ಒಂದು ಪೆಟ್ಟಿಗೆಯನ್ನು ತೆಗೆದುಕೊಂಡು ಅದರೊಳಗಿನಿಂದ ಒಂದು ಕಿರುಬೆರಳು ಉದ್ದದ, ಹಂಚಯ ಕಡ್ಡಿಯ ದಪ್ಪವಿದ್ದ ಒಂದು ಕಡ್ಡಿಯನ್ನು ಹೊರಗೆ ತೆಗೆದುಕೊಂಡರು. ಆ ಕಡ್ಡಿಯ ಒಂದು ತುದಿಯಲ್ಲಿ ಕೆಂಪಗೆ ಏನನ್ನೋ ಮೆತ್ತಿರುವಂತೆ ಇತ್ತು. ಅವರು ಆ ಕಡ್ಡಿಯನ್ನು ಪೆಟ್ಟಿಗೆಯ ಮೇಲೆ ತರಕಲು ತರಕಲಾಗಿದ್ದ ಕಡೆ ಸ್ವಲ್ಪ ತಿಕ್ಕಿದರು. ಹಾಗೆ ತಿಕ್ಕಿದರೋ ಇಲ್ಲವೋ ಆ ಕಡ್ಡಿಯು ಹತ್ತಿಕೊಂಡು ಉರಿಯಲಾರಂಭಿಸಿತು. ಅದನ್ನು

ನೋಡಿ ಶಾನುಭೋಗರೂ ರಾಮೇಗೌಡರೂ ತಮ್ಮ ಕಣ್ಣುಗಳನ್ನು ತಾವೇ ನಂಬದೇ ಹೋದರು ! ನಾರಾಯಣಾಚಾರ್ಯರು ಮತ್ತೊಂದು ಕಡ್ಡಿಯನ್ನು ಗೀರಿ ಬೆಂಕಿಯನ್ನು ಮಾಡಿ ತೋರಿಸಿದರು.

'ಆಶ್ಚರ್ಯ ! ಒಂದು ಸಣ್ಣ ಪೆಟ್ಟಿಗೆಯಲ್ಲಿ ಎಂತಹ ಅದ್ಭುತ ಅಡಗಿ ಕುಳಿತಿದೆ !' ಎಂದರು ತಿಮ್ಮಪ್ಪಯ್ಯನವರು.

'ನೋಡಿದಿರಾ ಕುಂಪಣಿಯವರ ಶಕ್ತಿಯನ್ನು! ಬೆಂಕಿಯನ್ನು ಹಿಡಿದು ಪೆಟ್ಟಿಗೆಯಲ್ಲಿ ಕೂಡಿ ಯಾವಾಗ ಬೇಕಾದರೆ ಆಗ ಅದರ ಉಪಯೋಗವನ್ನು ಪಡೆಯುವ ಹಾಗೆ ಮಾಡಿದಾರಲ್ಲ ?' ಎಂದರು ಆಚಾರ್ಯರು.

'ಎತ್ತು ಕುದುರೆ ಯಾವದನ್ನು ಕಟ್ಟದೆ ಒಂದು ತರಹ ಗಾಡಿ ನಡೆಸುತಾರಂತೆ ? ಅದರಲ್ಲಿ ನೂರಾರು ಜನ ಕೂರಬಹುದಂತೆ ? ಇದು ನಿಜವೇನು ಸ್ವಾಮಿ ?' ಎಂದರು ರಾಮೇಗೌಡರು.

'ಹಾಗಂತ ಕೇಳಿದೆ. ಆದರೆ ನಾನೂ ನೋಡಿಲ್ಲ. ಅಂತಹ ಗಾಡಿ ಆಗಲೇ ಅರಸೀಕೆರೇವರೆಗೂ ಬಂದಿದೆಯಂತೆ' ಎಂದರು ಗುಮಾಸ್ತರು.

ಕಡ್ಡಿಯನ್ನು ಗೀರಿ ಬೆಂಕಿಯನ್ನು ಬರಿಸುವ ಯಕ್ಷಿಣಿಯನ್ನು ಊರಿನವರಿಗೆಲ್ಲ ತೋರಿಸುವುದರಲ್ಲಿ ಗುಮಾಸ್ತರು ಆ ಸಂಜೆಯನ್ನು ಬಹಳ ಸಂತೋಷದಿಂದ ಕಳೆದರು.

## — ಐವತ್ತು ವರ್ಷಗಳಲ್ಲಿ —

ರಾಮಚಂದ್ರನು ಮೈಸೂರಿಗೆ ಹೊರಟು ಹೋದಮೇಲೆ ಕಳಸಾಪುರಕ್ಕೆ ಮಂಕು ಕವಿದಂತಾಯಿತು. ಹುಡುಗರಲ್ಲಿ ಉತ್ಸಾಹವಿಲ್ಲ; ಆಟಗಳಲ್ಲಿ ಆಸಕ್ತಿಯಿಲ್ಲ; ಚೇಷ್ಟೆಮಾಡಲು ಮನಸ್ಸಿಲ್ಲ. ಹುಡುಗರು ಚೇಷ್ಟೆ ಮಾಡುತ್ತಿರಬೇಕೆಂದೂ ಆಟವಾಡದೆ ಅವರು ಮಂಕರಂತಿರಬಾರದೆಂದೂ ದೊಡ್ಡವರೇ ಅವರಿಗೆ ಆಗಾಗ ಪ್ರೋತ್ಸಾಹ ಕೊಡುವರು. ಆದರೆ ಹುಡುಗರು ಉತ್ಸಾಹಹೀನರಾಗಿ ದಿನದಿನಕ್ಕೂ ಮಂಕರಂತಾಗುತ್ತಿದ್ದರು.

ಹೀಗೆ ಎರಡು ಮೂರು ವರ್ಷ ಕಳೆಯಿತು ಎನ್ನುವುದರೊಳಗೆ ಧಾತು ಈಶ್ವರದ ಕ್ಷಾಮ ಬಂದಿತು. ಒಂದೇ ಸಮನೆ ಎರಡು ಮೂರು ವರ್ಷಗಳು ಮಳೆಯಾಗದೆ ಹೋದುದರಿಂದ ಹೊಟ್ಟೆಗಿಲ್ಲದೆ ಅನೇಕ ಪ್ರಜೆ ಸಾವಿಗೆ ಈಡಾಯಿತು. ಜನರು ತಮ್ಮಲ್ಲಿದ್ದ ಬೆಳ್ಳಿ ಬಂಗಾರವನ್ನೆಲ್ಲ ಚೂರುರೊಟ್ಟಿಗೆ ಪ್ರತಿಯಾಗಿ ಕೊಡುತ್ತಿದ್ದರು. ಈ ಬರದೊಡನೆ ಅನೇಕ ಪಿಡುಗುಗಳೂ ಪ್ರಾರಂಭವಾದವು. ಕ್ಷಾಮ ಮುಕ್ತಾಯವಾದಾಗ ಕಳಸಾಪುರದ ಜನಸಂಖ್ಯೆ ಅರ್ಧಕ್ಕೆ ಇಳಿದಿತ್ತು. ಮುಖಂಡರಲ್ಲಿ ಅನೇಕರು ಮೃತ್ಯುವಶವಾಗಿದ್ದರು. ಊರು ಹಾಳು ಹಾಳು ಸುರಿಯುತ್ತಿತ್ತು.

ಕ್ಷಾಮ ಕಳೆಯಿತು ಎನ್ನುವಷ್ಟರಲ್ಲಿ ಕಳಸಾಪುರಕ್ಕೆ ಮತ್ತೊಂದು ಅನಿಷ್ಟ ಸಂಭವಿಸಿತು. ಕೆರೆಯ ಏರಿ ಒಂದು ಕಡೆ ಬಿರುಕುಬಿಟ್ಟಿತ್ತು. ಕೆರೆಯ ನೀರು ಹೋದಾಗ ಊರಿನವರೆಲ್ಲ ಸೇರಿ ಕೆರೆ ಅಂಗಳದಲ್ಲಿ ಗುಂಡಿಗಳನ್ನು ತೋಡಿ ಆ ಮಣ್ಣನ್ನು ಏರಿಗೆ ಹಾಕುತ್ತಿದ್ದರು. ಇದರಿಂದ ಕೆರೆ ಆಳವಾಗುತ್ತಿದ್ದುದಲ್ಲದೆ ಏರಿಯೂ ಭದ್ರವಾಗಿರುತ್ತಿತ್ತು. ನಾಲ್ಕೈದು ವರ್ಷಗಳಿಂದ ಅಂತಹ ಕಾಮಗಾರಿಕೆ ನಡೆದಿರಲಿಲ್ಲ. ಆದುದರಿಂದ ವಿಕ್ರಮ ಸಂವತ್ಸರದಲ್ಲಿ ಬಂದ ಭಾರಿ ಮಳೆಯಲ್ಲಿ ಕೆರೆಗೆ ವಿಪರೀತ ನೀರು ಬಂದು ಏರಿ ಬಿರುಕು ಬಿಟ್ಟ ಕಡೆ ಒಡೆದುಹೋಯಿತು. ಕಳಸಾಪುರದ ತೋಟದ ಬೈಲು ನೀರು ತುಂಬಿ ಸಂಪೂರ್ಣ ನಾಶವಾಯಿತು. ಭಯಂಕರವಾದ ಬಡತನ ಕಳಸಾಪುರವನ್ನು ಆವರಿಸಿತು.

ಇಷ್ಟರಲ್ಲಿ ಪಾಶ್ಚಿಮಾತ್ಯ ಆಡಳಿತದ ಪ್ರಭಾವ ಹಳ್ಳಿ ಹಳ್ಳಿಯನ್ನೂ ತಾಕಿತು. ಹಳ್ಳಿಯ ಕಸುಬುಗಳು ಮೂಲೆಗೆ ಬಿದ್ದವು. ರಾಟೆಗಳಿಗೆ ಗೆದ್ದಲು ಹಿಡಿಯಿತು. ಕೈಮಗ್ಗಗಳನ್ನು ಕೇಳುವವರೇ ಇಲ್ಲದಂತಾಯಿತು. ಜನರಿಗೆ ಸುಲಭವಾಗಿ ಮಿಲ್ಲುಬಟ್ಟೆಗಳು ದೊರಕುತ್ತಿದ್ದವು. ದೀಪಕ್ಕೆ ಹರಳೆಣ್ಣೆ, ಹೊಂಗೆಯ ಎಣ್ಣೆಯನ್ನು ಉಪಯೋಗಿಸುವುದು ಹೋಗಿ ಚಿಮಣಿ ಎಣ್ಣೆ (ಸೀಮೆ ಎಣ್ಣೆ) ಬಂದಿತು. ಹಳ್ಳಿಯಲ್ಲೇ ಉಪ್ಪು ಮಾಡಿಕೊಳ್ಳುವುದು ನಿಂತು ಹೋಯಿತು. ಜನ ದುಡ್ಡು ಕೊಟ್ಟು ಕೊಳ್ಳಬೇಕಾದ ಪದಾರ್ಥಗಳು ಹೆಚ್ಚಾದವು.

ಜನರ ಸಾಮಾಜಿಕ ಜೀವನವೂ ಅನೇಕ ಮಾರ್ಪಾಟು ಹೊಂದಿತು.

ಊರಿನ ಮುಖಂಡತ್ವ ಸ್ವಾರ್ಥಿಗಳ ಕೈಸೇರಿತು. ಪಂಚಾಯಿತರು ಪಕ್ಷ ಪಾತದ ತೀರ್ಪುಗಳನ್ನು ಕೊಡಲು ಮೊದಲು ಮಾಡಿದರು. ಬಡವರ ಮೇಲೆ ಅಡಳಿತ ನಡೆಸುವ ಮನೋವೃತ್ತಿ ಧನಿಕರಲ್ಲಿ ಬೆಳೆಯಿತು. ಬಡವರು ಐಶ್ವರ್ಯ ವಂತರ ವಿಚಾರದಲ್ಲಿ ಅಸಮಾಧಾನ ಹೊಂದಿದರು. ಧನಿಕರು ಮತ್ತು ಬುದ್ಧಿ ವಂತರು ಸ್ವಾರ್ಥಸಾಧನೆಗೆ ತೊಡಗಿದುದರಿಂದ ಜನರಲ್ಲಿ ಮನಸ್ತಾಪ ಹುಟ್ಟಿ, ಊರಿನ ವ್ಯವಹಾರ ಚಿಕ್ಕಮಗಳೂರಿನ ಕಚೇರಿಯನ್ನು ಮುಟ್ಟಿತು. ಜನರ ದುಡ್ಡು ಲಾಯರುಗಳ ಕೈಸೇರಲು ಮೊದಲಾಯಿತು. ಋಜುಮಾರ್ಗದಲ್ಲಿ ನ್ನಡೆ ಜನ ಬದುಕುವುದೇ ಅಸಾಧ್ಯವೋ ಎನ್ನುವಂತೆ ತೋರಿತು. ಜನರಲ್ಲಿ ದೈವಭಕ್ತಿ ಕಡಿಮೆಯಾಯಿತು; ಧರ್ಮಾಭಿಮಾನ ಹೋಯಿತು. ಮೋಸ ಕಪಟಗಳು ಎಲ್ಲೆಲ್ಲೂ ಹರಡಿದವು. ಪರಿಣಾಮವಾಗಿ ಊರಿನಲ್ಲಿ ಹೊಡೆ ದಾಟ, ದೊಂಬಿ, ಕೋರ್ಟು ವ್ಯವಹಾರ—ಇದು ಕಳಸಾಪುರದ ನಿತ್ಯದ ಜೀವನ ಕ್ರಮವಾಯಿತು. ದೇವಸ್ಥಾನಗಳು ಅಲಕ್ಷಿಸಲ್ಪಟ್ಟು ಅವು ಹಾಳು ಬಿದ್ದವು. ಗುಂಡುತೋಪುಗಳನ್ನು ಜನ ಸೌದೆಗಾಗಿ ಕಡಿದು ಹಾಳುಮಾಡಿ ದರು. ಸಾಲುಮರಗಳನ್ನು ಬೆಳೆಸಬೇಕೆಂಬ ಧರ್ಮಬುದ್ಧಿ ಹಳ್ಳಿಯ ಜನ ರಲ್ಲಿ ಮಾಯವಾಯಿತು. ಪಟ್ಟಣದವರ ಅನುಕರಣೆಯಿಂದ ಜನರಲ್ಲಿ ಅನೇಕ ಕೆಟ್ಟ ಅಭ್ಯಾಸಗಳು ತಲೆದೋರಿದವು. ಉತ್ತಮ ವರ್ಗದವರೂ ಬೀಡಿ ಸಿಗ ರೇಟು ಸೇದುವ ಅಭ್ಯಾಸ ಮಾಡಿದರು. ಕಾಫಿ ಮನೆಮನೆಯಲ್ಲೂ ಆಧಿಪತ್ಯ ಮಾಡತೊಡಗಿತು.

ಕಾಳ, ಅಯ್ಯ ಮುಂತಾದ ಹುಡುಗರು ದೊಡ್ಡವರಾಗಿ ಕಳಸಾಪುರದ ಹಿರಿಯರಾದಾಗ ಭೀಕರ ಬಡತನ ಊರನ್ನೇ ಆವರಿಸಿತ್ತು. ಅವರು ತಮ್ಮ ತಮ್ಮ ಹೊಟ್ಟೆಯ ಪಾಡಿನ ಕಡೆಗೇ ಸಂಪೂರ್ಣ ಗಮನಕೊಡಬೇಕಾಗಿದ್ದು ದರಿಂದ ಊರಿನ ವಿಚಾರಕ್ಕೆ ಅಷ್ಟಾಗಿ ಮನಸ್ಸು ಕೊಡಲಾಗಲಿಲ್ಲ. ಅದರಿಂದ ಊರಿನ ಆಗುಹೋಗುಗಳು ಸ್ವಾರ್ಥಿಗಳ ಕೈಸೇರಿ ಮೇಲೆ ತಿಳಿಸಿದಂತೆ ಊರಿ ನಲ್ಲಿ ಪಕ್ಷ ಪ್ರತಿಪಕ್ಷಗಳಿಗೆ ಕಾರಣವಾಯಿತು. ಇದನ್ನು ನೋಡಿ ಕಾಳ ಮೊದಲಾದವರು ಬಹಳ ನೊಂದುಕೊಂಡರು.

## — ಇಂದಿನ ಕಳಸಾಪುರ —

ಅವರ ಮುಂದಿನ ತಲೆಮಾರಿನಲ್ಲಿ, ಅಂದರೆ ಈಗ ನಡೆಯುತ್ತಿರುವ ಕಾಲದಲ್ಲಿ, ಕಳಸಾಪುರದ ಸ್ಥಿತಿ ಇನ್ನೂ ಭೀಕರವಾಗಿದೆ. ಬಡತನ ತನ್ನ ಪೂರ್ಣ ಪ್ರತಾಪವನ್ನು ತೋರಿದೆ. ಜನರಲ್ಲಿ ದ್ವೇಷಾಸೂಯೆಗಳು ಮಿತಿಯನ್ನು ಮುಟ್ಟಿವೆ ಮೌಢ್ಯ ಎಲ್ಲೆಲ್ಲೂ ಬಲವಾಗಿ ಬೇರುಬಿಟ್ಟಿದೆ. ಕಳಸಾಪುರದಿಂದ ಚಿಕ್ಕಮಗಳೂರಿನ ಕೋರ್ಟುಗಳಿಗೆ ಹೋಗುವ ವ್ಯವಹಾರಗಳು ಹೆಚ್ಚುತ್ತಿವೆ.

ಕಳಸಾಪುರಕ್ಕೊಂದು ಸರ್ಕಾರಿ ಶಾಲೆ ಬಂದಿದೆ. ದಿನದಿನವೂ ಊರಿಗೆ ಟಪ್ಪಾಲು ಬರುತ್ತಿದೆ. ಪ್ರತಿದಿನವೂ ಚಿಕ್ಕಮಗಳೂರಿನಿಂದ ಬಾಣಾವರಕ್ಕೆ ಹೋಗಿ ಬರುವ ಮೋಟರು ಕಳಸಾಪುರದಲ್ಲಿ ಸ್ವಲ್ಪಹೊತ್ತು ನಿಂತು ಹೋಗುತ್ತದೆ.

ಕಳಸಾಪುರದ ಕೆಲವು ಹುಡುಗರು ಊರು ಬಿಟ್ಟುಹೋಗಿ ಇಂಗ್ಲೀಷ್ ಶಾಲೆಗಳಲ್ಲಿ ಓದಿ ಹೊರಗೆ ಸರ್ಕಾರಿ ನೌಕರಿಯಲ್ಲಿದ್ದಾರೆ. ಅವರು ವರ್ಷಕ್ಕೆ, ಎರಡು ವರ್ಷಕ್ಕೆ ಒಂದು ಸಲ ಊರಿಗೆ ಬಂದು ಊರಿನ ಸ್ಥಿತಿಯನ್ನು ನೋಡಿ ಮರುಗುತ್ತಾರೆ. ತಮ್ಮ ಊರು ಅಭಿವೃದ್ಧಿಗೆ ಬರಬೇಕೆಂದು ಹಂಬಲಿಸುತ್ತಾರೆ. ಆದರೆ ಅವರು ಊರಲ್ಲಿ ನಿಲ್ಲುವುದಿಲ್ಲ.

ಕಳಸಾಪುರಕ್ಕೆ ಒಂದೆರಡು ಕನ್ನಡ ಪತ್ರಿಕೆಗಳು ಪ್ರಪಂಚದ ಸುದ್ದಿಗಳನ್ನು ಹೊತ್ತು ತರುತ್ತವೆ. ಜನರು ದೇವಸ್ಥಾನದ ಕಟ್ಟೆಯ ಮೇಲೋ ಸ್ಕೂಲು ಜಗುಲಿಯ ಮೇಲೋ ಕುಳಿತು ಪತ್ರಿಕೆಯನ್ನು ಓದಿ ತಮ್ಮ ದೃಷ್ಟಿಯಿಂದ ಪ್ರಪಂಚದ ಹಣೇಬರಹವನ್ನು ಅಳೆಯುತ್ತಾರೆ.

ಕಳಸಾಪುರದ ಬ್ರಾಹ್ಮಣರ ಕೇರಿಯಲ್ಲಿ ಅನೇಕ ಮನೆಗಳು ಹಾಳು ಬಿದ್ದಿರುವುದಾದರೂ ರೈತರ ಕೇರಿಗೆ ಅನೇಕ ಹೊಸ ಒಕ್ಕಲುಗಳು ಬಂದು ನೆಲಸಿವೆ. ಈಗಿರುವ ಇನ್ನೂರು ಒಕ್ಕಲುಗಳಲ್ಲಿ ೫-೬ ಒಕ್ಕಲುಗಳವರು ಮಾತ್ರ ಧನಿಕರಾಗಿದ್ದಾರೆ. ಅವರೇ ಕಳಸಾಪುರದ ಆಗುಹೋಗುಗಳಿಗೆ ಕಾರಣಭೂತರು. ಜನರಿಗೆ ದುಡ್ಡು ಬೇಕಾದರೆ ಅವರಲ್ಲಿಗೇ ಹೋಗಬೇಕು.

ಅವರು ಹೇಳಿದ ಬಡ್ಡಿ ಕೊಟ್ಟು, ಮನೆ ಮಠ ಅಡವು ಇಟ್ಟು ಅವರಿಂದ ಹಣ ತರಬೇಕು. ಅವರಿಂದ ಹಣ ತಂದವರು ತೀರಿಸಿದ ಮಾತೇ ಇಲ್ಲ ಅಡವು ಇಟ್ಟ ಆಸ್ತಿಗಳನ್ನು ಬಿಡಿಸಿಕೊಂಡುದೇ ಇಲ್ಲ.

ರೈತರು ಹಗಲೂ ರಾತ್ರಿ ಬಿಡುವಿಲ್ಲದೆ ದುಡಿದರೂ ಅವರ ಹೊಟ್ಟೆ ತುಂಬುವುದಿಲ್ಲ. ವ್ಯವಸಾಯದಿಂದ ನಾಲ್ಕು ತಿಂಗಳಿಗಾಗುವ ದವಸ ಉಳಿಯುವುದಿಲ್ಲ. ಸಾಲ ಸೋಲ ಕಂದಾಯ ಕಾಣಿಕೆಗಳಿಗಾಗಿ ರೈತ ತೆರಬೇಕಾದುದಕ್ಕೆ ಕೊನೇ ಮೊದಲೇ ಇಲ್ಲ. ಪರಿಣಾಮವಾಗಿ ಸಾಹುಕಾರರ ಆಶ್ರಯವಿಲ್ಲದೆ ರೈತ ಸ್ವತಂತ್ರವಾಗಿ ಬದುಕುವಂತೆಯೇ ಇಲ್ಲ. ಸಮಯದಲ್ಲಿ ನಾಲ್ಕು ಸೇರು ರಾಗಿ ಕೊಟ್ಟು, ಸುಗ್ಗಿಯಲ್ಲಿ ನಾಲ್ಕು ಬಳ್ಳ ವಾಪಸು ಪಡೆಯುವವರು ಸಾಹುಕಾರರು. ಎಲ್ಲ ಕಾರಣಗಳೂ ಸೇರಿ ರೈತ ದಿನದಿನಕ್ಕೆ ಅಸ್ಥಿಪಂಜರವಾಗುತ್ತಿದ್ದಾನೆ.

ಒಟ್ಟಿನಲ್ಲಿ, ಇಂದಿನ ಕಳಸಾಪುರವೆಂದರೆ ಕೊಳಕಿನ ಕೊಂಪೆ, ಬಡತನದ ಬೀಡು, ಅಜ್ಞಾನದ ಆಗರ, ಕೃತ್ರಿಮ ಮೋಸಗಳ ತೌರೂರು ಎಂದು ಹೆಸರು ಪಡೆದಿದೆ.

ಚಿಕ್ಕಮಗಳೂರು ಸಬ್ ಡಿವಿಜನ್ ಆಫೀಸಿನ ಹೆಡ್ ಗುಮಾಸ್ತೆ ರಾಮಣ್ಣನವರು ತಮ್ಮ ಕೊಠಡಿಯಲ್ಲಿ ಹಾಯಾಗಿ ಕುಳಿತು ಇನ್ನೊಬ್ಬ ಗುಮಾಸ್ತರೊಡನೆ ಹೊಸದಾಗಿ ಬಂದಿದ್ದ. "ಹುಡುಗ ಆಫೀಸರ" ವಿಚಾರವಾಗಿ ಹರಟೆ ಹೊಡೆಯುತ್ತಿದ್ದರು ಆಗ ಆ ಆಫೀಸರಿಂದ ಅವರಿಗೆ ಕರೆ ಬಂದಿತು. ರಾಮಣ್ಣನವರು ಜಗ್ಗನೆ ಎದ್ದು, ಹಣೆಯ ಮೇಲಿದ್ದ ಕನ್ನಡಕವನ್ನು ಮೂಗಿನ ಮೇಲೆ ಇಟ್ಟು ಅಂಗಿ ಪೇಟಗಳನ್ನು ಸರಿಪಡಿಸಿಕೊಂಡು ಆಫೀಸು ರೂಮಿಗೆ ಹೋದರು. ಅಲ್ಲಿ ಇಪ್ಪತ್ತನಾಲ್ಕು ವಯಸ್ಸಿನ ಅವರ "ಹುಡುಗ ಆಫೀಸರು" ಗಂಭೀರವಾಗಿ ಕುಳಿತಿದ್ದರು. ರಾಮಣ್ಣನವರು ಅವರಿಗೆ ಕೈಮುಗಿದು ವಿನೀತರಾಗಿ ನಿಂತುಕೊಂಡರು.

"ನೀವು ಕಳಸಾಪುರ ನೋಡಿದ್ದೀರ?" ಎಂದರು ಸಬ್ ಡಿವಿಜನ್ ಅಧಿಕಾರಿಗಳು.

"ನೋಡಿದ್ದೇನೆ, ಮಹಾಸ್ವಾಮಿ" ಎಂದರು ರಾಮಣ್ಣನವರು.

"ಅಲ್ಲಿನ ಜನ ಹೇಗೆ ?"

"ಶುದ್ಧ ತರಳೆಗಳು" ಎಂದು ರಾಮಣ್ಣನವರು ಒಂದೇ ಮಾತಿನಲ್ಲಿ ಉತ್ತರ ಕೊಟ್ಟರು. ಕೇಳಿ ಹುಡುಗ ಅಧಿಕಾರಿ ಒಮ್ಮೆ ನಿಟ್ಟುಸಿರು ಬಿಟ್ಟರು.

ಅಧಿಕಾರಿ—ಕಳಸಾಪುರಕ್ಕೆ ಬಸ್ ಸೌಕರ್ಯವಿದೆಯೆ ?

ಗುಮಾಸ್ತರು—ಇದೆ. ಬೆಳಗ್ಗೆ ಇಲ್ಲಿಂದ ಹೊರಟು ಹನ್ನೊಂದು ಘಂಟೆಯ ಹೊತ್ತಿಗೆ ಅಲ್ಲಿಗೆ ತಲಪುತ್ತದೆ.

ಅಧಿಕಾರಿ—ಹಾಗಾದರೆ, ನಾಳೆ ಕಳಸಾಪುರಕ್ಕೆ ಹೋಗಬೇಕು.

ಗುಮಾಸ್ತರು—ಪ್ರೋಗ್ರಾಂ ಕಳಿಸಲೆ ?

ಅಧಿಕಾರಿ—ಬೇಡ.

ಗುಮಾಸ್ತರು—ಅಪ್ಪಣೆ.

ಅಧಿಕಾರಿ—ನೀವೂ ಹೊರಡಬೇಕು.

ಗುಮಾಸ್ತರು—ಅಪ್ಪಣೆ.

ರಾಮಣ್ಣನವರು ತಮ್ಮ ಕೋಣೆಗೆ ಹೋಗುತ್ತ, "ಮೊದಲೇ ಕಳಸಾಪುರದಂಥ ತರಳೆ ಊರಿಗೆ ಹೊರಟಿದಾರಲ್ಲ! ಯಾರು ಯಾರಿಗೆ ಏನೇನು ಗ್ರಹಚಾರ ಕಾದಿದೆಯೋ" ಎಂದು ಚಿಂತಿಸಿದರು.

ಮಾರನೆಯ ದಿನ ಚಿಕ್ಕಮಗಳೂರಿನಿಂದ ಬಸ್ಸು ಹೊರಟಾಗ "ಹುಡುಗ ಆಫೀಸರು" "ಮುದುಕ ಗುಮಾಸ್ತ"ರೊಡನೆ ಕಳಸಾಪುರಕ್ಕೆ ಪ್ರಯಾಣ ಮಾಡಿದರು. ಅಷ್ಟು ಚಿಕ್ಕವಯಸ್ಸಿನಲ್ಲೇ ಅಷ್ಟೊಂದು ವಿದ್ಯೆ ಕಲಿತು, ಅಂತಹ ದೊಡ್ಡ ಅಧಿಕಾರದಲ್ಲಿದ್ದರೂ ತಮ್ಮ ಆಫೀಸರು ಹ್ಯಾಟು ಬೂಟುಗಳನ್ನು ಬಿಟ್ಟು ಪಂಚೆ ರುಮಾಲು ಉಪಯೋಗಿಸುತ್ತಿದ್ದುದನ್ನು ನೋಡಿ ರಾಮಣ್ಣನವರಿಗೆ ಒಂದು ರೀತಿಯ ಸಮಾಧಾನವಾಯಿತು. ನಮ್ಮ ನಾಡಿನ ಆಚಾರ ನಡೆನುಡಿ ಪುನರುಜ್ಜೀವಿತವಾಗುವ ಆಸೆ ಇನ್ನೂ ಇರುವುದೆಂದು ಅವರು ಭಾವಿಸಿದರು.

ಇಜ್ಜಲಿನಿಂದ ನಡೆಯುತ್ತಿದ್ದ ಆ ಬಸ್ಸು ಘಂಟೆಗೆ ನಾಲ್ಕು ಮೈಲಿಯಂತೆ ಸಾಗುತ್ತಿತ್ತು. ಎಂಜಿನ್ನಿನ ಶಬ್ದವೋ ಕಿವಿ ಒಡೆಯುತ್ತಿತ್ತು. ಇಪ್ಪತ್ತು ನಾಲ್ಕು ಜನ ಕುಳಿತುಕೊಳ್ಳಲು ಅವಕಾಶವಿದ್ದ ಆ ಬಸ್ಸಿನಲ್ಲಿ ಐವತ್ತು ಜನ ಕುಳಿತಿದ್ದರು. ಜನ ಅಸಾಧ್ಯ ಗದ್ದಲ ಮಾಡುತ್ತಿದ್ದರು.

" ಇದೇನು ಇಷ್ಟು ಭರ್ತಿ ? " ಎಂದು ಮುಂದಿನ ಸೀಟಿನಲ್ಲಿ ಕುಳಿತಿದ್ದ ಆಫೀಸರು ಗುಮಾಸ್ತರನ್ನು ಕೇಳಿದರು.

" ಇವತ್ತು ಜಾವಗಲ್ ಸಂತೆ " ಎಂದರು ರಾಮಣ್ಣನವರು.

" ಜಾವಗಲ್, ಹಾಸನ ಜಿಲ್ಲೆಗೆ ಸೇರಿದೆಯಲ್ಲವೆ ? "

" ಹೌದು "

" ಅಲ್ಲಿಗೂ ಒಂದು ಸಲ ಹೋಗಬೇಕು " ಎಂದುಕೊಂಡರು ಆ ಅಧಿಕಾರಿಗಳು. ರಾಮಣ್ಣನವರಿಗೆ ಆ ಮಾತು ಅರ್ಥವಾಗಲಿಲ್ಲ.

ಬಸ್ಸಿನಲ್ಲಿ ಬರುತ್ತ ಎರಡೂ ಕಡೆಗಳಲ್ಲಿ ಸೊಂಪಾಗಿ ಬೆಳೆದಿದ್ದ ಪೈರು ಪಚ್ಚೆಗಳನ್ನೂ, ಕೆರೆ ಕುಂಟೆಗಳನ್ನೂ, ಬೆಟ್ಟಗುಡ್ಡಗಳನ್ನೂ ನೋಡಿ ಆ ತರುಣ ಅಧಿಕಾರಿಯ ಮುಖ ಆನಂದದಿಂದ ಹೊಳೆಯಿತು.

"ಇಂದಿಗೂ ನಮ್ಮ ದೇಶ ಸ್ವರ್ಣಭೂಮಿಯಾಗಿಯೇ ಇದೆಯಲ್ಲವೇ ?" ಎಂದು ಅವರು ಪಕ್ಕದಲ್ಲಿ ಕುಳಿತಿದ್ದ ರಾಮಣ್ಣನವರನ್ನು ಕೇಳಿದರು.

ಯಾವುದೋ ಯೋಚನೆಯಲ್ಲಿ ಮುಳುಗಿದ್ದ ರಾಮಣ್ಣನವರಿಗೆ ಈ ಮಾತುಗಳು ಸರಿಯಾಗಿ ಅರ್ಥವಾಗಲಿಲ್ಲ.

" ಸ್ವರ್ಗಸದೃಶವಾದ ಈ ದೇಶದಲ್ಲಿದ್ದೂ ಜನ ಎಷ್ಟು ಹೀನವೆಶೆಯಲ್ಲಿ ದ್ದಾರೆ ? ಇಂತಹ ಜನರಿರುವ ದೇಶ ಹೇಗೆ ತಾನೆ ಮುಂದುವರಿದೀತು ? ನಾವು ಮತ್ತೊಮ್ಮೆ ಮನುಷ್ಯತ್ವವನ್ನು ಗಳಿಸಿಕೊಂಡೇವೆ ? ನಮ್ಮ ಭಾರತ ದೇಶ ವಿಶ್ವದಲ್ಲಿ ಮತ್ತೊಮ್ಮೆ ತಲೆಯೆತ್ತಿ ನಿಲ್ಲುವಂತಾಗುತ್ತದೆಯೆ ?" ಎಂದು ಮುಂತಾಗಿ ಆ ತರುಣ ಅಧಿಕಾರಿಯು ಯೋಚಿಸುತ್ತಿದ್ದನು.

ಇದ್ದಕ್ಕಿದ್ದಹಾಗೇ ಆತನ ಯೋಚನೆಗೆ ಭಂಗಬಂದಿತು. ರಂಗನಗಿರಿಯ ಕಣಿವೆಯಲ್ಲಿ ಬಸ್ಸು ಕೆಟ್ಟುಹೋಗಿ ನಿಂತುಬಿಟ್ಟಿತು. ಅದು ಬೇಗ ಸರಿಯಾಗುವ ಸೂಚನೆ ಕಂಡುಬರಲಿಲ್ಲವಾದುದರಿಂದ ಆ ಅಧಿಕಾರಿ ರಸ್ತೆಯಲ್ಲೇ ನಡೆದು ಹೊರಟರು. ಗುಮಾಸ್ತರೂ ಅವರನ್ನು ಹಿಂಬಾಲಿಸಿದರು. ಅವರು ಕಳಸಾಪುರದ ಸ್ಥಿತಿಗತಿಗಳ ವಿಚಾರವನ್ನು ಮಾತಾಡುತ್ತಾ ಕಣಿವೆಯ ಹಳ್ಳದವರೆಗೂ ನಡೆದುಬಂದರು.

ಅಲ್ಲಿ ಎತ್ತಿನ ಗಾಡಿಯೊಂದು ನಿಂತಿತ್ತು. ಎಂಭತ್ತು ವರ್ಷದ ವೃದ್ಧ ಸುಮಂಗಲಿಯೊಬ್ಬಳು ಹತ್ತಿರದ ಗಿಡದ ನೆರಳಿನಲ್ಲಿ ಕುಳಿತಿದ್ದಳು. ಒಬ್ಬನು ಆ ಗಾಡಿಯನ್ನು ಸರಿಮಾಡುವುದರಲ್ಲಿ ನಿರತನಾಗಿದ್ದನು.

ಆ ತರುಣ ಅಧಿಕಾರಿ ಅಲ್ಲಿಗೆ ಬಂದವನೇ "ಅಜ್ಜಿ, ನೀವು ಎಲ್ಲಿಗೆ ಹೋಗಬೇಕು?" ಎಂದು ಕೇಳಿದನು.

"ಕಳಸಾಪುರಕ್ಕೆ" ಎಂದು ಆ ಮುದುಕಿಯು ಉತ್ತರಕೊಟ್ಟಳು.

"ನಿಮ್ಮೂರು ಕಳಸಾಪುರವೆ?"

"ಕಳಸಾಪುರ ನನ್ನ ತೌರೂರು. ನಮ್ಮ ಮನೆಯಿರುವುದು ಮರಳಿಯಲ್ಲಿ."

ಆ ತರುಣ ಅಧಿಕಾರಿಯು ಆ ವೃದ್ಧೆಯ ಹತ್ತಿರ ಕುಳಿತನು. ಗುಮಾಸ್ತೆ ರಾಮಣ್ಣನವರು ಇದೇನು ವಿಚಿತ್ರ ಎಂದು ಆಶ್ಚರ್ಯಪಟ್ಟರು.

"ಅಜ್ಜಿ, ನಿಮ್ಮ ಹೆಸರೇನಜ್ಜಿ?"

"ಪಾತಮ್ಮ." ಆ ಹೆಸರು ಕೇಳಿ ತರುಣನು ಹಿಗ್ಗಿಹೋದನು.

"ಮುತ್ತಾರಿ ನಿಮ್ಮ ಅಣ್ಣನೇ?" ಎಂದು ಅವನು ಕೇಳಿದನು.

ಮುತ್ತಾರಿಯ ವಿಚಾರವನ್ನು ತಿಳಿದಿರುವ ಈ ಹುಡುಗ ಯಾರು? ಮುದುಕಿಯು ಆತನನ್ನು ಆಶ್ಚರ್ಯದಿಂದ ನೋಡಿ "ಹೌದು, ನಾನು ಮುತ್ತಾರಿಯ ತಂಗಿ. ಆದರೆ ನೀನು ಯಾರಪ್ಪ?" ಎಂದು ಕೇಳಿದಳು.

"ನಮ್ಮ ಅಜ್ಜಿಯ ಊರೂ ಕಳಸಾಪುರ" ಎಂದನು ಆ ತರುಣ.

"ನಿಮ್ಮ ಅಜ್ಜಿ ಯಾರು?" ಪಾತಜ್ಜಿಯು ಆಶ್ಚರ್ಯದಿಂದ ಕೇಳಿದಳು.

"ಲಕ್ಷ್ಮಿ"

"ಲಕ್ಷ್ಮಿ! ....ಯಾವ ಲಕ್ಷ್ಮಿ?"

"ಸೀತಾರಾಮುವಿನ ತಂಗಿ ಲಕ್ಷ್ಮಿ"

"ನಮ್ಮ ರಾಮಚಂದ್ರನ ಮೊಮ್ಮಗನೆ ನೀನು?"

"ಹೌದು ಅಜ್ಜಿ."

"ನಿನ್ನ ಹೆಸರೇನು ಮಗು?"

"ರಾಮಚಂದ್ರ."

ಪಾತಜ್ಜಿಯ ಸಂತೋಷಕ್ಕೆ ಎಲ್ಲೆಯೇ ಇಲ್ಲ! ರಾಮಚಂದ್ರನನ್ನು ಹತ್ತಿರ ಕರೆದು ಕೂರಿಸಿಕೊಂಡು ಅವನ ಅಜ ಅಜ್ಜಿಯರ ವಿಚಾರವಾಗಿ

ಎಷ್ಟೋ ಪ್ರಶ್ನೆಗಳನ್ನು ಕೇಳಿದರು ತಾವು ಹುಡುಗರಾಗಿದ್ದಾಗ ನಡೆದ ಎಷ್ಟೋ ಸಂಗತಿಗಳನ್ನು ತಿಳಿಸಿ, ಕಳೆದುಹೋದ ಆ ಸುಖದ ಕಾಲವನ್ನು ನೆನೆದು ಕಣ್ಣೀರು ಸುರಿಸಿದರು.

"ಇಲ್ಲಿಂದ ಹೊರಟು ಹೋದಮೇಲೆ ರಾಮಚಂದ್ರ ಲಕ್ಷ್ಮಿಯರ ಸಮಾಚಾರವೇ ತಿಳಿಯಲಿಲ್ಲ. ಮತ್ತೆ ಅವರನ್ನು ನೋಡುವ ಅದೃಷ್ಟ ನಮಗಿಲ್ಲದೇ ಹೋಯಿತು" ಎಂದರು ಪಾತಜ್ಜಿ.

ರಾಮಚಂದ್ರನು ಲಕ್ಷ್ಮಿಯೊಡನೆ ಮೈಸೂರಿನಲ್ಲಿ ನಿಂತುದು, ಅವರಿಗೆ ಮೂರು ಗಂಡು ಎರಡು ಹೆಣ್ಣು ಮಕ್ಕಳಾದುದು, ಕಳಸಾಪುರದಲ್ಲಿ ತಾವು ಕಳೆದ ಬಾಲ್ಯದ ವಿಚಾರವನ್ನು ಯಾವಾಗಲೂ ಹೇಳುತ್ತಿದ್ದುದು, ಅವರು ಕಾಲವಾದುದು-ಮುಂತಾಗಿ ಎಲ್ಲ ವಿಚಾರವನ್ನೂ ಆ ತರುಣನು ತಿಳಿಸಿದನು.

"ನಿನ್ನ ತಂದೆ ಎಲ್ಲಿದ್ದಾರೆ ?" ಎಂದರು ಪಾತಜ್ಜಿ.

"ಮೈಸೂರಿನಲ್ಲಿ" ಎಂದನು ರಾಮಚಂದ್ರ.

"ಅವರ ಹೆಸರೇನು ಮಗು ?"

"ಸೀತಾರಾಮಯ್ಯ."

"ಅಣ್ಣನ ಹೆಸರನ್ನೇ ಇಟ್ಟಿದ್ದಾಳೆ" ಎಂದುಕೊಂಡರು ಪಾತಜ್ಜಿ.

"ಇದೇನು? ಇತ್ತ ಕಡೆ ನಡೆದು ಬರುತ್ತಿರುವಿಯಲ್ಲ ಮಗು ?"

ರಾಮಚಂದ್ರನು ತಾನು ಕಳಸಾಪುರಕ್ಕೆ ಹೊರಟುದನ್ನೂ, ದಾರಿಯಲ್ಲಿ ಬಸ್ಸು ಕೆಟ್ಟುಹೋದುದನ್ನೂ ತಿಳಿಸಿದನು.

"ಕಳಸಾಪುರವನ್ನು ನೋಡುವುದಕ್ಕೆ ಬಂದೆಯ ?"

"ಹೌದಜ್ಜಿ."

ಪಾತಜ್ಜಿಯ ಕಣ್ಣಿನಲ್ಲಿ ನೀರು ತುಂಬಿತು. ಕಂಠ ಬಿಗಿದು ಬಂತು. "ಕಳಸಾಪುರದಲ್ಲಿ ಏನಿದೆ ಎಂದು ನೋಡಲು ಬಂದೆ ?" ಎಂದರು.

ರಾಮಚಂದ್ರನು ಸ್ವಲ್ಪಹೊತ್ತು ಮೌನವಾಗಿದ್ದನು. ಪಾತಜ್ಜಿಯೇ ಮಾತಿಗೆ ಮೊದಲು ಮಾಡಿದರು.

"ನಾವು ಹುಡುಗರಾಗಿದ್ದಾಗ ಕಳಸಾಪುರ ಸ್ವರ್ಗದ ಹಾಗೆ ಇತ್ತು. ಹಾಲಿಲ್ಲ ಎಂದ ಮಕ್ಕಳಿರಲಿಲ್ಲ. ಅನ್ನವಿಲ್ಲ ಎಂದ ಜನವಿರಲಿಲ್ಲ. ಎಷ್ಟು ಸ್ನೇಹ, ಎಂಥ ವಿಶ್ವಾಸ! ಆಗ ಹಾಗಿತ್ತು. ಆದರೆ ಈಗ? ನರಕಕ್ಕಿಂತ

ಕೇಡಾಗಿದೆ. ಚಿನ್ನದಂಥ ಊರು ಹೀಗಾದುದನ್ನು ನೋಡಿ ದುಃಖಪಡುವು ದಕ್ಕೆ ನಾನೊಬ್ಬಳು ಬದುಕಿದ್ದೇನೆ."

ಪಾತಜ್ಜಿ ಮಕ್ಕಳಂತೆ ಬಿಕ್ಕಿಬಿಕ್ಕಿ ಅತ್ತರು.

"ಅಜ್ಜಿ, ಅಳಬೇಡಿ. ಕಳಸಾಪುರ ಪುನಃ ಮೊದಲಿನ ಹಾಗೇ ಆಗು ತ್ತದೆ" ಎಂದನು ರಾಮಚಂದ್ರ.

"ಕಳಸಾಪುರ ಮುಂಚಿನಂತೆ ಆಗುತ್ತದೆಯೆ? ಅದನ್ನು ನಾನು ನೋಡು ತ್ತೀನೆಯೆ?" ಎಂದರು ಪಾತಜ್ಜಿ, ದುಃಖವನ್ನು ಸ್ವಲ್ಪ ಸಹಿಸಿಕೊಂಡು.

"ದೇವರ ದಯವಿದ್ದರೆ ನೀವೇ ನೋಡುತ್ತೀರಿ; ಕಳಸಾಪುರ ಮೊದಲಿ ಗಿಂತಲೂ ಚೆನ್ನಾದೀತು" ಎಂದನು ರಾಮಚಂದ್ರ.

"ಅಂತಹ ಕಾಲ ಬೇಗ ಬರಲಿ" ಎಂದು ಪಾತಜ್ಜಿ ಹರಕೆ ಹಾಕಿದರು.

ಅಷ್ಟರಲ್ಲಿ ಬಸ್ಸು ಬಂತು. ರಾಮಚಂದ್ರನು ಪಾತಜ್ಜಿಯನ್ನೂ ಬಸ್ಸಿ ನಲ್ಲಿ ಕೂರಿಸಿಕೊಂಡು ಬಂದು ಕಳಸಾಪುರದಲ್ಲಿ ಮಧ್ಯಾಹ್ನ ಹನ್ನೆರಡು ಗಂಟೆಗೆ ಇಳಿದನು.

ಪಾತಜ್ಜಿಯೊಡನೆ ರಾಮಚಂದ್ರನು ಕಳಸಾಪುರವನ್ನು ಹೊಕ್ಕನು. ಊರಲ್ಲಿ ಎತ್ತನೋಡಿದರೂ ಕಸದ ಗುಡ್ಡೆ, ಮುಳ್ಳು ಗಿಡಗಳು; ಬಿದ್ದ ಮನೆ ಗಳು. ಬೀದಿಯಲ್ಲಿ ಆಡುತ್ತಿದ್ದ ಒಂದೆರಡು ಮಕ್ಕಳನ್ನು ನೋಡಿದನು. ಕಡ್ಡಿ ಯಂತಹ ಕೈಕಾಲುಗಳು, ಗಡಿಗೆಯಂತಹ ಹೊಟ್ಟೆ. ಆ ಊರಿನ ಜನರಿಗೋ ಮುಖದಲ್ಲಿ ಕಳೆಯೇ ಇಲ್ಲ. ಕೊಳಕು ಬಟ್ಟೆಯನ್ನು ಹಾಕಿಕೊಂಡು ನೋಡು ವುದಕ್ಕೆ ಅತ್ಯಂತ ಅಸಹ್ಯವಾಗಿದ್ದರು.

ಒಂದು ಮನೆಯ ಮುಂದೆ ಮೂರು ನಾಲ್ಕು ಸಣ್ಣಸಣ್ಣ ಹುಡುಗರು ಆಟವಾಡುತ್ತಿದ್ದರು. ಆಗ ಮನೆಯೊಳಗಿನಿಂದ ಒಬ್ಬ ಗಂಡಸು ಹೊರಗೆ ಬಂದು ಅವರನ್ನು ನೋಡಿ, ಅವರಲ್ಲಿ ಒಬ್ಬ ಹುಡುಗನನ್ನು ಹಿಡಿದುಕೊಂಡು ಚೆನ್ನಾಗಿ ಹೊಡೆಯತೊಡಗಿದನು. ಆ ಮಗು ಗಟ್ಟಿಯಾಗಿ ಅಳುತ್ತಿತ್ತು.

"ಇನ್ನು ಮೇಲೆ ಅವರ ಮನೆಯ ಹುಡುಗರ ಜೊತೆ ಆಟ ಆಡುವುದಕ್ಕೆ ಹೋಗುತ್ತೀಯೇನೊ?" ಎಂದು ಆತ ಅಬ್ಬರಿಸಿ ಏಟು ಕೊಡುತ್ತಲೇ ಇದ್ದನು.

"ಇಲ್ಲ. ಇನ್ನು ಹೋಗುವುದಿಲ್ಲ" ಎಂದು ಆ ಮಗು ಅಳುವಿನ ಮಧ್ಯೆ ಹೇಳಿತು. ಹಾಗಾದರೂ ಆತನು ಆ ಹುಡುಗನನ್ನು ಹೊಡೆಯುವು ದನ್ನು ನಿಲ್ಲಿಸಲಿಲ್ಲ.

ಪಾತಜ್ಜಿ ಇದನ್ನು ನೋಡಿ, ಅಲ್ಲಿ ಹೋಗಿ ಆ ಮಗುವನ್ನು ತಂದೆಯ ಕೈಯಿಂದ ಬಿಡಿಸಿಕೊಂಡು "ಕಾಳ, ನಿನಗೇನು ಹುಚ್ಚು ಹಿಡಿಯಿತೆ ? ಮಗುವನ್ನು ಹೀಗೆ ಸಾಯಿಸುತ್ತೀಯಲ್ಲ ?" ಎಂದರು.

"ಕೊಡಲೀ ಕಾವು ಕುಲಕ್ಕೆ ಮೃತ್ಯು ಅನ್ನುವ ಹಾಗೆ, ಇವನು ನಮಗೆ ಆಗದವರ ಮಕ್ಕಳ ಜೊತೆಗೇ ಹೋಗಿ ಕುಣಿಯುವನಲ್ಲ ?" ಎಂದನು ಕಾಳ.

"ಇಷ್ಟು ಕೆಟ್ಟರೂ ಈ ಜನಕ್ಕೆ ಬುದ್ಧಿ ಬಂದಿಲ್ಲವಲ್ಲ. ದೇವರೇ, ಎಂದು ಇವರ ದೃಷ್ಟಿಗೆ ಬೆಳಕು ಕೊಡುತ್ತೀಯೋ" ಎಂದುಕೊಂಡನು ರಾಮಚಂದ್ರ.

"ಕಾಳ, ಬೆಳೆಯುವ ಮಕ್ಕಳಲ್ಲಿ ಈ ದ್ವೇಷವನ್ನು ಬಿತ್ತಬೇಡಿ. ನಿಮ್ಮ ದಮ್ಮಯ್ಯ" ಎಂದಳು ಪಾತಜ್ಜಿ. ಮತ್ತು ಅಲ್ಲೇ ಕುಳಿತು ಮಕ್ಕಳಂತೆ ಅತ್ತಳು. ಕಾಳನು ನಾಚಿಕೊಂಡು ಒಳಗೆ ಹೋದನು.

## — ಮುಂಬೆಳಗು —

ರಾಮಚಂದ್ರನು ಪಾತಜ್ಜಿಯನ್ನು ಮನೆಗೆ ಬಿಟ್ಟು ಮುಸಾಫರಖಾನೆಗೆ ಬಂದನು. ಅಷ್ಟರಲ್ಲಿ ರಾಮಣ್ಣನವರು ಅದನ್ನು ಚೊಕ್ಕಟ ಮಾಡಿಸಿದ್ದರು.

ಪಾತಜ್ಜಿ ತನ್ನ ಸೋದರಳಿಯ ಶಂಕರಯ್ಯನ ಮನೆಗೆ ಬಂದಿದ್ದರು. ರಾಮಚಂದ್ರನನ್ನು ಕರೆದು ಚೆನ್ನಾಗಿ ಉಪಚಾರ ಮಾಡಬೇಕೆಂದು ಅವರಿಗೆ ಆಸೆ. ಆದರೆ ಶಂಕರಯ್ಯನ ಮನೆ ಸುಧಾಮನ ಮನೆಯಾಗಿತ್ತು.

ಪಕ್ಕದ ಮನೆಯಿಂದ ಅಚ್ಚೇರು ಅಕ್ಕಿ ಸಾಲ ತಂದು ಅನ್ನಮಾಡಿ ರಾಮಚಂದ್ರನನ್ನೂ ರಾಮಣ್ಣನವರನ್ನೂ ಕರೆದು ಊಟಕ್ಕೆ ಬಡಿಸಿದರು. ಪಾತಜ್ಜಿಯ ಎಣೆಯಿಲ್ಲದ ವಾತ್ಸಲ್ಯದಿಂದ ಅನ್ನ ಗೊಡ್ಡುಸಾರಿನ ಆ ಊಟ ರಾಮಚಂದ್ರನಿಗೆ ಅಮೃತದಂತೆ ಹಿತವಾಯಿತು.

ಪಾತಜ್ಜಿ ಎಲ್ಲರ ಮನೆಗೂ ಹೋಗಿ, ರಾಮಚಂದ್ರನ ಮೊಮ್ಮಗ ರಾಮಚಂದ್ರ ಮೈಸೂರಿನಿಂದ ಕಳಸಾಪುರ ನೋಡುವುದಕ್ಕೆ ಬಂದಿರುವುದನ್ನು ತಿಳಿಸಿದಳು. ಯಾರಿಗೂ ಈ ರಾಮಚಂದ್ರನ ವಿಚಾರದಲ್ಲಿ ಆಸಕ್ತಿಯಾಗಲೀ, ಆ ರಾಮಚಂದ್ರನ ವಿಚಾರದಲ್ಲಿ ಅಭಿಮಾನವಾಗಲೀ ಇರಲಿಲ್ಲ. ಪಾತಜ್ಜಿಯ ಪುರಾಣ ಕೇಳುವುದಕ್ಕೆ ಅವರು ಸಿದ್ಧರಾಗಿರಲಿಲ್ಲ.

ಆ ರಾತ್ರಿ ಹತ್ತು ಘಂಟೆಯಾದರೂ ರಾಮಚಂದ್ರನಿಗೆ ನಿದ್ದೆ ಬರಲಿಲ್ಲ. ಹೊರಗೋ ಬೇಕಾದ ಹಾಗೆ ಬೆಳದಿಂಗಳು ; ತಣ್ಣಗೆ ಬೀಸುವ ಗಾಳಿ. ಊರೊಳಗೆ ತಿರುಗಾಡಿಕೊಂಡು ಬರಲು ಹೊರಟನು.

ಆ ಹೊತ್ತಿನಲ್ಲಿ ಬ್ರಾಹ್ಮಣರ ಕೇರಿಯವರೆಲ್ಲ ಮಲಗಿದ್ದರು. ರೈತರ ಕೇರಿಯಲ್ಲೂ ನಿಶ್ಶಬ್ದ. ಕಳಸಾಪುರ, ಅವಸಾನ ಸ್ಥಿತಿಯಲ್ಲಿರುವ ಕಳಸಾಪುರ, ದೀರ್ಘನಿದ್ರೆಯಲ್ಲಿ ಮಲಗಿರುವಂತೆ ಅವನಿಗೆ ಭಾಸವಾಯಿತು. ಆ ನೀರವತೆ ಅವನ ಎದೆಗೆ ಶೂಲದಂತೆ ಚುಚ್ಚುತ್ತಿತ್ತು.

ಆಗ, ಆ ಮೌನವನ್ನು ಸೀಳಿ ಮೃದಂಗದ ಶಬ್ದ ಕೇಳಿಬಂತು. ರಾಮಚಂದ್ರನ ಹೃದಯ ಕುಣಿಯತೊಡಗಿತು. ಅವನು ಆ ಶಬ್ದ ಬಂದ ಕಡೆ ಹೊರಟನು.

ರೈತರ ಕೇರಿಯಲ್ಲಿ, ಒಂದು ಮುರುಕು ಮನೆಯ ಜಗುಲಿಯ ಮೇಲೆ ಕೆಲವು ಹುಡುಗರು ಸೇರಿದ್ದರು ಅಲ್ಲಿ, ಮಸಿಹಿಡಿದ ಒಂದು ಲಾಟೀನು ಬೆಳಕಿನಲ್ಲಿ ಅವರು ಯಕ್ಷಗಾನ ಕಲಿಯುತ್ತಿದ್ದರು. ರಾಮಚಂದ್ರನು ಅಲ್ಲಿಹೋದನು.

"ಯಾರು ?" ಎಂದನು ಒಬ್ಬ ಹುಡುಗ.

ರಾಮಚಂದ್ರನು ಮಾತಾಡಲಿಲ್ಲ. ಹೋಗಿ ಜಗುಲಿಯ ಮೇಲೆ ಒಂದು ಕಡೆ ಕುಳಿತುಕೊಂಡನು. ಹುಡುಗರು ಅವನಿಗೆ ಒಂದು ಈಚಲು ಚಾಪೆ ಹಾಸಿಕೊಟ್ಟರು.

"ಯಕ್ಷಗಾನ ಕಲಿಯುತ್ತೀದ್ದೀರೊ ?"

"ಹೌದು ಬುದ್ಧಿ"

"ಕಲಿಸುವವರು ಯಾರು ?"

"ಒಬ್ಬರು ಐನೋರು ಅವ್ರೆ, ಅವರು ಕಲಿಸುತ್ತಾರೆ"

"ಅವರೆಲ್ಲಿ ?"

"ಇನ್ನೇನು ಬಂದಾರು"

ಕೆಲವರು ಹುಡುಗರು ಸ್ಲೇಟು ಬಳಪಗಳನ್ನು ತಂದಿದ್ದರು. ಅದನ್ನು ನೋಡಿ ರಾಮಚಂದ್ರನು "ಓದು ಬರಹ ಕಲಿಯುತ್ತಿರುವಿರಿ ?" ಎಂದನು.

"ಹೌದು ಬುದ್ಧಿ"

"ನಿಮ್ಮ ಐನೋರ ಹೆಸರೇನು ?"

"ಸೀತಾರಾಮಪ್ಪನೋರು ಅಂತ ಬುದ್ಧಿ. ಆಗೋ ಅವರೇ ಬಂದರು"

ಬಿಳಿಯ ಖಾದಿಯ ಬಟ್ಟೆಯನ್ನು ಹಾಕಿಕೊಂಡು ಬಂದು ಆ ತರುಣನನ್ನು ನೋಡಿ ರಾಮಚಂದ್ರನಿಗೆ ಭರವಸೆ ಮೂಡಿತು. ಅವನನ್ನು ಜೊತೆಯಲ್ಲಿ ಕರೆದುಕೊಂಡು ರಾಮಚಂದ್ರನು ಮುಸಾಫರಖಾನೆಗೆ ಬಂದನು.

ಸೀತಾರಾಮುವೂ ಕಳಸಾಪುರದ ಹುಡುಗ. ಹೈಸ್ಕೂಲು ಪರೀಕ್ಷೆ

ಮಾಡಿಕೊಂಡು ಊರಿನಲ್ಲಿ ಬಂದು ನಿಂತಿದ್ದನು. ತನ್ನ ಊರಿನ ಜನ ಬುದ್ಧಿವಂತರಾಗಬೇಕು, ವಿದ್ಯಾವಂತರಾಗಬೇಕು, ತನ್ನ ಊರು ಐಶ್ವರ್ಯಯುಕ್ತವಾಗಬೇಕು, ಒಗ್ಗಟ್ಟಾಗಬೇಕು, ಎಂಬುದು ಅವನಾಸೆ. ಅದರಿಂದ ರೈತರಿಗೆ ವಿದ್ಯೆ ಕಲಿಸಲು ಒಂದು ಶಾಲೆಯನ್ನು ತೆರೆದಿದ್ದನು. ಶ್ಯಾನುಭೋಗರು ಪಟೇಲರಾದಿಯಾಗಿ ಊರಿನ ಹಿರಿಯರೆಲ್ಲ ಸೀತಾರಾಮುವಿನ ಈ ಪ್ರಯತ್ನಕ್ಕೆ ವಿರೋಧಿಗಳು. ಆದರೆ, ಕೆಲವು ತರುಣರು ಊರಿನ ಪಾರ್ಟಿ ಪಕ್ಷಗಳನ್ನು ಲೆಕ್ಕಿಸದೆ ಅಲ್ಲಿ ಬಂದು, ಒಟ್ಟು ಸೇರಿ ಓದಿ ಬರೆಯುವರು. ಅವರೂ ತಮ್ಮ ಊರು ಚೆನ್ನಾಗಬೇಕೆಂದು ಹಂಬಲಿಸುತ್ತಿದ್ದರು.

ಸೀತಾರಾಮುವು ತಾನು ಮಾಡುತ್ತಿರುವ ಕೆಲಸವನ್ನೂ ಅದಕ್ಕಿರುವ ಅಡ್ಡಿ ಆತಂಕಗಳನ್ನೂ ವಿವರವಾಗಿ ತಿಳಿಸಿದನು.

" ನೀವು ತರುಣರು, ವಿದ್ಯಾವಂತರು. ನಿಮ್ಮ ಊರನ್ನು ಮೊದಲಿನಂತೆ ಸ್ವಯಂಪೂರ್ಣ ಸ್ಥಿತಿಗೆ ತರಬೇಕೆಂದು ಹಂಬಲಿಸುತ್ತಿರುವುದು ಈ ಊರಿನ ಪುಣ್ಯ. ಈಗ ಈ ಗ್ರಾಮದಲ್ಲಿ ಏನೇನು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕೆಂಬುದನ್ನು ಮೊದಲು ನಾವು ಪರಿಶೀಲಿಸಿ ಒಂದು ಯೋಜನೆಯನ್ನು ಸಿದ್ಧಗೊಳಿಸಿಕೊಂಡು ಕ್ರಮವರಿತು ಕೆಲಸ ಮಾಡೋಣ" ಎಂದರು ಸಬ್ ಡಿವಿಜನ್ ಅಧಿಕಾರಿಗಳು.

' ನಮ್ಮೂರಿನಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ. ಮೂರು ನಾಲ್ಕು ಭಾವಿಗಳು ಬೇಕು. ಊರು ಶುಚಿಯಾಗಿರಲು ಪಂಚಾಯಿತಿಯನ್ನು ಸರಿಯಾಗಿ ವ್ಯವಸ್ಥೆಗೊಳಿಸಬೇಕು. ಆಸ್ಪತ್ರೆ ಬೇಕು. ಪಾಠಶಾಲೆ ಬೇಕು. ವ್ಯವಸಾಯದ ಜೊತೆಗೆ ಜನರಿಗೆ ಗೃಹಕೈಗಾರಿಕೆಗಳನ್ನು ಕಲಿಸಬೇಕು. ಜನರಲ್ಲಿರುವ ಪಾರ್ಟಿ ವೈಷಮ್ಯಗಳು ಹೋಗಿ ಎಲ್ಲರೂ ಒಟ್ಟಾಗಿರುವಂತಾಗಬೇಕು. ವ್ಯಾಜ್ಯಗಳೆಲ್ಲಾ ಊರಿನಲ್ಲೆ ಪಂಚಾಯಿತರ ಮೂಲಕ ತೀರ್ಮಾನವಾಗಬೇಕು. ಊರಿನವರೆಲ್ಲರೂ ಒಂದು ಕಡೆ ಕಲೆತು ಕೆಲಸ ಮಾಡಲು ಒಂದು ಪಂಚಾಯಿತಿ ಕಟ್ಟಡ ಬೇಕು. ಉತ್ತಮ ರೀತಿಯಲ್ಲಿ ವ್ಯಸಾಯ ಮಾಡಲು ಸೌಕರ್ಯಗಳೂ ತಿಳುವಳಿಕೆಯೂ ಬೇಕು. ಹೀಗೆ ನಮಗೆ ಬೇಕಾದುದು ಬೇಕಾದಷ್ಟು ಇದೆ' ಎಂದನು ಸೀತಾರಾಮು.

" ಇವೆಲ್ಲವೂ ಆಗಬೇಕಾದ ಕೆಲಸಗಳೇ. ನಮ್ಮ ಅಜ್ಜನವರು ನನಗೆ ಯಾವಾಗಲೂ ಹೇಳುತ್ತಿದ್ದರು. 'ರಾಮು, ನೀನು ದೊಡ್ಡವನಾದ ಮೇಲೆ

ಕಳಸಾಪುರಕ್ಕೆ ಹೋಗಿ ಆ ಊರನ್ನು ಅಭಿವೃದ್ಧಿಗೆ ತರುವುದಕ್ಕೆ ಶ್ರಮಿಸ ಬೇಕು', ಎಂದು. ತಮ್ಮ ಬಾಲ್ಯದ ಸಂಗತಿಗಳನ್ನು ಹೇಳಿದಾಗಲೆಲ್ಲಾ ನನಗೆ ಹೀಗೆ ತಿಳಿಸುತ್ತಿದ್ದರು. ನಮ್ಮ ಅಜ್ಜಿಯ ಅಣ್ಣನ ಹೆಸರೂ ಸೀತಾರಾಮು ಎಂದು ಇತ್ತಂತೆ. ನಮ್ಮ ಅಜ್ಜನವರೂ ಸೀತಾರಾಮುವೂ ಎರಡು ದೇಹ ಒಂದು ಪ್ರಾಣ ಎನ್ನುವಂತೆ ಇದ್ದರಂತೆ. ನಾವೂ ಹಾಗೆಯೇ ಇರೋಣ. ನಮ್ಮ ಹಳ್ಳಿಗಳ ಉದ್ಧಾರಕ್ಕಾಗಿ ದುಡಿಯೋಣ.'' ಎಂದನು ರಾಮಚಂದ್ರ.

'ನಾವು ಏನಾದರೂ ಒಂದು ಒಳ್ಳೆಯ ಕೆಲಸ ಮಾಡೋಣವೆಂದರೆ ದೊಡ್ಡವರಿಂದ ಅದಕ್ಕೆ ತಕ್ಕಷ್ಟು ಬೆಂಬಲವಿಲ್ಲ' ಎಂದು ಸೀತಾರಾಮು ನೊಂದು ಹೇಳಿದನು.

ರಾಮಚಂದ್ರನು 'ನನಗೂ ದೊಡ್ಡವರಲ್ಲಿ ಹೆಚ್ಚು ಭರವಸೆಯಿಲ್ಲ. ಹುಡುಗರನ್ನು ಸರಿಯಾದ ರೀತಿಯಲ್ಲಿ ತರಪೇತು ಮಾಬೇಕು. ಅವರಲ್ಲಿ ವಿಶಾಲವಾದ ಭಾವನೆ ಮೂಡುವಂತೆ ಶಿಕ್ಷಣ ದೊರೆಯಬೇಕು. ಆಗ ನಮ್ಮ ಹಳ್ಳಿಗಳು ಏಳಿಗೆ ಹೊಂದುವುದು ಖಂಡಿತ' ಎಂದನು.

ಸೀತಾರಾಮುವು ಒಂದು ಸಿಟ್ಟುಸಿರಿಟ್ಟು ನಮ್ಮ ಹಳ್ಳಿಗಳು ಹಿಂದಿ ನಂತೆ ಪುನಃ ಉನ್ನತ ಸ್ಥಿತಿಗೆ ಬರುವುವೆ?" ಎಂದು ಕೇಳಿದನು.

ರಾಮಚಂದ್ರನು ಸೀತಾರಾಮುವಿನ ಕೈ ಹಿಡಿದುಕೊಂಡು 'ಅದರಲ್ಲಿ ಸಂಶಯವೇ ಇಲ್ಲ. ಹಿಂದಿಗಿಂತಲೂ ಉನ್ನತ ಸ್ಥಿತಿಗೆ ಬರುವವೆಂಬ ಭರ ವಸೆ ನನಗಿದೆ. ಈಗ ವಿಶ್ವವೇ ಒಂದು ಸಂಸಾರದಂತಾಗುತ್ತಿದೆ. ಹಳ್ಳಿ ಗಳು ಆ ವಿಶ್ವ ಸಂಸಾರದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಇಂದಲ್ಲ ನಾಳೆ ನಮ್ಮ ದೇಶ ಸ್ವಾತಂತ್ರವನ್ನು ಗಳಿಸಿ ವಿಶ್ವದಲ್ಲಿ ತಲೆಯೆತ್ತಿ ನಿಲ್ಲುತ್ತದೆ. ನಮ್ಮ ನಾಡು ಪುನಃ ಸ್ವರ್ಣ ಭೂಮಿಯಾಗುತ್ತದೆ. ಈಗಿನ ಕತ್ತಲೆ ಹರಿದು ಮುಂ ಬೆಳಕು ತೋರಿಯೇ ತೋರುತ್ತದೆ' ಎಂದು ಭಾವೋದ್ರೇಕದಿಂದ ಹೇಳಿದನು.

ಆಗ, ಮಂಗಳಕರವಾದ ಪ್ರಭಾತವನ್ನು ಸೂಚಿಸಿ 'ಕೋ, ಕೋ ಕೋ' ಎಂದು ಕೋಳಿಗಳು ಕೂಗಿದವು. ರಾತ್ರಿಯೆಲ್ಲಾ ಅವರು ಬೆಳದಿಂಗಳಿ ನಲ್ಲಿ ಕುಳಿತು ಮಾತಾಡುತ್ತಿದ್ದರು! ಮಾತಾಡುತ್ತಿರುವಂತೆಯೇ ಮೂಡಲಲ್ಲಿ ಮುಂಬೆಳಕಿನ ಹೊಂಬಣ್ಣವನ್ನು ನೋಡಿ ಅವರು ಆನಂದದಿಂದ ಹೊಸ ದಿನವನ್ನು ಸ್ವಾಗತಿಸಿದರು.

**ಸಂಪೂರ್ಣ**